ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## (ಪರಿಷ್ಕೃತ – 2023)

## ಭಾಗ – 1

# 6

## ಆರನೆಯ ತರಗತಿ

@KTBS
NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6£Ã Cqg¸, ªÄ¯Ã±gA, ¨AU¼ÆgÄ - 560 003

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1ರಿಂದ 4ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5ರಿಂದ 10ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಪಠ್ಯಕ್ರಮ–2005ರಂತೆ ಗಣಿತವು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದನ್ನು ಬಿಟ್ಟು ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತೆ ಮಾಡಬೇಕು. ಆದು ಸಹಕಾರೀ ಕಲಿಕೆಗೂ ಪೂರಕವಾಗಿರಬೇಕು. ಬಹುತೇಕ ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಗಣಿತವೆಂದರೆ ಭಯ.

NOT TO BE REPUBLISHED © KTBS

ಈ ಭಯವನ್ನು ಹೋಗಲಾಡಿಸಲು ವಿನೋದಗಣಿತ, ಕಥೆಗಳು, ಒಗಟುಗಳು, ಗೂಢಪ್ರಶ್ನೆಗಳು ಮುಂತಾದ ಅಂಶಗಳನ್ನು ಸೇರಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಚಟುವಟಿಕೆಯ ಮೂಲಕ ಅಥವಾ ಕುತೂಹಲ ಕೆರಳಿಸುವ ಕಥೆಗಳ ಮೂಲಕ ಪ್ರತಿಯೊಂದು ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪ್ರಾಚೀನ ಭಾರತದ ಶ್ರೇಷ್ಠ ಗಣಿತ ಶಾಸ್ತ್ರಜ್ಞರ ಕೊಡುಗೆಗಳನ್ನು ಸೂಕ್ತ ಸಂದರ್ಭಗಳಲ್ಲಿ ಕೊಡಲಾಗಿದೆ.

ನಾವಿಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವಿಸುತ್ತಿದ್ದೇವೆ. ಕಳೆದ ಅರ್ಧಶತಮಾನದಲ್ಲಿ ಮಾನವನ ಅದ್ಭುತ ಕನಸುಗಳು ನನಸಾಗಿ ಮಾನವ ತನ್ನ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದ್ದಾನೆ. ಜೀವನವನ್ನು ಸುಗಮವನ್ನಾಗಿಸಲು ಅತ್ಯಾವಶ್ಯಕವಾದ ಸಕಲ ವಸ್ತುಗಳನ್ನು ತಯಾರಿಸಿದ್ದಾನೆ. ಹಾಗೆಯೇ ಭೋಗ ವಿಲಾಸ ಜೀವನಕ್ಕೆ ಮಾರುಹೋಗಿ ಇಂದು ಮೂಲವಿಜ್ಞಾನವನ್ನೇ ಮರೆಯುವ ಹಂತಕ್ಕೆ ಮಾನವ ತಲುಪಿರುವುದು ಒಂದು ದುರಂತವೇ ಆಗಿದೆ. ಭೋಗ ಜೀವನಕ್ಕೆ ಪುಷ್ಟಿಯನ್ನು ಕೊಡುವ ತಂತ್ರಜ್ಞಾನದತ್ತ ಇಂದು ನಮ್ಮ ಒಲವಿದ್ದು ಮೂಲವಿಜ್ಞಾನದತ್ತ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಈಗಲಾದರೂ ನಮ್ಮ ಯುವಕ ಯುವತಿಯರು ವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಸಂಪ್ರದಾಯವನ್ನು ಮುಂದುವರಿಸುವರೆಂದು ಆಶಿಸಿ ಮುಂದೆ ಬರುವ ನೂತನ ವಿಜ್ಞಾನ ಪುಸ್ತಕಗಳಲ್ಲಿ ಅವರಿಗೆ ಯೋಚಿಸುವುದು, ಆಳವಾದ ಅಧ್ಯಯನ ಮಾಡುವುದು, ಪ್ರಯೋಗಗಳನ್ನು ಮಾಡುವುದು ಹಾಗೂ ಅವರಲ್ಲಿ ಸೃಜನ ಶೀಲತೆಯನ್ನು ಬೆಳೆಸುವತ್ತ ಒಲವನ್ನುಂಟುಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಕಲಿಕೆ ಚಟುವಟಿಕೆಗಳ ಸುತ್ತಲೂ ಹೆಣೆಯುವಂತೆ ಮಾಡಲು ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಗುರುವೃಂದದವರ ಸಹಕಾರವು ಅತ್ಯಾವಶ್ಯಕ.

6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದ್ದು, ಎನ್‌ಸಿಎಫ್ 2005 ಹಾಗೂ ಕೆಸಿಎಫ್ 2007 ಇವುಗಳಲ್ಲಿ ಕಂಡುಬರುವ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಂತವಾಗಿ ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹೊಂದಿಸಲಾಗಿದೆ. ಅವುಗಳೊಂದಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ರಚಿಸಲಾಗಿದೆ. ಆದರೆ ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳು ಪುಸ್ತಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

©KTBS NOT TO BE REPUBLISHED

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು.

# ಪರಸ್ಪರ

ಆರನೆಯ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಒಂದು ಹಿನ್ನೆಲೆ ಇದೆ. ಕರ್ನಾಟಕ ಸರ್ಕಾರದ ಒಂದು ಪ್ರಮುಖ ಅಂಗಸಂಸ್ಥೆಯಾಗಿರುವ ಕರ್ನಾಟಕ ಪಠ್ಯಪುಸ್ತಕ ಸಂಘವು ಪ್ರಕಟಿಸಿರುವ ಈ ಪುಸ್ತಕವು 2005ರಲ್ಲಿ ಜಾರಿಗೊಳಿಸಲ್ಪಟ್ಟ ರಾಷ್ಟ್ರೀಯ ಪಠ್ಯಕ್ರಮವನ್ನು ಆಧರಿಸಿ ಕರ್ನಾಟಕ ಸರ್ಕಾರದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ನಡೆಸಿದ ವಿವಿಧ ಕಾರ್ಯಾಗಾರಗಳು ಮತ್ತು ತರಬೇತಿಗಳಿಂದ ಹೊರಹೊಮ್ಮಿದ ನೂತನ ಪಠ್ಯಕ್ರಮದ ಆಧಾರವಾಗಿದೆ.

ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ಆ ಪಾಠದ ಬಗೆಗೆ ಪರಿಚಯವನ್ನು ನೀಡಲಾಗಿದೆ. ಪಾಠದ ವೇಳೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾದ ಸಾಮರ್ಥ್ಯಗಳನ್ನೂ ಕೊಡಲಾಗಿದೆ. ಚರಿತ್ರೆಯ ಪಾಠಗಳಲ್ಲಿ ಸಣ್ಣ ಪ್ರಶ್ನೆ ಅಥವಾ ಸನ್ನಿವೇಶ ಅಥವಾ ಕುತೂಹಲ ಮೂಡಿಸುವ ಪರಿಚಯಾತ್ಮಕ ದೃಷ್ಟಿಯಿಂದ ಪಾಠಗಳನ್ನು ಪ್ರಾರಂಭಿಸಲಾಗಿದೆ. ಚರಿತ್ರೆಯ ಪಾಠಗಳ ನಡುವೆ ಚಿತ್ರಗಳನ್ನು ನೀಡಲಾಗಿದ್ದು, ಇವುಗಳು ಪಾಠಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿ ಆಗಿದೆ. ಭೂಪಟಗಳು ವಿದ್ಯಾರ್ಥಿಗಳ ಕುತೂಹಲವನ್ನು ಹೆಚ್ಚಿಸುವಂತೆ ಶಿಕ್ಷಕರು ಪ್ರಯತ್ನಿಸಬೇಕಾಗಿದೆ. ಇತಿಹಾಸದ ವಿಭಾಗದಲ್ಲಿನ ಪಾಠಗಳ ಪ್ರಾರಂಭದಲ್ಲಿ ನೀಡಿರುವ ರಾಜವಂಶಗಳ ಚಿಹ್ನೆಗಳನ್ನು ಶಿಕ್ಷಕರು ಪಾಠಕ್ಕೆ ಪೂರಕ ಸಾಮಾಗ್ರಿಯಾಗಿ ಬಳಸಿಕೊಳ್ಳಲು ವಿಪುಲ ಅವಕಾಶಗಳಿವೆ. ಪಾಠಗಳ ಕೊನೆಯಲ್ಲಿ ಪಾಠಕ್ಕೆ ಸಂಬಂಧಿಸಿದ ಕಾಲಗಣನೆ ನೀಡಲಾಗಿದೆ. ಶಿಕ್ಷಕರು ಇದರ ಬಗ್ಗೆ ಪ್ರಶ್ನೆಗಳನ್ನು ಕೇಳಬಾರದೆಂಬುದು ನಮ್ಮ ಆಶಯ.

ಪಾಠಗಳ ಕೊನೆಯಲ್ಲಿ ಚಟುವಟಿಕೆಗಳನ್ನು ನೀಡಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಇವುಗಳನ್ನು ಪಾಠಗಳಿಗೆ ಪೂರಕವಾಗಿರುವಂತೆ ನೀಡಲಾಗಿದೆ. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಮತ್ತು ಹೆಚ್ಚಿನ ತಿಳುವಳಿಕೆಗಾಗಿ ಚೌಕಗಳಲ್ಲಿ ಆ ಪಾಠಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗಿದೆ. ಇವುಗಳಲ್ಲಿಯೂ ವಿಷಯಗಳ ಕುರಿತಾಗಿ ಲಿಖಿತ ಅಥವಾ ಮೌಖಿಕ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶಗಳಿರುವುದಿಲ್ಲ. ಪಾಠಗಳ ಕೊನೆಯಲ್ಲಿ ನೀಡಿರುವ 'ಚರ್ಚಿಸಿ' ಎಂಬ ವಿಷಯದಡಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಸಂವಾದ ನಡೆಸಬಹುದು ಮತ್ತು ಇದನ್ನು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತಪ್ರತಿಭೆಗೆ ವೇದಿಕೆಯಾಗುವಂತೆ ಪರಿವರ್ತಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಪೌರನೀತಿಯ ಪಾಠಗಳನ್ನು ಎರಡು ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಈ ಪಾಠಗಳಲ್ಲಿನ ಚಿತ್ರಗಳನ್ನು ಪಾಠಗಳಿಗೆ ಪೂರಕವಾಗಿ ಬಳಸಿಕೊಳ್ಳುವುದು ಶಿಕ್ಷಕರ ಕರ್ತವ್ಯವಾಗಿದೆ ಮತ್ತು ಅದು ಪಠ್ಯಪುಸ್ತಕ ರಚನಾ ಸಮಿತಿಯ ಆಶಯವು ಹೌದು. ಭೂಗೋಳಶಾಸ್ತ್ರ ವಿಭಾಗದಲ್ಲಿನ ಪಾಠಗಳಲ್ಲಿ ಹೆಚ್ಚಿನ ಮಾಹಿತಿಗಳನ್ನು ಚೌಕದಲ್ಲಿ ನೀಡಲಾಗಿದೆ ಮತ್ತು ಭೂಗೋಳಶಾಸ್ತ್ರದಲ್ಲಿ ವಿಶೇಷ ಆಸಕ್ತಿಯನ್ನು ಮೂಡಿಸುವ ಸಲುವಾಗಿ ಅವಶ್ಯವಿದ್ದೆಡೆ ಭೂಪಟಗಳು ಮತ್ತು ಚಿತ್ರಗಳನ್ನು ನೀಡಲಾಗಿದೆ. ನೈಜ ಕಲಿಕಾಂಶದ ಆರಂಭ ಹಾಗೂ ಅಂತ್ಯವನ್ನು ಸೂಚಿಸಲು ಐಕಾನ್‌ಗಳನ್ನು ಬಳಸಲಾಗಿದೆ.

ಪೌರನೀತಿ ಪಾಠಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದೆಡೆ ಸೂಕ್ತ ಚಿತ್ರಗಳನ್ನು ಅಳವಡಿಸಲಾಗಿದೆ. ಮಕ್ಕಳಲ್ಲಿ ಮೌಲ್ಯವೃದ್ಧಿಯ ನಿಟ್ಟಿನಲ್ಲಿ 'ರಾಷ್ಟ್ರೀಯ ಭಾವೈಕ್ಯ' ಮತ್ತು 'ನಮ್ಮ ರಕ್ಷಣಾ ಪಡೆಗಳು' ಪಾಠಗಳನ್ನು ರಚಿಸಲಾಗಿದೆ.

ಒಂದು ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರಿಗೆ ಲಭ್ಯವಿರುವ ಅವಧಿಯ ಆಧಾರದ ಮೇರೆ ಪಾಠಗಳನ್ನು ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಪುಸ್ತಕದಲ್ಲಿ ತಪ್ಪುಗಳು ಇರದ ರೀತಿಯಲ್ಲಿ ಪರಿಶೀಲಿಸಲಾಗಿದೆ. ಹೀಗಿದ್ದರೂ ತಪ್ಪುಗಳು, ಮಾಹಿತಿ ಕೊರತೆ, ಅಥವಾ ಸಾಮಾನ್ಯ ಕೊರತೆಗಳು ಪುಸ್ತಕದಲ್ಲಿ ಕಂಡು ಬಂದಲ್ಲಿ, ವಿದ್ಯಾರ್ಥಿಗಳು, ಅವರ ಪೋಷಕರು ಶಿಕ್ಷಕರಿಗೆ ತಿಳಿಸಿದಲ್ಲಿ ಪುಸ್ತಕವನ್ನು ಮತ್ತಷ್ಟು ಉತ್ತಮಗೊಳಿಸಲು ಮತ್ತು ತನ್ಮೂಲಕ ಅದರ ಗುಣಮಟ್ಟವನ್ನು ಹೆಚ್ಚಿಸಲು ನೆರವಾದಲ್ಲಿ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ.

ಪಠ್ಯಪುಸ್ತಕದ ರಚನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಹಕರಿಸಿದ ಸಮಿತಿಯ ಸದಸ್ಯರು, ಪರಿಶೀಲಕರು, ಸಂಪಾದಕ ಮಂಡಳಿಯ ಸದಸ್ಯರು ಮತ್ತು ಕರ್ನಾಟಕ ಪಠ್ಯಪುಸ್ತಕ ಸಂಘದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಾವು ವಂದಿಸುತ್ತೇವೆ.

ಡಾ. ಎಸ್. ನರೇಂದ್ರ ಪ್ರಸಾದ್
**ಅಧ್ಯಕ್ಷರು**
**ಪಠ್ಯಪುಸ್ತಕ ರಚನಾ ಸಮಿತಿ**

© KTBS NOT TO BE REPUBLISHED

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು** : **ಡಾ. ಎಸ್. ನರೇಂದ್ರ ಪ್ರಸಾದ್,** ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜೆ.ಎಸ್.ಎಸ್. ಮಹಿಳಾ ಕಾಲೇಜು (ಸ್ವಾಯತ್ತ), ಸರಸ್ವತಿಪುರಂ, ಮೈಸೂರು.

**ಸದಸ್ಯರು** : **ಡಾ. ಪಿ. ಸತೀಶ್‌ಕುಮಾರ್ ಶೆಟ್ಟಿ,** ಇತಿಹಾಸ ವಿಭಾಗ, ಸಹಪ್ರಾಧ್ಯಾಪಕರು, ಬೆಸೆಂಟ್ ಸಂಜೆ ಕಾಲೇಜು, ಮಂಗಳೂರು.

**ಡಾ. ಬಾಳಾಸಾಹೇಬ ಲೋಕಾಪುರ,** ಭೂಗೋಳಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬಾಗಲಕೋಟೆ.

**ಶ್ರೀ ಶಂಕರ ಬಸವಣ್ಣೆಪ್ಪ ಕ್ಯಾಸ್ತಿ,** ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಣ್ಣಿಕೇರಿತೋಟ, ಹಿಡಕಲ್, ರಾಯಭಾಗ, ಬೆಳಗಾವಿ ಜಿಲ್ಲೆ.

**ಶ್ರೀ ಹುಸೇನ ಷರೀಫ,** ಸಹಶಿಕ್ಷಕರು, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮುಸ್ಟೂರು, ಜಗಳೂರು, ದಾವಣಗೆರೆ ಜಿಲ್ಲೆ.

**ಚಿತ್ರ ಕಲಾವಿದರು** : **ಶ್ರೀ ತಾರಾನಾಥ ಕೈರಂಗಳ,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಂಚಿ ಕೊಳ್ನಾಡು, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.

**ಪರಿಶೀಲಕರು** : **ಶ್ರೀ ಎಂ. ರಾಘವೇಂದ್ರ ಪ್ರಭು,** ಇತಿಹಾಸ ಪ್ರಾಧ್ಯಾಪಕರು (ನಿವೃತ್ತ), ಅನಂತ ಪ್ರಸಾದ, ದಂಬೆಲ್, ಅಶೋಕನಗರ ಅಂಚೆ, ಮಂಗಳೂರು.

**ಶ್ರೀ ಪಿ. ಮಲ್ಲಪ್ಪ,** ಭೂಗೋಳಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ಜೆ.ಎಸ್.ಎಸ್. ಬಡಾವಣೆ, ಮೈಸೂರು.

**ಸಂಪಾದಕ ಮಂಡಳಿ** : **ಡಾ. ಎಂ.ವಿ. ಶ್ರೀನಿವಾಸ್,** ಇತಿಹಾಸ ಪ್ರೊಫೆಸರ್ (ನಿವೃತ್ತ), ಹೆಚ್. ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು.

**ಡಾ. ಆರ್.ಎಲ್.ಎಂ. ಪಾಟೀಲ್,** ರಾಜ್ಯಶಾಸ್ತ್ರ ಪ್ರೊಫೆಸರ್ (ನಿವೃತ್ತ), 1105, ಪೂರ್ಣಪ್ರಜ್ಞಾನಗರ, ಉತ್ತರ ಹಳ್ಳಿ, ಬೆಂಗಳೂರು.

**ಡಾ. ಈಶ್ವರಪ್ಪ** ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಮುಖ್ಯ ಸಂಯೋಜಕರು** : **ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

## ಸಲಹೆ ಮತ್ತು ಮಾರ್ಗದರ್ಶನ

: **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪ ನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

: **ಶ್ರೀಮತಿ ಎಸ್.ಎನ್. ಲೀಲಾವತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

NOT TO BE REPUBLISHED @KTBS

# ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ. ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫.

©KTBS NOT TO BE REPUBLISHED

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ**

ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಟಿ. ಆರ್. ಚಂದ್ರಶೇಖರ್,** ಸಮಾಲೋಚಕರು, 4ನೇ ಹಣಕಾಸು ಆಯೋಗ, 3ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.

**ಸದಸ್ಯರು :**

**ಡಾ. ಬಸವರಾಜ್,** ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**ಡಾ. ಎನ್.ಆರ್. ಹಡಪದ,** ಭೂಗೋಳಶಾಸ್ತ್ರ ಉಪನ್ಯಾಸಕರು, ಶ್ರೀ ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜು, ಬಿ.ಅರಳೀಕಟ್ಟಿ, ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

**ಶ್ರೀ ಹಂ. ಗು. ರಾಜೇಶ್,** ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡೇರಿ, ಬೆಂಗಳೂರು ದಕ್ಷಿಣ ತಾ. ಬೆಂಗಳೂರು–562130.

**ಶ್ರೀ ಪಿ. ಎಂ. ಕಾಗೀನಕರ್,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಚಂಗವಾರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ. ರಾಜಲಕ್ಷ್ಮಿ. ಎಸ್,** ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ವಿಭಾಗ) ಶ್ರೀರಾಂಪುರಂ, ಬೆಂಗಳೂರು, ಉತ್ತರ ವಲಯ–2, ಬೆಂಗಳೂರು ಉತ್ತರ ಜಿಲ್ಲೆ.

**ಶ್ರೀಮತಿ. ಶಾಹಿನಾ ಬೇಗಂ,** ಸಹ ಶಿಕ್ಷಕರು, ಸ್ತ್ರೀಸಮಾಜ, ಶೇಷಾದ್ರಿಪುರಂ ಪ್ರೌಢಶಾಲೆ, ಬೆಂಗಳೂರು, ಉ.ವಲಯ–2.

**ಶ್ರೀ ಡಿ.ಎನ್ ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ಜಿಲ್ಲೆ.

### ಉನ್ನತ ಪರಿಶೀಲನ ಸಮಿತಿ

| | |
|---|---|
| **ಡಾ. ಎಂ. ಎಸ್. ತಳವಾರ್**<br>#777, 'ಜೇನುಗೂಡು',<br>5ನೇ ಬ್ಲಾಕ್, ಬನಶಂಕರಿ 6ನೇ ಘಟ್ಟ,<br>ಮೆಟ್‌ಕಲ್ ಪಾಳ್ಯ, ಬೆಂಗಳೂರು–60. | **ಡಾ. ಅಮರೇಶ ಯತಗಲ್,** ಸ.ಪ್ರಾ.<br>ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,<br>ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ,<br>ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ –586105. |
| **ಶ್ರೀ ಮಂಜುನಾಥ ಐಲಿ**<br>ಇತಿಹಾಸ ಉಪನ್ಯಾಸಕರು,<br>ಸರಕಾರಿ ಪದವಿ ಪೂರ್ವ ಕಾಲೇಜು,<br>ಪೋಲಿಸ್ ಕಾಲೋನಿ, ರಾಯಚೂರು – 584101. | **ಡಾ. ನಂದೀಶ್ವರ**<br>ಪ್ರಾಂಶುಪಾಲರು,<br>ಎಸ್.ಎಂ.ಆರ್. ಪಿ.ಯು. ಕಾಲೇಜು,<br>ಕಳ್ಳಂಬೆಳ್ಳ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ – 572125. |

### ಸಲಹೆ ಮತ್ತು ಮಾರ್ಗದರ್ಶನ :

| | |
|---|---|
| **ಶ್ರೀ «Ãg t J¸ï. dw**<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),<br>ಬೆಂಗಳೂರು. | **ಶ್ರೀ PÆÃzAqgÁªÀAiÀÄ. J£ï**<br>ಉಪ ನಿರ್ದೇಶಕರು,<br>ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.),<br>ಬೆಂಗಳೂರು. |

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಸುಮಾ ಬಿ.ಕೆ.,** ಹಿ.ಸ.ನಿ., ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

NOT TO BE REPUBLISHED ©KTBS

## ಪುನರ್ ಪರಿಷ್ಕರಣೆ ಕುರಿತು

2014ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು 2017–18ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು 2021ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ–ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಮುಖ್ಯವಾಗಿ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಲ್ಲಿ (1) ಯಾವುದೇ ಜಾತಿ, ಧರ್ಮ, ಪಂಥ, ಸಮುದಾಯಗಳಿಗೆ ಅಥವಾ ವ್ಯಕ್ತಿಗಳಿಗೆ ಅಪಮಾನವಾಗುವ ಆಕ್ಷೇಪಾರ್ಹ ಅಂಶಗಳಿರದಂತೆ ಎಚ್ಚರ ವಹಿಸಬೇಕು (2) ವಿಷಯಗಳನ್ನು ಕ್ರಮಬದ್ಧವಾಗಿ, ಕಾಲಪಟ್ಟಿಗನುಗುಣವಾಗಿ ಕೊಡಬೇಕು (3) ಅನಗತ್ಯ ವಿಷಯಗಳು ತುಂಬಿತುಳುಕಾಡುವ ಮಾಹಿತಿಕೋಶವಾಗಿಸದೆ ಜ್ಞಾನಕೋಶಗಳಾಗಿ ಮಾಡಬೇಕು (4) ಸ್ವಹಿತಾಸಕ್ತಿಯ ಯಾವ ಸಿದ್ಧಾಂತಗಳಿಗೂ ಜಾಗ ಕೊಡಕೂಡದು (5) ಅರ್ಧಸತ್ಯ, ಅಸತ್ಯ, ಉತ್ಪ್ರೇಕ್ಷೆ, ನಿರ್ಣಯ ಮುಂತಾದವನ್ನು ಕೈಬಿಟ್ಟು ಅಧಿಕೃತ ಆಧಾರಗಳಿರುವ ಸಂಗತಿಗಳನ್ನಷ್ಟೇ ಮುಂದಿಡಬೇಕು (6) ಎಲ್ಲ ವಿಷಯಗಳಿಗೆ ತಕ್ಕ ಪ್ರಾತಿನಿಧ್ಯ ಕೊಡಬೇಕು (7) ಐತಿಹಾಸಿಕ ಉಪೇಕ್ಷಿತ ಸಂಗತಿಗಳನ್ನು, ಅವುಗಳ ಪ್ರಾಮುಖ್ಯಕ್ಕನುಗುಣವಾಗಿ ಪಠ್ಯಗಳಲ್ಲಿ ತರಬೇಕು (8) ಎಲ್ಲ ಬಗೆಯ ತಪ್ಪುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಗ್ಗಿಸಬೇಕು – ಎಂಬುದು ನಮ್ಮ ಆಶಯವಾಗಿತ್ತು. ಸಮಾಜವಿಜ್ಞಾನ ಪಠ್ಯವು ನಮ್ಮ ವಿದ್ಯಾರ್ಥಿಗಳನ್ನು ದೇಶದ ಬಗ್ಗೆ ಪ್ರೀತಿ ಅಭಿಮಾನಗಳುಳ್ಳ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಬೇಕೇ ಹೊರತು ದೇಶದ ಬಗ್ಗೆ, ದೇಶದೊಳಗಿನ ಹಲವು ಜಾತಿ, ಸಮುದಾಯ, ಭಾಷೆ, ಪಂಥಗಳ ಬಗ್ಗೆ ತಾತ್ಸಾರಭಾವವನ್ನು ತಾಳುವಂಥ ಜನಾಂಗವನ್ನು ಸೃಷ್ಟಿಸಬಾರದು ಎಂಬುದು ಪರಿಷ್ಕರಣೆಯ ಪ್ರತಿಹಂತದಲ್ಲೂ ನಾವು ವಹಿಸಿದ್ದ ಎಚ್ಚರಿಕೆಯಾಗಿತ್ತು.

©KTBS NOT TO BE REPUBLISHED

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (20014ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

@KTBS NOT TO BE REPUBLISHED

**ವೀರಣ್ಣ ಎಸ್. ಜತ್ತಿ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫.

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

# ಪುನರ್ ಪರಿಷ್ಕರಣ ಸಮಿತಿ

## ಅಧ್ಯಕ್ಷರು

**ಶ್ರೀ ರೋಹಿತ್ ಚಕ್ರತೀರ್ಥ,** ಸದಸ್ಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

## ಸದಸ್ಯರು

**ಡಾ. ರಾಜರಾಮ್ ಹೆಗಡೆ,** ನಿವೃತ್ತ ವಿಭಾಗ ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

**ಡಾ. ಎನ್. ಸತ್ಯಪ್ರಕಾಶ್,** ನಿವೃತ್ತ ಮುಖ್ಯೋಪಾಧ್ಯಾಯರು, ವಿ.ವಿ.ಎಸ್. ಪ್ರೌಢಶಾಲೆ, ಬೆಂಗಳೂರು.

**ಶ್ರೀ. ರಂಗನಾಥ,** ಪ್ರಾಂಶುಪಾಲರು, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ.

**ಶ್ರೀ. ಬಿ.ಕೆ. ವಾಸುಕಿ,** ಶಿಕ್ಷಕರು, ಭಾರತೀಯ ವಿದ್ಯಾಭವನ ಬಿಬಿಎಂಪಿ ಪಬ್ಲಿಕ್ ಶಾಲೆ, ಬೆಂಗಳೂರು.

**ಡಾ. ಅನಂತಕೃಷ್ಣ ಭಟ್,** ಕೊಡಿಯಾಲಗುತ್ತು, ದ್ವಾರಕ, ಕೊಡಿಯಾಲ್ ಬೈಲ್, ಎರಡನೇ ಅಡ್ಡರಸ್ತೆ, ಮಂಗಳೂರು.

**ಡಾ. ವಿಠ್ಠಲ್ ಪೋತದಾರ,** ಹಿರಿಯ ಸಂಶೋಧನಾ ಸಂಯೋಜಕರು, ದಿ ಮಿಥಿಕ್ ಸೊಸೈಟಿ, ಬೆಂಗಳೂರು.

**ಶ್ರೀ ಕೆ.ಆರ್. ಮಂಜುನಾಥ್,** ಸಹ ಶಿಕ್ಷಕರು, ನ್ಯಾಷನಲ್ ಪ್ರೌಢಶಾಲೆ, ಬೆಂಗಳೂರು.

**ಶ್ರೀಮತಿ ಪಿ. ರಾಧಾ,** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬನಶಂಕರಿ 3ನೇ ಹಂತ, ಬೆಂಗಳೂರು.

**ಶ್ರೀ ಸಂದೀಪ್ ಕುಮಾರ ಪಿ.ಎಲ್.,** ಜಿ.ಪಿ.ಟಿ., ಸ.ಮಾ.ಪ್ರಾ. ಶಾಲೆ, ಸಿದ್ದನಹೊಸಹಳ್ಳಿ, ಬೆಂಗಳೂರು ಉತ್ತರ ವಲಯ–1.

## ಸಲಹೆಗಾರರು

**ಶ್ರೀ ವೀರಣ್ಣ ಎಸ್. ಜತ್ತಿ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

**ಶ್ರೀ ಕೋದಂಡರಾಮಯ್ಯ. ಎನ್,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಶ್ರೀಮತಿ ಸುಮಾ ಬಿ.ಕೆ.,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು.

© KTBS NOT TO BE REPUBLISHED

# ಪರಿವಿಡಿ

N5W7E3


| ಅಧ್ಯಾಯದ ಸಂಖ್ಯೆ | ಇತಿಹಾಸ | ಪುಟ ಸಂಖ್ಯೆ |
|---|---|---|
| 1. | ಭಾರತ – ನಮ್ಮ ಹೆಮ್ಮೆ | 1 |
| 2. | ನಮ್ಮ ಹೆಮ್ಮೆಯ ರಾಜ್ಯ – ಕರ್ನಾಟಕ | 8 |
| 3. | ಮೌರ್ಯರು ಮತ್ತು ಕುಷಾಣರು | 52 |
| 4. | ಗುಪ್ತರು ಮತ್ತು ವರ್ಧನರು | 61 |
| 5. | ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳು | 73 |
| | **ಪೌರನೀತಿ** | |
| 6. | ಪೌರ ಮತ್ತು ಪೌರತ್ವ | 106 |
| 7. | ಪ್ರಜಾಪ್ರಭುತ್ವ | 110 |
| 8. | ಸ್ಥಳೀಯ ಆಡಳಿತ | 115 |
| 9. | ನಮ್ಮ ಸಂವಿಧಾನ | 121 |
| | **ಭೂಗೋಳ** | |
| 10. | ಗ್ಲೋಬ್ ಮತ್ತು ನಕಾಶೆಗಳು | 127 |
| 11. | ಭೂಮಿಯ ಸ್ವರೂಪ | 137 |


©KTBS NOT TO BE REPUBLISHED

## ಇತಿಹಾಸ

# ಅಧ್ಯಾಯ 1 ಭಾರತ – ನಮ್ಮ ಹೆಮ್ಮೆ

N7Z9S9

### ಪಾಠದ ಪರಿಚಯ

ದೇಶದ ಹಿರಿಮೆ ಗರಿಮೆಗಳ ಬಗ್ಗೆ ಅರಿವು ಮೂಡಿಸುವುದು ಶಿಕ್ಷಣದ ಒಂದು ಅತ್ಯವಶ್ಯ ಆಯಾಮ. ಇಂತಹ ಅರಿವು ವಿದ್ಯಾರ್ಥಿಗಳಲ್ಲಿ ದೇಶದ ಕುರಿತು ಹೆಮ್ಮೆ, ಗೌರವವನ್ನು ಮೂಡಿಸುವುದರೊಂದಿಗೆ ಭಾವನಾತ್ಮಕ ಏಕತೆಯನ್ನು ತರಬಲ್ಲದು. ಇದನ್ನು ಗಮನದಲ್ಲಿರಿಸಿ ಭಾರತೀಯರು ವಿವಿಧ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಳು ಮತ್ತು ಎತ್ತಿಹಿಡಿದಿರುವ ಸಾರ್ವಕಾಲಿಕ ಮೌಲ್ಯಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

### ಸಾಮರ್ಥ್ಯಗಳು

1 ಆಧುನಿಕ ಕಾಲದಲ್ಲಿ ಭಾರತದ ಭವ್ಯತೆಯನ್ನು ಇನ್ನಿತರ ಜನಾಂಗಗಳು ತಿಳಿಯುವಂತಾಗಲು ಯುರೋಪಿಯನ್ ವಿದ್ವಾಂಸರು ಹೇಗೆ ಕಾರಣರಾದರು ಎಂಬುದನ್ನು ತಿಳಿಯುವುದು.

2 ಜ್ಞಾನವಿಜ್ಞಾನ ಮತ್ತಿತರ ಕ್ಷೇತ್ರಗಳಲ್ಲಿ ಭಾರತೀಯರು ಮಾಡಿರುವ ಸಾಧನೆಗಳನ್ನು ತಿಳಿದು ದೇಶದ ಬಗ್ಗೆ ಹೆಮ್ಮೆ ಪಡುವುದು.

3 ಭಾರತೀಯರು ವಿಶ್ವನಾಗರಿಕತೆಗೆ ಕೊಟ್ಟಿರುವ ಸಾರ್ವಕಾಲಿಕ ಮೌಲ್ಯಗಳನ್ನು ಗುರುತಿಸಿ, ಪ್ರಚಲಿತ ಸನ್ನಿವೇಶದಲ್ಲಿ ಮಾನವಕುಲಕ್ಕೆ ಇವೆಷ್ಟು ಸಂಗತವಾಗಿದೆ ಎಂಬುದನ್ನು ಅರ್ಥೈಸಿಕೊಳ್ಳುವುದು.

NOT TO BE REPUBLISHED @KTBS

### ಪಾಠಪ್ರವೇಶ



"ಮೇಡಂ, ನಾವೇಕೆ ದೇಶದ ಬಗ್ಗೆ ಹೆಮ್ಮೆಪಡಬೇಕು?" ಇದು ಸತೀಶನ ಸಹಜ ಪ್ರಶ್ನೆ. ಇದಕ್ಕೆ ಶಿಕ್ಷಕಿ ವಿವರವಾಗಿಯೇ ಉತ್ತರ ನೀಡಿದರು :

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ"– 'ತಾಯಿ ಹಾಗೂ ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲಾದುದು'.

ಭಾರತವೂ ಸೇರಿದಂತೆ, ಅನೇಕ ಪುರಾತನ ನಾಗರಿಕತೆಗಳಲ್ಲಿ ಮಾತೃದೇವತೆಯ ಆರಾಧನೆ ಇತ್ತು.

ಅಲೆಮಾರಿ ಜೀವನ ನಡೆಸುತ್ತಿದ್ದ ಆದಿಮಾನವ ಒಂದೆಡೆ ವಾಸಮಾಡಲು ತೊಡಗಿದ ಮೇಲೆ ಗ್ರಾಮ ಜೀವನ ಆರಂಭವಾಯಿತು. ಅದಕ್ಕೆ ಹೊಂದಿಕೊಳ್ಳುತ್ತ ಆತನಿಗೆ ತನ್ನ ಗ್ರಾಮದ ಬಗ್ಗೆ ಮೋಹ ಉಂಟಾಗಿರಬೇಕು; ಆ ನೆಲದ ರಕ್ಷಣೆ ತನ್ನ ಪವಿತ್ರ

ಹೊಣೆ ಎನಿಸಿರಬೇಕು. ಕಾಲ ಸಂದಂತೆ ಗ್ರಾಮಗಳು ಒಂದುಗೂಡಿ ರಾಜ್ಯವಾದಾಗ, ರಾಜ್ಯಗಳು ಬೆರೆತು ಸಾಮ್ರಾಜ್ಯವಾದಾಗ, ದೇಶಭಕ್ತಿ ಮೂರ್ತರೂಪ ತಳೆಯಿತು. ದೇಶಸೇವೆ ಈಶಸೇವೆಗೆ ಸಮವಾಯಿತು. ಹುಟ್ಟಿದ ನೆಲ ತಾಯಿನಾಡಿನ ಸ್ಥಾನಕ್ಕೇರಿತು. ನಾವು ದೇಶದ ಸಾಧನೆಗಳನ್ನು ಅರಿತುಕೊಂಡಾಗ ಅದರ ಬಗ್ಗೆ ಹೆಮ್ಮೆಪಡುವುದು ಸಹಜವಲ್ಲವೆ?

**ಭರತಖಂಡ, ಹಿಂದೂಸ್ತಾನ, ಇಂಡಿಯಾ, ಜಂಬೂದ್ವೀಪ :** ಪ್ರಾಚೀನ ಕಾಲದಿಂದಲೂ ನಮ್ಮ ದೇಶವನ್ನು 'ಭಾರತ' ಎಂಬುದಾಗಿ ಕರೆಯಲಾಗುತ್ತಿತ್ತು. ನಮ್ಮ ದೇಶಕ್ಕೆ 'ಭಾರತ' ಎಂಬ ಹೆಸರು ಹೇಗೆ ಬಂತು ಗೊತ್ತೆ? ಪುರಾಣಗಳ ಪ್ರಕಾರ, ವೃಷಭನಾಥನ ಹಿರಿಯ ಮಗ ಭರತನೆಂಬ ಓರ್ವ ರಾಜನಿದ್ದನಂತೆ. ಭರತನು ಆಳಿದ ನಾಡು 'ಭರತಖಂಡ', 'ಭರತವರ್ಷ'' (ಭಾರತದೇಶ) ಎನಿಸಿತು.

ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಪರ್ಷಿಯಾ ದೇಶದ ಜನರು ಸಿಂಧೂ ನದಿ ಬಯಲಿನ ಜನರೊಂದಿಗೆ ಸಂಪರ್ಕಕ್ಕೆ ಬಂದರು. ಪರ್ಷಿಯನ್ನರು ಅವರನ್ನು 'ಹಿಂದೂ' ಎಂದು ಕರೆದರು. ಮುಂದೆ ಗ್ರೀಕರು ಭಾರತೀಯರೊಂದಿಗೆ ಸಂಪರ್ಕಕ್ಕೆ ಬಂದಾಗ, ಅವರ ಬಾಯಲ್ಲಿ 'ಹಿಂದೂ' ಪದವು 'ಇಂಡು' ಆಯಿತು. ಹಾಗೆಯೇ ಸಿಂಧು ನದಿಯು 'ಇಂಡಸ್' ಆಯಿತು.

ಮಹಮ್ಮದೀಯರ ಆಕ್ರಮಣದೊಂದಿಗೆ 'ಹಿಂದೂ' ಪದ ಮತ್ತೆ ಬಳಕೆಗೆ ಬಂತು. ಅವರು ಈ ದೇಶವನ್ನು ಹಿಂದೂಸ್ತಾನ, ಇಲ್ಲಿಯ ಜನರು ಹಿಂದುಗಳು' ಮತ್ತು ಅವರ ಧರ್ಮ ಹಿಂದೂ ಧರ್ಮ' ಎಂದು ಕರೆದರು. ಆಂಗ್ಲರ ಪ್ರಭಾವದಿಂದ ಪಾಶ್ಚಾತ್ಯರಿಗೆ ಈ ದೇಶ 'ಇಂಡಿಯಾ' ಮತ್ತು ಹಿಂದೂಧರ್ಮವು 'ಹಿಂದೂಯಿಸಂ' ಎನಿಸಿತು.

**ಭಾರತದ ಭವ್ಯತೆಯನ್ನು ತೆರೆದಿಟ್ಟ ಯುರೋಪಿಯನ್ನರು :** ಕೆಲವು ಮಂದಿ ಆಂಗ್ಲ ವಿದ್ವಾಂಸರು ಈ ನೆಲದ ಪ್ರಾಚೀನ ಭವ್ಯತೆಯನ್ನು ಜಗತ್ತಿಗೆ ತೋರಿಸಿಕೊಡಲು ಕಾರಣರಾದರು. ಅಂಥವರಲ್ಲಿ ವಿಲಿಯಂ ಜೋನ್ಸ್ ಜೂನಿಯರ್ ಪ್ರಮುಖ. ಇವನು ಸುಪ್ರೀಂ ಕೋರ್ಟಿನ ನ್ಯಾಯಾಧೀಶ, ಮೇಧಾವಿ, ಸಂಸ್ಕೃತ ಕಲಿತ. "ಸಂಸ್ಕೃತ ಭಾಷೆಯ ನುಡಿಗಟ್ಟು ಅದ್ಭುತ" ಎಂದು ಜೋನ್ಸ್ ನುಡಿದ. ಭಾರತದ ಸಾಹಿತ್ಯ ಅಧ್ಯಯನ ಮಾಡುವ ಸಲುವಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿದ. ಈ ಸಂಸ್ಥೆ ಭಗವದ್ಗೀತೆಯ ಇಂಗ್ಲಿಷ್ ಭಾಷಾಂತರವನ್ನು ಪ್ರಕಟಿಸಿತು. ಇದು ಸಂಸ್ಕೃತದಿಂದ ಇಂಗ್ಲಿಷಿಗೆ ತರ್ಜುಮೆಗೊಂಡ ಮೊದಲ ಕೃತಿ. ವಿಲಿಯಂ ಜೋನ್ಸ್ ಜೂನಿಯರ್ 'ಶಾಕುಂತಲಾ' ಮುಂತಾದ ಸಂಸ್ಕೃತ ಕೃತಿಗಳನ್ನು ಇಂಗ್ಲಿಷಿನಲ್ಲಿ ಸಿದ್ಧಗೊಳಿಸಿದ. ಮುಂದೆ ಫ್ರೆಂಚ್ ಮತ್ತು ಜರ್ಮನ್ ವಿದ್ವಾಂಸರು ಭಾರತೀಯ ಸಂಸ್ಕೃತಿಯ ಅಧ್ಯಯನ ಮುಂದುವರಿಸಿದರು. ಇದೇ ಕಾಲದಲ್ಲಿ ಐವತ್ತು ಉಪನಿಷತ್ತುಗಳು ಪರ್ಷಿಯನ್ ಮತ್ತು ಫ್ರೆಂಚ್ ಭಾಷೆಗಳಿಗೆ ಅನುವಾದಗೊಂಡವು.

©KTBS NOT TO BE REPUBLISHED




© KTBS NOT TO BE REPUBLISHED

'ಭಾ' ಎಂದರೆ ಬೆಳಕು. ಜ್ಞಾನವೆಂಬ ಬೆಳಕಿನಲ್ಲಿ
'ರತ' (ಆಸಕ್ತ)ರಾಗಿರುವ ಭೂಮಿ (ದೇಶ) 'ಭಾರತ'.
ಆ ಪರಂಪರೆಯಲ್ಲಿ ಇರುವ ನಾವು 'ಭಾರತೀಯ'ರು.

ಭೂಪಟದಲ್ಲಿ ನೀಡಿರುವ ಪ್ರಾಚೀನ ಸ್ಥಳ ನಾಮಗಳನ್ನು ಗಮನಿಸಿ. ಇವು ಆ ಕಾಲದ ಶಾಸನಗಳಲ್ಲಿ ಕಂಡುಬರುತ್ತವೆ. ಹೆಚ್ಚಿನ ಸ್ಥಳ ನಾಮಗಳು ಬದಲಾಗಿವೆ. ಉದಾ: ಮಗಧ>ಬಿಹಾರ, ಕಳಿಂಗ>ಒರಿಸ್ಸಾ, ಚೇರ>ಕೇರಳ, ಇಂದ್ರಪ್ರಸ್ಥ>ದೆಹಲಿ, ಪ್ರಯಾಗ>ಅಲಹಾಬಾದ್. ಆದರೆ ಕೆಲವು ಇಂದಿಗೂ ಉಳಿದುಕೊಂಡಿವೆ. ಉದಾ: ಕಾಶ್ಮೀರ, ನೇಪಾಳ, ಕೈಲಾಸ, ಕುರುಕ್ಷೇತ್ರ, ಆಯೋಧ್ಯ. ಕಾಶಿ, ಮಥುರಾ, ಸ್ಥಳ ನಾಮಗಳನ್ನು ಬದಲಿಸುವ ವಿದ್ಯಮಾನವು ಕಾಲಕಾಲಕ್ಕೆ ನಡೆದಿದೆ. ಈಗಲೂ ನಡೆಯುತ್ತಿದೆ. ಉದಾ: ಮದ್ರಾಸ್ >ಚೆನ್ನೈ, ಪ್ರಯಾಗ>ಅಲಹಾಬಾದ್, ಬರೋಡಾ>ವಡೋದರಾ, ಬೊಂಬಾಯಿ>ಮುಂಬೈ, ಇಂತಹ ವಿದ್ಯಮಾನದ ಅರಿವನ್ನು ಮೂಡಿಸುವ ಉದ್ದೇಶದಿಂದ ಪರಿಚಯಾತ್ಮಕವಾಗಿ ಭೂಪಟವನ್ನು ಪ್ರಾರಂಭದಲ್ಲಿಯೇ ನೀಡಲಾಗಿದೆ.

**ಗಣಿತ ಕ್ಷೇತ್ರಕ್ಕೆ ಭಾರತೀಯರು ನೀಡಿದ ಅದ್ಭುತ ಕೊಡುಗೆ :** ಅಶೋಕನ ಶಿಲಾಲೇಖನಗಳಲ್ಲಿ ಅಂಕೆಗಳನ್ನು ವಿಪುಲವಾಗಿ ಬಳಸಲಾಗಿದೆ. ಇವು 2300 ವರ್ಷಗಳಷ್ಟು ಹಿಂದಿನವು. ಇದಾದ 1000 ವರ್ಷಗಳ ಮೇಲೂ ಯುರೋಪಿನ ರಾಷ್ಟ್ರಗಳಲ್ಲಿ ಅಂಕೆಗಳು ಬಳಕೆಗೆ ಬಂದಿರಲಿಲ್ಲ. ಅಂಕೆಗಳು, ದಶಮಾಂಶ, ಭಿನ್ನರಾಶಿ, ಬೀಜಗಣಿತ ಇವೆಲ್ಲವೂ ಗಣಿತಕ್ಕೆ ಪ್ರಾಚೀನ ಭಾರತೀಯರು ನೀಡಿದ ಕೊಡುಗೆಗಳು. ಶನ ಅಥವಾ ಸೊನ್ನೆಯನ್ನು ಮೊತ್ತ ಮೊದಲು ಒಂದು ಸಂಖ್ಯಾಸೂಚಕವಾಗಿ ಬಳಸಿದ ಕೀರ್ತಿ ಭಾರತೀಯರಿಗೆ ಸಲ್ಲುತ್ತದೆ. ಸೊನ್ನೆಯ ಬಳಕೆಯಿಂದ ಲೆಕ್ಕಾಚಾರದ ತೊಡಕು ಬಗೆಹರಿಯಿತು. ಭೂಮಿ ಗುಂಡಗಿದೆ, ಸೂರ್ಯನ ಸುತ್ತ ಭೂಮಿ ಪರಿಭ್ರಮಿಸುತ್ತದೆ ಎಂದು ಭಾರತೀಯ ವಿಜ್ಞಾನಿ ಆರ್ಯಭಟ ತೋರಿಸಿಕೊಟ್ಟದ್ದು. ಆಧುನಿಕ ವಿಜ್ಞಾನದಲ್ಲಿ ಈ ವಾದವನ್ನು ಎತ್ತಿ ಹಿಡಿದ ಕೀರ್ತಿ ಸಲ್ಲುವುದು ಕೊಪರ್ನಿಕಸ್ ಎಂಬಾತನಿಗೆ, ಇವನಿಗಿಂತ ಹತ್ತು ಶತಮಾನ ಹಿಂದಿನವನು ಆರ್ಯಭಟ, ಭಾರತೀಯರು ನಾವಿಕರಿಗಾಗಿ ರೇಖಾಂಶ ನಕ್ಷೆಯನ್ನು ಉಜ್ಜಯಿನಿಯಲ್ಲಿ ಸಿದ್ಧಗೊಳಿಸಿದರು. ಇಂಥದೊಂದು ನಕಾಶೆಯನ್ನು ಬಳಸಿಯೇ 15ನೇ ಶತಮಾನದಲ್ಲಿ ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮ ಭಾರತದ ಪಶ್ಚಿಮ ತೀರವನ್ನು ಮುಟ್ಟಿದ.

NOT TO BE REPUBLISHED ©KTBS

**ಭಾರತೀಯರ ಇನ್ನಷ್ಟು ಕೊಡುಗೆಗಳು**

• ಪೈಥಾಗೊರೆಸ್‌ನ ಪ್ರಖ್ಯಾತ ಪ್ರಮೇಯವನ್ನು ಆತನಿಗಿಂತ ಎರಡು ಶತಮಾನಗಳ ಮೊದಲೇ ಗುರುತಿಸಿದ್ದವನು ಭಾರತೀಯ ವಿಜ್ಞಾನಿ ಬೋಧಾಯನ. • ವಸ್ತುವಿನ ಅವಿಭಾಜ್ಯ ಕಣವಾದ ಅಣುವನ್ನು ಕಣಾದ ಎಂಬ ಭಾರತೀಯ ವಿಜ್ಞಾನಿ, 27 ಶತಮಾನಗಳಷ್ಟು ಹಿಂದೆಯೇ ಪ್ರತಿಪಾದಿಸಿದನು. ರಷ್ಯಾ ದೇಶದಲ್ಲಿ ಅಣು ಸಿದ್ಧಾಂತಕ್ಕೆ ಸಂಬಂಧಿಸಿದ ಪಾಠವು ಕಣಾದನ ಸ್ಮರಣೆಯಿಂದ ಪ್ರಾರಂಭವಾಗುತ್ತದೆ. • ಭಾರತೀಯರು ಪ್ರಾಚೀನಕಾಲದಿಂದಲೂ ಉಕ್ಕನ್ನು ತಯಾರಿಸುತ್ತಿದ್ದರು. • ನೌಕಾನಿರ್ಮಾಣ ವಿಜ್ಞಾನದಲ್ಲಿ ಭಾರತೀಯರು ಪ್ರಥಮಸ್ಥಾನದಲ್ಲಿದ್ದರು. ಗುಜರಾತಿನ ಸೂರತ್ ಅತಿ ದೊಡ್ಡ ನೌಕಾನಿರ್ಮಾಣ ಕೇಂದ್ರವೆಂದು ಪ್ರಸಿದ್ಧವಾಗಿತ್ತು. ಭಾರತೀಯರು ಮುಂಗಾರು ಮಾರುತಗಳನ್ನು ಗುರುತಿಸಿದ ಮೇಲೆ ಪ್ರಪಂಚದಲ್ಲಿ ನೌಕಾಯಾನದ ವೇಗ ಹೆಚ್ಚಿತು. • ವೈಮಾನಿಕ ಶಾಸ್ತ್ರ, ಯೋಗಶಾಸ್ತ್ರ ಮತ್ತು ಸಂಸ್ಕೃತವು ಕೂಡ ಭಾರತೀಯರ ಕೊಡುಗೆಗಳಾಗಿವೆ.

**ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ:** ಸಾಗರಯಾನದಲ್ಲಿ ಭಾರತೀಯರು ನಿಷ್ಣಾತರು. ಆದರೂ ಇತರ ರಾಷ್ಟ್ರಗಳನ್ನು ಆಕ್ರಮಿಸಿ ತಮ್ಮ ಸಂಸ್ಕೃತಿಯನ್ನು ಅವರ ಮೇಲೆ ಹೇರುವ ಸ್ವಭಾವ ನಮ್ಮದಾಗಿರಲಿಲ್ಲ.

ಬೌದ್ಧಮತ ಭಾರತದ ಗಡಿಯಾಚೆಗೆ ಅಫ್ಘಾನಿಸ್ತಾನ, ಟಿಬೆಟ್, ಮಂಗೋಲಿಯ, ಚೀನ, ಕೊರಿಯ ಮತ್ತು ಜಪಾನ್‌ಗಳಲ್ಲಿ ವ್ಯಾಪಿಸಿತು. ಶ್ರೀಲಂಕೆ ಬೌದ್ಧ ಮತವನ್ನು ಸ್ವೀಕರಿಸಿತು. ಜಗತ್ತಿನ ಅತಿ ಎತ್ತರದ ಬುದ್ಧನ ಮೂರ್ತಿ ಅಫ್ಘಾನಿಸ್ತಾನದ ಬಮಿಯಾನ್ ಎಂಬಲ್ಲಿ ಇತ್ತು ಎಂದರೆ ನಿಮಗೆ ಅಚ್ಚರಿಯಾಗುವುದಿಲ್ಲವೆ?



**ಬುದ್ಧ, ಶ್ರೀಲಂಕಾ**



**ಅಂಗೋರವಾಟ್ ಹಿಂದೂ ದೇವಾಲಯ, ಕಾಂಬೋಡಿಯ**

ಬೌದ್ಧಮತ ಮತ್ತು ಹಿಂದೂ ಸಂಸ್ಕೃತಿ ದಕ್ಷಿಣ ಏಷ್ಯದ ವಿವಿಧ ದೇಶಗಳಿಗೆ ಹಬ್ಬಿದವು. ಕಾಂಬೋಡಿಯದ ಅಂಗೋರವಾಟ್ ಎಂಬಲ್ಲಿನ ಭವ್ಯ ಹಿಂದೂ ದೇವಾಲಯವು ಜಗತ್ತಿನ ಶ್ರೇಷ್ಠ ವಾಸ್ತು ಶಿಲ್ಪಗಳಲ್ಲೊಂದು. ಜಾವಾದ ಬೊರಬೊದೂರ್ ಎಂಬಲ್ಲಿ ಜಗತ್ಪ್ರಸಿದ್ಧ ಬೃಹತ್ ಬೌದ್ಧಾಲಯವಿದೆ.

ಇವೆರಡೂ ವಿಶ್ವಪರಂಪರೆಗೆ ಸೇರಿದ ತಾಣಗಳಾಗಿವೆ. ಆಗ್ನೇಯ ಏಷ್ಯದಲ್ಲಿ ಭಾರತೀಯ ಸಂಸ್ಕೃತಿಯು ಸುಮಾರು ಒಂಬತ್ತು ಶತಮಾನಗಳ ಕಾಲ ಅಲ್ಲಿಯ ಜನಜೀವನವನ್ನು ಬೆಳಗಿತು. ಅಲ್ಲಿನ ಹಲವು ದೇಶಗಳಲ್ಲಿ ಸಂಸ್ಕೃತ ಆಡಳಿತ ಭಾಷೆಯಾಯಿತು. ನೃತ್ಯಗಳಲ್ಲಿ, ಹಾಡುಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಇಂದಿಗೂ ಅಲ್ಲಿ ಜೀವಂತವಾಗಿವೆ.



**ಬೊರಬೊದೂರ್ ಬೌದ್ಧಾಲಯ, ಜಾವ**

NOT TO BE REPUBLISHED

**ಕೆಲವು ಸಾರ್ವಕಾಲಿಕ ಭಾರತೀಯ ಮೌಲ್ಯಗಳು: ● ಆಚಾರ್ಯ ದೇವೋಭವ:** ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿ ವಿದ್ಯೆ ವಿಕ್ರಯದ ವಸ್ತುವಾಗಿರಲಿಲ್ಲ. ಮೂರು ಸಾವಿರ ವರ್ಷಗಳ ಹಿಂದೆ ಶಿಷ್ಯರಿಗೆ ಗುರುಗಳು ನೀಡುತ್ತಿದ್ದ ಮೌಲ್ಯಗಳು ಎಲ್ಲಾ ಕಾಲಗಳಿಗೂ ಅನ್ವಯವಾಗುವಂಥವು : "ಸತ್ಯವನ್ನು ಹೇಳು. ಧರ್ಮವನ್ನು ಪಾಲಿಸು. ಇದುವರೆಗೆ ಕಲಿತದ್ದರಿಂದಲೇ ತೃಪ್ತನಾಗಬೇಡ, ಗರ್ವಪಡಬೇಡ, ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿಗಳನ್ನು ದೇವರಂತೆ ಭಾವಿಸು". ಈ ಮೌಲ್ಯಗಳು ಇಂದಿಗೂ ನಮ್ಮ ಮುಂದಿವೆ.

**● ಅಹಿಂಸೆ, ಪೌರುಷ :** ಜಗತ್ತಿನಲ್ಲಿ ಅಹಿಂಸೆಯ ಶ್ರೇಷ್ಠತಮ ಪ್ರತಿಪಾದಕರು ಭಾರತೀಯರು. ಆದರೆ ಪೌರುಷ ಶಕ್ತಿಗಳನ್ನು ಭಾರತೀಯರು ಎಂದೂ ಕಡೆಗಣಿಸಿರಲಿಲ್ಲ. "ಶತ್ರುಗಳಿಗೆ ಅಂಜಿ ಪಲಾಯನ ಮಾಡುವುದಕ್ಕಿಂತ ಯುದ್ಧ ಮಾಡುತ್ತಲೇ ಮಡಿಯಿರಿ" ಎನ್ನುವುದು ಪ್ರಾಚೀನರ ಜೀವನಸೂತ್ರವಾಗಿತ್ತು.

**● ಎಲ್ಲ ಜನರೂ ಸುಖಿಗಳಾಗಲಿ (ಸರ್ವೇ ಜನಾಃ ಸುಖಿನೋ ಭವಂತು):** ಇದು ನಮ್ಮ ಪ್ರಾಚೀನರ ಒಂದು ಉದಾತ್ತ ಮೌಲ್ಯವಾಗಿದೆ. 'ವಸುಧೈವ ಕುಟುಂಬಕಂ' (ಇಡೀ ಜಗತ್ತೇ ಒಂದು ಕುಟುಂಬ) ಎಂಬ ಉದಾತ್ತ ಚಿಂತನೆಯು ಭಾರತೀಯರದ್ದೇ ಆಗಿದೆ.

**● ಸರ್ವಧರ್ಮ ಸಮಾನತೆ:** ಭಾರತವು ನಂಬಿ ಬಂದಿರುವ ಇನ್ನೊಂದು ಮೌಲ್ಯವೆಂದರೆ ಸರ್ವಧರ್ಮ ಸಮಾನತೆ, ಬೆಳಕು ಎಲ್ಲಿಂದ ಬಂದರೂ ಅದು ಬೆಳಕೇ. ಅದಕ್ಕೆ ಕತ್ತಲೆಯನ್ನು ಹೊಡೆದೋಡಿಸುವ ಶಕ್ತಿಯಿದೆ. ಅಂತೆಯೇ ಮತಧರ್ಮ ಯಾವುದೇ ಇರಲಿ ದೇವರು ಒಬ್ಬನೇ; ನಾಮ ಹಲವು ಎಂಬುದು ವೇದವಾಕ್ಯ.

ಮೇಲೆ ಉಲ್ಲೇಖಿಸಿದ ಎಲ್ಲಾ ಮೌಲ್ಯಗಳೂ ಭಾರತದಲ್ಲಿ ಹುಟ್ಟಿ ಬೆಳೆದ ಸನಾತನ ಧರ್ಮದ ಆಶಯಗಳಾಗಿವೆ.

© KTBS NOT TO BE REPUBLISHED

### ಹೊಸ ಪದಗಳು

ಮಾತೃದೇವತೆ – ತಾಯಿಸ್ವರೂಪದ ದೇವತೆ. ಭರತಖಂಡ, ಭರತವರ್ಷ – ಭರತಕ್ಷೇತ್ರ, ಭಾರತಭೂಮಿ, ಭಾರತದೇಶ, ಭರತವರ್ಷವು ಭೂಮಂಡಲದ ಸಪ್ತ ದ್ವೀಪಗಳಲ್ಲಿ ಒಂದಾಗಿತ್ತು ಎಂಬ ಹೇಳಿಕೆ ಪರಂಪರೆಯಿಂದ ಬಂದಿದೆ ? "ಸಪ್ತದ್ವೀಪ ವಸುಂಧರಾ'.

### ನಿಮಗೆ ತಿಳಿದಿರಲಿ

1 ವೃಷಭನಾಥ ಜೈನಮತದ ಮೊದಲನೆಯ ತೀರ್ಥಂಕರ.

2 ದುಷ್ಯಂತ ಶಕುಂತಲೆಯರ ವೀರಪುತ್ರನಾದ ಭರತನಿಂದ ಭಾರತ ಎಂಬ ಹೆಸರಾಯಿತು ಎಂಬ ಪ್ರತೀತಿಯೂ ಇದೆ.

3 ಆಂಗ್ಲರ ಪ್ರಭಾವದಿಂದ ಬೌದ್ಧಮತ, ಜೈನಮತ ಮತ್ತು ಸಿಖ್ ಮತ ಅನುಕ್ರಮವಾಗಿ ಬುದ್ಧಿಸಂ, ಜೈನಿಸಂ ಮತ್ತು ಸಿಖ್ಖಿಸಂ ಎಂದಾಯಿತು.

4 ಇಂದಿನ ಭಾರತಕ್ಕಿಂತ ಇನ್ನೂ ದೊಡ್ಡದಾದ ಪ್ರದೇಶವನ್ನು ಹಿಂದೆ ಭರತವರ್ಷವೆನ್ನುತ್ತಿದ್ದರು. ದಕ್ಷಿಣ ಸಮುದ್ರದ ಉತ್ತರಕ್ಕೆ ಮತ್ತು ಹಿಮಾಲಯದ ದಕ್ಷಿಣಕ್ಕೆ ಇರುವ ಭೂಭಾಗವೆಲ್ಲ ಭರತವರ್ಷ; ಅಲ್ಲಿ ವಾಸಿಸುವ ಜನರೆಲ್ಲರೂ ಭಾರತೀಯರು ಎಂಬುದಾಗಿ ವಿಷ್ಣುಪುರಾಣದಿಂದ ನಮಗೆ ತಿಳಿದುಬರುತ್ತದೆ.

5 ಮಯನ್ಮಾರನ್ನು 'ಬ್ರಹ್ಮದೇಶ, ಇಂಡೋನೇಷ್ಯದಲ್ಲಿರುವ ಜಾವಾ, ಸುಮಾತ್ರಾ, ಬಾಲಿ ಇವನ್ನು 'ಸುವರ್ಣದ್ವೀಪ', ವಿಯೆಟ್ನಾಮನ್ನು 'ಚಂಪಾ' ಮತ್ತು ಕಾಂಬೋಡಿಯವನ್ನು 'ಕಂಬುಜ' ಎಂದು ಕರೆಯಲಾಗುತ್ತಿತ್ತು.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಪುರಾಣಗಳಲ್ಲಿ ಭಾರತವನ್ನು ಏನೆಂದು ಕರೆದಿದ್ದಾರೆ?

2 ಗಣಿತ ಕ್ಷೇತ್ರಕ್ಕೆ ಭಾರತೀಯರ ಶ್ರೇಷ್ಠ ಕೊಡುಗೆ ಏನು?

3 ಆರ್ಯಭಟನ ಮಹತ್ವದ ಸಾಧನೆ ಯಾವುದು?

4 ಜಗತ್ಪ್ರಸಿದ್ಧ ಬೃಹತ್ ಬೌದ್ಧ ದೇವಾಲಯ ಎಲ್ಲಿದೆ?

5 ಭಾರತೀಯ ಸಂಸ್ಕೃತಿಯು ಹಬ್ಬಿದ ಆಗ್ನೇಯ ಏಷ್ಯಾ ಖಂಡದ ಮೂರು ದೇಶಗಳನ್ನು ಹೆಸರಿಸಿ.

6 ಯಾವುದಾದರೂ ಎರಡು ಭಾರತೀಯ ಮೌಲ್ಯಗಳನ್ನು ತಿಳಿಸಿ.

### ಚರ್ಚಿಸಿ

ಸರ್ವಧರ್ಮ ಸಮಭಾವ ಮೌಲ್ಯವು ನಮ್ಮ ದೇಶದಲ್ಲಿ ಆಚರಣೆಯಲ್ಲಿದೆ.

### ಚಟುವಟಿಕೆ

ಭಾರತೀಯ ಸಂಸ್ಕೃತಿಯು ಪ್ರಭಾವ ಬೀರಿದ ಏಷ್ಯಾಖಂಡದ ದೇಶಗಳನ್ನು ನಕಾಶೆಯಲ್ಲಿ ಗುರುತಿಸಿ.

NOT TO BE REPUBLISHED ©KTBS

# ಅಧ್ಯಾಯ 2 ನಮ್ಮ ಹೆಮ್ಮೆಯ ರಾಜ್ಯ – ಕರ್ನಾಟಕ

V1V6B5

**ಪಾಠದ ಪರಿಚಯ**

ನಮ್ಮ ನುಡಿ ಕನ್ನಡ. ನಮ್ಮ ನಾಡು ಕರ್ನಾಟಕ. ನಮ್ಮ ನಾಡಿನ ಚರಿತ್ರೆಯ ಬಗ್ಗೆ, ನಮ್ಮ ನಾಡಿನ ಪ್ರಾಕೃತಿಕ ಸಂಪನ್ಮೂಲಗಳ ಬಗ್ಗೆ, ನಮ್ಮ ಕೃಷಿ, ಉದ್ದಿಮೆ, ವ್ಯಾಪಾರ ಮುಂತಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಅದಕ್ಕಾಗಿ ಈ ಅಧ್ಯಾಯದಲ್ಲಿ ನಮ್ಮ ನಾಡಾದ ಕರ್ನಾಟಕದ ನಾಲ್ಕು ಕಂದಾಯ ವಿಭಾಗಗಳ ಬಗ್ಗೆ ಪರಿಚಯ ಮಾಡಿಕೊಡಲಾಗುವುದು. ಕರ್ನಾಟಕ ಏಕೀಕರಣದ ಬಗ್ಗೆ, ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಬಗ್ಗೆ ನೀವು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಅನೇಕ ವಿಚಾರಗಳನ್ನು ತಿಳಿದುಕೊಂಡಿದ್ದೀರಿ. ನಮ್ಮ ನಾಡಿನ ನದಿಗಳು, ನಾವು ಬೆಳೆಯುವ ಬೆಳೆಗಳು, ನಾವು ಉತ್ಪಾದಿಸುವ ಸರಕುಗಳು, ನಮ್ಮ ಬ್ಯಾಂಕುಗಳು, ನಮ್ಮ ನೀರಾವರಿ ಯೋಜನೆಗಳು, ನಮ್ಮ ಅರಣ್ಯಗಳು, ನಮ್ಮ ವನ್ಯಪ್ರಾಣಿಗಳು ಮುಂತಾದ ಸಂಗತಿಗಳ ಬಗ್ಗೆ ಇಲ್ಲಿ ವಿವರಿಸಲಾಗುವುದು. ಆಡಳಿತದ ಅನುಕೂಲಕ್ಕೆ ನಮ್ಮ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ನಾಲ್ಕು ವಿಭಾಗಗಳ ಬಗ್ಗೆ ಇಲ್ಲಿ ವಿವರಿಸಲಾಗುವುದು.

**ಸಾಮರ್ಥ್ಯಗಳು**

1 ನಮ್ಮ ಕರ್ನಾಟಕ ರಾಜ್ಯದ ಆಡಳಿತ ವಿಭಾಗಗಳ ಚರಿತ್ರೆ, ವಿಭಾಗಗಳಲ್ಲಿನ ಜಿಲ್ಲೆಗಳು, ಜಿಲ್ಲೆಗಳಲ್ಲಿನ ವಿಶಿಷ್ಟತೆಗಳನ್ನು ಅರಿಯುವುದು

2 ನಮ್ಮ ರಾಜ್ಯದ ವಿವಿಧ ವಿಭಾಗಗಳಲ್ಲಿ ಬೆಳೆಯುವ ಬೆಳೆಗಳು, ಜನಸಂಖ್ಯೆ, ಉದ್ದಿಮೆಗಳು, ನದಿಗಳು ಮುಂತಾದ ಸಂಗತಿಗಳ ಬಗ್ಗೆ ತಿಳುವಳಿಕೆ ಪಡೆಯುವುದು.

3 ನಮ್ಮ ವಿಭಾಗ ಯಾವುದು, ಅದರ ವಿಶೇಷತೆ ಏನು, ಅಲ್ಲಿನ ಪ್ರಾಕೃತಿಕ ಸಂಪನ್ಮೂಲಗಳು, ಅರಣ್ಯ, ವನ್ಯಮೃಗಗಳು, ಪಕ್ಷಿಧಾಮಗಳು ಮುಂತಾದವುಗಳ ಬಗ್ಗೆ ತಿಳಿಯುವುದು

4 ನಮ್ಮ ನಾಡಿನ ಕಲೆ, ಸಾಹಿತ್ಯ, ಕ್ರೀಡೆ, ರಾಜಕಾರಣ ಮುಂತಾದ ಕ್ಷೇತ್ರದಲ್ಲಿ ಪ್ರಸಿದ್ಧರಾದವರ ಪರಿಚಯವನ್ನು ತಿಳಿದುಕೊಳ್ಳುವುದು.

© KTBS NOT TO BE REPUBLISHED

## 1. ಕರ್ನಾಟಕದಲ್ಲಿ ಆಡಳಿತ ವಿಭಾಗಗಳು

ನಮ್ಮ ನಾಡು ಕರ್ನಾಟಕ. ನಮ್ಮ ರಾಜ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಿದೆ. ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಪ್ರಾಚೀನ ಶಿಲಾಯುಗದ ಕೇಂದ್ರಗಳಿವೆ. ಚರಿತ್ರೆಕಾರರು ಅಂತಹ ಸ್ಥಳಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗುರುತಿಸಿದ್ದಾರೆ. ಈ ಅಧ್ಯಾಯದಲ್ಲಿ ನಮ್ಮ ರಾಜ್ಯದ ನಾಲ್ಕು ವಿಭಾಗಗಳ ಬಗ್ಗೆ ಮತ್ತು ಅವುಗಳ ವಿಶೇಷತೆಗಳ ಬಗ್ಗೆ ತಿಳಿದುಕೊಳ್ಳೋಣ.

ಬ್ರಿಟಿಷರ ಆಡಳಿತ ಕಾಲದಲ್ಲಿ ವಿವಿಧ ಜಿಲ್ಲೆಗಳನ್ನು ರೂಪಿಸಲಾಯಿತು. ಅನೇಕ ಸಂದರ್ಭಗಳಲ್ಲಿ ಜಿಲ್ಲಾ ಕೇಂದ್ರಗಳು ಬದಲಾಗಿವೆ. ಕೆಲವು ಜಿಲ್ಲೆಗಳು ಚಿಕ್ಕವಾಗಿವೆ ಮತ್ತು ಕೆಲವು ವಿಸ್ತರಣೆಗೊಂಡಿವೆ.



@KTBS NOT TO BE REPUBLISHED

ವಿಭಾಗವಾರು ಕರ್ನಾಟಕ ರಾಜ್ಯದ ಭೂಪಟ

ಉದಾಹರಣೆಗೆ ಇಂದು ಯಾವುದನ್ನು ವಿಜಯಪುರ ಎಂದು ಕರೆಯುತ್ತಿದ್ದೇವೆಯೋ ಅದರ ಜಿಲ್ಲಾ ಕೇಂದ್ರ ಕಲಾದಗಿಯಾಗಿತ್ತು. ಮತ್ತೆ ಅದನ್ನು ವಿಜಯಪುರಕ್ಕೆ ಬದಲಾಯಿಸಲಾಯಿತು. ಸ್ವಾತಂತ್ರ್ಯಾ ನಂತರ ಹೊಸ ಜಿಲ್ಲೆಗಳನ್ನು ರಚಿಸಲಾಗಿದೆ. ದೊಡ್ಡ ಜಿಲ್ಲೆಗಳನ್ನು ವಿಭಜಿಸಿ ಎರಡು ಜಿಲ್ಲೆಗಳನ್ನು ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕೆ ನಾಲ್ಕು ಕಂದಾಯ ವಿಭಾಗಗಳನ್ನು ರೂಪಿಸಲಾಗಿದೆ. ಅವುಗಳು ಹೀಗಿವೆ: ಬೆಂಗಳೂರು ವಿಭಾಗ (ಒಂಬತ್ತು ಜಿಲ್ಲೆಗಳು), ಮೈಸೂರು ವಿಭಾಗ (ಎಂಟು ಜಿಲ್ಲೆಗಳು), ಬೆಳಗಾವಿ ವಿಭಾಗ (ಏಳು ಜಿಲ್ಲೆಗಳು) ಮತ್ತು ಕಲಬುರಗಿ ವಿಭಾಗ (ಏಳು ಜಿಲ್ಲೆಗಳು). ಒಟ್ಟು ಮೂವತ್ತೊಂದು ಜಿಲ್ಲೆಗಳು. ಪ್ರತಿ ಜಿಲ್ಲೆಗೆ ಒಬ್ಬರು ಜಿಲ್ಲಾಧಿಕಾರಿಗಳಿರುತ್ತಾರೆ (ಡೆಪ್ಯೂಟಿ ಕಮೀಷನರ್). ಅದೇ ರೀತಿಯಲ್ಲಿ ವಿಭಾಗಕ್ಕೆ ವಿಭಾಗೀಯ ಅಧಿಕಾರಿಯಿರುತ್ತಾರೆ (ಡಿವಿಜನಲ್ ಕಮೀಷನರ್). ಈ ಭಾಗದಲ್ಲಿ ನಾಲ್ಕು ವಿಭಾಗಗಳಲ್ಲಿರುವ ಜಿಲ್ಲೆಗಳು, ಅವುಗಳ ವಿಶಿಷ್ಟತೆಗಳು, ಪ್ರಾಕೃತಿಕ ಸಂಪನ್ಮೂಲ, ಕೃಷಿ, ಉದ್ದಿಮೆ, ನದಿಗಳು, ಬೆಳೆಗಳು, ಅರಣ್ಯಗಳು, ವಾಯುಗುಣ, ಕಲೆ, ಸಾಹಿತ್ಯ, ಜಾನಪದ, ಕ್ರೀಡೆ, ಉತ್ಸವಗಳು ಮುಂತಾದ ಸಂಗತಿಗಳ ಬಗ್ಗೆ ತಿಳಿದುಕೊಳ್ಳೋಣ.

## 1.1 ಬೆಂಗಳೂರು ವಿಭಾಗ

ನಮ್ಮ ರಾಜ್ಯದ ರಾಜಧಾನಿ ಬೆಂಗಳೂರು. ಇದು ಒಂದು ಆಡಳಿತ ಕಂದಾಯ ವಿಭಾಗವಾಗಿದೆ. ಈ ವಿಭಾಗದಲ್ಲಿ 9 ಜಿಲ್ಲೆಗಳಿವೆ. ಅವುಗಳ ಹೆಸರುಗಳು ಹೀಗಿವೆ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ (ಭೂಪಟ ನೋಡಿ). ನಮ್ಮ ರಾಜ್ಯದ ದಕ್ಷಿಣ ಭಾಗದಲ್ಲಿ ಇದು ನೆಲೆಗೊಂಡಿದೆ.

### 1.1.1 ಚಾರಿತ್ರಿಕ ಹಿನ್ನೆಲೆ

ಕರ್ನಾಟಕದಷ್ಟೇ ಪ್ರಾಚೀನ ಚಾರಿತ್ರಿಕ ಹಿನ್ನೆಲೆ ಬೆಂಗಳೂರು ವಿಭಾಗಕ್ಕಿದೆ. ಈ ಭಾಗವನ್ನು ಮೊದಲು ಆಳಿದ ಅರಸರೆಂದರೆ ಕುವಲಾಲಪುರವನ್ನು (ಈಗಿನ ಕೋಲಾರ) ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಗಂಗರ ಮನೆತನದ ಅರಸರು. ಅವರ ಆಳ್ವಿಕೆ ಅಳಿದ ಮೇಲೆ ಈ ಪ್ರದೇಶವು ಚೋಳರ, ಹೊಯ್ಸಳರ, ವಿಜಯನಗರ, ಮರಾಠರ, ಮೈಸೂರು ಒಡೆಯರ ಮತ್ತು ವಿಜಯಪುರದ ಆದಿಲ್‌ಶಾಹಿ ಮನೆತನದ ಅರಸರ ಆಳ್ವಿಕೆಗೆ ಒಳಗಾಯಿತು. ವಿಜಯನಗರ ಅರಸರ ಆಳ್ವಿಕೆಯಲ್ಲಿ ಅನೇಕ ಪಾಳೆಗಾರರು ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಅವರು ಆಳುತ್ತಿದ್ದ ಪ್ರದೇಶವನ್ನು ಪಾಳೆಪಟ್ಟು ಎಂದು ಕರೆಯಲಾಗುತ್ತಿತ್ತು. ಈ ಪಾಳೆಗಾರರಿಗೆ ನಾಯಕರೆಂಬ ಹೆಸರಿತ್ತು. ಈ ಪಾಳೆಗಾರರು ವಿಜಯನಗರ ಅರಸರಿಗೆ ವಿಧೇಯರಾಗಿದ್ದರು. ಅವರಿಗೆ ಪಾಳೆಗಾರರು ಕಪ್ಪ ಮತ್ತು ಕಾಣಿಕೆ ನೀಡುತ್ತಿದ್ದರು. ಪ್ರಮುಖ ಪಾಳೆಪಟ್ಟುಗಳೆಂದರೆ ಕೆಳದಿ, ಚಿತ್ರದುರ್ಗ, ಯಲಹಂಕ, ಚಿಕ್ಕಬಳ್ಳಾಪುರ ಮುಂತಾದವು.

©KTBS NOT TO BE REPUBLISHED



ಬೆಂಗಳೂರು ವಿಭಾಗದ ಜಿಲ್ಲಾವಾರು ಭೂಪಟ

NOT TO BE REPUBLISHED ©KTBS

### 1.1.2 ಪ್ರಾಕೃತಿಕ ಸಂಪನ್ಮೂಲ

ಪ್ರಕೃತಿಯಿಂದ ದತ್ತವಾದ ಸಂಗತಿಗಳನ್ನು ಪ್ರಾಕೃತಿಕ ಸಂಪನ್ಮೂಲ ಎಂದು ಕರೆಯುತ್ತೇವೆ. ನದಿ, ಕಾಡು, ಕಣಿವೆ, ಜಲಪಾತಗಳು, ಖನಿಜ ಗಣಿಗಳು, ವನ್ಯಮೃಗಗಳು, ಮಣ್ಣು ಮುಂತಾದವೆಲ್ಲ ಪ್ರಕೃತಿಯು ನಮಗೆ ನೀಡಿರುವ ಸಂಪತ್ತು. ಈ ವಿಭಾಗವು ಉಷ್ಣ ವಲಯದ ಮಾನ್ಸೂನ್ ವಾಯುಗುಣವನ್ನು ಹೊಂದಿದೆ. ಆದರೆ ವಿಭಾಗದ ಎಲ್ಲ ಜಿಲ್ಲೆಗಳಲ್ಲಿ ಏಕರೂಪದ ಹವಾಮಾನವಿಲ್ಲ. ಕೋಲಾರ ಜಿಲ್ಲೆ ಅತಿ ಉಷ್ಣವಲಯಕ್ಕೆ ಸೇರಿದ್ದರೆ ಶಿವಮೊಗ್ಗ ಅತಿಯಾದ ಮಳೆ ಬೀಳುವ ಪ್ರದೇಶವಾಗಿದೆ. ಆದರೆ ಚಿತ್ರದುರ್ಗ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆಯಾಗಿದೆ. ಉಳಿದ ಜಿಲ್ಲೆಗಳಾದ ತುಮಕೂರು, ದಾವಣಗೆರೆ, ರಾಮನಗರ, ಚಿಕ್ಕಬಳ್ಳಾಪುರ ಮುಂತಾದವು ಸಾಧಾರಣ ಮಳೆ ಬೀಳುವ ಜಿಲ್ಲೆಗಳಾಗಿವೆ.

ಈ ವಲಯದ ಅನೇಕ ಮುಖ್ಯ ನದಿಗಳು ಪಶ್ಚಿಮಘಟ್ಟದಲ್ಲಿ ಹುಟ್ಟುತ್ತವೆ. ಈ ವಿಭಾಗದ ಪ್ರಮುಖ ನದಿಗಳೆಂದರೆ ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ವೇದಾವತಿ, ಶಿಂಷಾ, ತುಂಗಭದ್ರಾ, ಶರಾವತಿ, ವರದಾ ಮುಂತಾದವು. ಶರಾವತಿಯು ಪಶ್ಚಿಮ ದಿಕ್ಕಿಗೆ ಹರಿಯುವ ನದಿ. ಇದರಿಂದ ನಿರ್ಮಾಣವಾದ ವಿಶ್ವವಿಖ್ಯಾತ ಜೋಗ ಜಲಪಾತ ಶಿವಮೊಗ್ಗ ಜಿಲ್ಲೆಯಲ್ಲಿದೆ. ಮುತ್ಯಾಲಮಡು ಎಂಬ ಜಲಾಶಯ ಬೆಂಗಳೂರು ನಗರ ಜಿಲ್ಲೆಯಲ್ಲಿದೆ. ಗಾಜನೂರು ಅಣೆಕಟ್ಟೆ ಮತ್ತು ತುಂಗಾ ಅಣೆಕಟ್ಟೆ ಶಿವಮೊಗ್ಗ ಜಿಲ್ಲೆಯಲ್ಲಿವೆ. ಈ ವಿಭಾಗದಲ್ಲಿ ನೂರಾರು ಪ್ರಸಿದ್ಧ ಕೆರೆಗಳಿವೆ. ಮೈಸೂರು ಅರಸರು ಅನೇಕ ಅಣೆಕಟ್ಟೆಗಳನ್ನು ಕಟ್ಟಿಸಿದ್ದರು. ವಾಣಿವಿಲಾಸ ಅಣೆಕಟ್ಟೆ ಅಂತಹ ಒಂದು ನೀರಾವರಿ ಯೋಜನೆಯಾಗಿದೆ. ಇದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿದೆ. ಅದೇ ರೀತಿಯಲ್ಲಿ ಮಾರ್ಕೋನಹಳ್ಳಿ ಜಲಾಶಯ ತುಮಕೂರು ಜಿಲ್ಲೆಯಲ್ಲಿದೆ.

ಪರಿಸರ ಮಾಲಿನ್ಯ, ಅರಣ್ಯ ನಾಶ, ಅತಿಯಾದ ನಗರೀಕರಣ ಮುಂತಾದ ಕಾರಣಗಳಿಂದ ನಮ್ಮ ಅನೇಕ ನದಿಗಳು ಬತ್ತಿ ಹೋಗುತ್ತಿವೆ. ಬೆಂಗಳೂರು ನಗರ ಜಿಲ್ಲೆಯ ಅನೇಕ ನದಿಗಳು ನಾಶದ ಅಂಚನ್ನು ತಲುಪಿವೆ. ಅನೇಕ ಕೆರೆಗಳು ಭೂ ಆಕ್ರಮಣದಿಂದ ನಾಶವಾಗುತ್ತಿವೆ. ಇದರಿಂದಾಗಿ ನೀರಿನ ತೀವ್ರ ಅಭಾವ ಉಂಟಾಗುತ್ತಿದೆ. ಕೆರೆಗಳ, ಜಲಮೂಲಗಳ ಮತ್ತು ಅಂತರ್ಜಲದ ರಕ್ಷಣೆಗೆ ನಾವೆಲ್ಲರೂ ಗಮನ ನೀಡುವ ಅಗತ್ಯವಿದೆ.

ಈ ವಿಭಾಗದಲ್ಲಿ ಅನೇಕ ಖನಿಜ ನಿಕ್ಷೇಪಗಳಿವೆ. ಇಡೀ ದೇಶದಲ್ಲಿ ಸಮೃದ್ಧವಾದ ಚಿನ್ನದ ಗಣಿಗಳು ಕರ್ನಾಟಕ ರಾಜ್ಯದಲ್ಲಿದ್ದು, ಕೋಲಾರ ಚಿನ್ನದ ಗಣಿ ಪ್ರಸಿದ್ಧವಾಗಿತ್ತು. ಆದರೆ ಅಲ್ಲಿನ ಚಿನ್ನದ ಅದಿರು ಮುಗಿದು ಹೋಗಿದೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು ನಿಕ್ಷೇಪಗಳಿವೆ ಮತ್ತು ಚಿತ್ರದುರ್ಗದಲ್ಲಿ ತಾಮ್ರದ ಗಣಿಗಳಿವೆ. ಪರಮಾಣು ಶಕ್ತಿ ಉತ್ಪಾದನೆಗೆ ಅಗತ್ಯವಾದ ಖನಿಜವು ಚಿತ್ರದುರ್ಗದಲ್ಲಿ ದೊರೆಯುತ್ತದೆ ಎಂದು ಹೇಳಲಾಗಿದೆ.

### 1.1.3 ಅರಣ್ಯಗಳು, ವನ್ಯಪ್ರಾಣಿಗಳು, ರಾಷ್ಟ್ರೀಯ ಉದ್ಯಾನಗಳು

ಬೆಂಗಳೂರು ವಿಭಾಗದ ಶಿವಮೊಗ್ಗ ಜಿಲ್ಲೆಯಲ್ಲಿ ದಟ್ಟ ಅರಣ್ಯವಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ಕಡಿಮೆ. ಈ ವಿಭಾಗದ ಜಿಲ್ಲೆಗಳಲ್ಲಿ ನಿತ್ಯ ಹರಿದ್ವರ್ಣ ಅರಣ್ಯದಿಂದ ಎಲೆ ಉದುರುವ ಅರಣ್ಯದವರೆಗೆ ವಿವಿಧ ಬಗೆಯ ಅರಣ್ಯಗಳಿವೆ. ಸಹ್ಯಾದ್ರಿ ಪರ್ವತ ಶ್ರೇಣಿಯು ಶಿವಮೊಗ್ಗ ಜಿಲ್ಲೆಯ ಗಡಿ ಭಾಗದಲ್ಲಿ ಹಾದು ಹೋಗುತ್ತದೆ. ಬಿದಿರು, ಆಲದ ಮರಗಳು, ಹುಣಿಸೆ ಮರಗಳು, ಶ್ರೀಗಂಧ, ದಿಂಡಿಗ, ತೇಗ, ಜಾಲಿ, ಮಾವಿನಮರಗಳು, ಬೇವಿನಮರಗಳು ಮುಂತಾದವು ಇಲ್ಲಿನ ಅರಣ್ಯಗಳಲ್ಲಿ ಬೆಳೆಯುತ್ತವೆ. ಕಿರು ಅರಣ್ಯ ಉತ್ಪನ್ನಗಳು ಅನೇಕರಿಗೆ ವರಮಾನದ ಮೂಲಗಳಾಗಿವೆ. ಈ ವಿಭಾಗದಲ್ಲಿರುವ ಅತಿ ಎತ್ತರದ ಬೆಟ್ಟವೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಾಲುರಾಮೇಶ್ವರ ಗುಡ್ಡ. ಇತರೆ ಪ್ರಸಿದ್ಧ ಗುಡ್ಡಗಳೆಂದರೆ ಕವಲೆದುರ್ಗ, ಚಂದ್ರಗುತ್ತಿ, ಕೊಡಚಾದ್ರಿ, ನಂದಿದುರ್ಗ ಇತ್ಯಾದಿ.

ಈ ವಿಭಾಗದಲ್ಲಿ ಅನೇಕ ವಿಧದ ವನ್ಯಪ್ರಾಣಿಗಳಿವೆ. ಕಾಡುಬೆಕ್ಕು, ಹುಲಿ, ಚಿರತೆ, ಕಾಡೆಮ್ಮೆ. ಕಾಡಹಂದಿ, ಜಿಂಕೆಗಳು, ಕರಡಿ, ತೋಳ ಮುಂತಾದವು. ಅರಣ್ಯ ರಕ್ಷಣೆಗಾಗಿ ಮತ್ತು ವನ್ಯಪ್ರಾಣಿಗಳ ಪೋಷಣೆಗಾಗಿ ಅನೇಕ ಅರಣ್ಯಧಾಮಗಳನ್ನು, ವನ್ಯಪ್ರಾಣಿ ಧಾಮಗಳನ್ನು, ರಾಷ್ಟ್ರೀಯ ಉದ್ಯಾನಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರು ವಿಭಾಗದಲ್ಲಿರುವ ಪ್ರಮುಖ ಧಾಮಗಳು ಹೀಗಿವೆ:

ಜೋಗಿಮಟ್ಟಿ ಅರಣ್ಯಧಾಮ, ಚಿತ್ರದುರ್ಗ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು, ಭದ್ರಾ ವನ್ಯಮೃಗ ಧಾಮ– ಶಿವಮೊಗ್ಗ, ಶರಾವತಿ ವನ್ಯಮೃಗ ಧಾಮ– ಶಿವಮೊಗ್ಗ, ಶೆಟ್ಟಿಹಳ್ಳಿ ವನ್ಯಮೃಗಧಾಮ– ಶಿವಮೊಗ್ಗ, ಗುಡವಿ ಪಕ್ಷಿಧಾಮ– ಶಿವಮೊಗ್ಗ ಜಿಲ್ಲೆ, ಮಂಡಗದ್ದೆ ಪಕ್ಷಿಧಾಮ– ಶಿವಮೊಗ್ಗ ಜಿಲ್ಲೆ, ಕಗ್ಗಲಡು ಪಕ್ಷಿ ಧಾಮ– ತುಮಕೂರು ಜಿಲ್ಲೆ, ರಾಮದೇವರಬೆಟ್ಟ ರಣಹದ್ದು ಪಕ್ಷಿಧಾಮ– ರಾಮನಗರ, ಜಯಮಂಗಲಿ ಕೃಷ್ಣಮೃಗ ವನ್ಯಧಾಮ, ತುಮಕೂರು.

© KTBS NOT TO BE REPUBLISHED



ಹುಲಿ – ಬನ್ನೇರುಘಟ್ಟ ವನ್ಯ ಮೃಗಧಾಮ

ಮಕ್ಕಳೆ, ನೀವು ವನ್ಯಮೃಗಗಳಾದ ಹುಲಿ, ಕರಡಿ, ಚಿರತೆ, ಆನೆ, ಜಿಂಕೆ ಮುಂತಾದವುಗಳನ್ನು ಅರಣ್ಯ ಪ್ರದೇಶದಲ್ಲಿ ನೋಡಲು ಬಯಸುವಿರಾ? ಹಾಗಾದರೆ ನಿಮ್ಮ ವಿಭಾಗದಲ್ಲಿರುವ ವನ್ಯಮೃಗಧಾಮಗಳಿಗೆ, ಪಕ್ಷಿಧಾಮಗಳಿಗೆ ಭೇಟಿ ನೀಡಿ. ಅರಣ್ಯದಲ್ಲಿರುವ ಪ್ರಾಣಿಗಳನ್ನು ನೋಡಿ ಸಂತೋಷಪಡಿ.

### 1.1.4 ಕೃಷಿ ಮತ್ತು ಉದ್ದಿಮೆಗಳ ಬೆಳವಣಿಗೆ

ಕೃಷಿಯು ಬೆಂಗಳೂರು ವಿಭಾಗದ ಜನರ ಪ್ರಧಾನ ಕಸುಬಾಗಿದೆ. ಈ ವಿಭಾಗದಲ್ಲಿ ಹೆಚ್ಚು ಒಣ ಭೂಮಿ ಬೇಸಾಯವಿದೆ. ಮಳೆಯನ್ನು ನಂಬಿಕೊಂಡೇ ಇಲ್ಲಿ ವ್ಯವಸಾಯ ನಡೆಯುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ನೀರಾವರಿಯಿದೆ. ಈ ವಿಭಾಗದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಹೆಚ್ಚಾಗಿದೆ. ಎರೆ ಮಣ್ಣು ಕೆಲವು ಭಾಗದಲ್ಲಿದೆ. ಈ ವಿಭಾಗದ ಪ್ರಮುಖ ಬೆಳೆಗಳೆಂದರೆ ರಾಗಿ, ಮೆಕ್ಕೆ ಜೋಳ, ಭತ್ತ, ಕಡಲೆಕಾಯಿ, ಬೇಳೆಕಾಳು ಮುಂತಾದವು. ಪ್ರಮುಖ ವಾಣಿಜ್ಯ ಬೆಳೆಗಳೆಂದರೆ ತೆಂಗಿನಕಾಯಿ, ಅಡಕೆ, ಹತ್ತಿ, ಕಬ್ಬು ಮುಂತಾದವು. ರೇಷ್ಮೆ ಉದ್ಯಮಕ್ಕೆ ಮೂಲವಾದ ಹಿಪ್ಪುನೇರಳೆಯನ್ನು ಬೆಂಗಳೂರು ಜಿಲ್ಲೆ, ರಾಮನಗರ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಸಪೋಟ, ಪಪ್ಪಾಯ, ಹಲಸಿನಹಣ್ಣು, ಕಿತ್ತಲೆಹಣ್ಣು, ಬಾಳೆಹಣ್ಣು ಮುಂತಾದ ಹಣ್ಣುಗಳನ್ನು ಬೆಳೆಯಲಾಗುತ್ತದೆ.

ಈ ವಿಭಾಗದಲ್ಲಿನ ಜನರು ಹೆಚ್ಚಾಗಿ ರಾಗಿ ಮುದ್ದೆ, ಮತ್ತು ಅಕ್ಕಿ ಬಳಸುತ್ತಾರೆ. ರಾಗಿ ಮತ್ತು ಅಕ್ಕಿ ರೊಟ್ಟಿಯನ್ನು ತಿನ್ನುತ್ತಾರೆ. ಇತ್ತೀಚಿಗೆ ಗೋಧಿ ಚಪಾತಿಯನ್ನು ಬಳಸುವುದನ್ನು ರೂಢಿಸಿಕೊಂಡಿದ್ದಾರೆ. ಹಬ್ಬಗಳಲ್ಲಿ ಪಾಯಸ, ಹೋಳಿಗೆ, ಸಿಹಿಕಿಚ್ಚಡಿ, ಶಾವಿಗೆ ಮುಂತಾದ ಸಿಹಿ ತಿನಿಸುಗಳನ್ನು ಸೇವಿಸುತ್ತಾರೆ.

NOT TO BE REPUBLISHED ©KTBS

ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಸರ್ಕಾರ ಸ್ಥಾಪಿಸಿದೆ. ಅಲ್ಲಿ ರೈತರು ತಮ್ಮ ಸರಕುಗಳನ್ನು ಮಾರಾಟ ಮಾಡಬಹುದು. ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಉಗ್ರಾಣಗಳನ್ನು ನಿರ್ಮಿಸಿದೆ. ಅಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ದಾಸ್ತಾನಿಡಬಹುದು.

### ಉದ್ದಿಮೆಗಳು



**ಸರ್. ಎಂ. ವಿಶ್ವೇಶ್ವರಯ್ಯ**

ನಮ್ಮ ರಾಜ್ಯದ ಕೈಗಾರಿಕಾ ವಲಯದ ನಿರ್ಮಾತೃ ಸರ್. ಎಂ. ವಿಶ್ವೇಶ್ವರಯ್ಯ. ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಮುಂದಾಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಿದರು. ಇಂದು ಕೈಗಾರಿಕೆಗಳನ್ನು ಸ್ಥಾಪಿಸದೆ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಬೆಂಗಳೂರು, ಭದ್ರಾವತಿ, ತುಮಕೂರು, ಶಿವಮೊಗ್ಗ ಮುಂತಾದ ಸ್ಥಳಗಳಲ್ಲಿ ದೊಡ್ಡ ಕಾರ್ಖಾನೆಗಳನ್ನು ನಿರ್ಮಿಸಲಾಗಿದೆ. ಬೆಂಗಳೂರು ರಾಷ್ಟ್ರದಲ್ಲಿಯೇ ಪ್ರಮುಖ ಕೈಗಾರಿಕಾ ಕೇಂದ್ರವಾಗಿದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಿದೆ. ಇದನ್ನು 1923ರಲ್ಲಿ ಸ್ಥಾಪಿಸಲಾಗಿದೆ. ಅದನ್ನು ಇಂದು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತ ಕಾರ್ಖಾನೆ ಎಂದು ಕರೆಯಲಾಗುತ್ತಿದೆ. ಅಲ್ಲಿ ಕಾಗದದ ಕಾರ್ಖಾನೆಯೂ ಇದೆ. ಇದನ್ನು 1936ರಲ್ಲಿ ಸ್ಥಾಪಿಸಲಾಗಿದೆ. ರಾಜ್ಯದ ಮೊದಲ ಸಿಮೆಂಟ್ ಕಾರ್ಖಾನೆಯು ಭದ್ರಾವತಿಯಲ್ಲಿ ಸ್ಥಾಪನೆಗೊಂಡಿತು. ತುಮಕೂರು ಜಿಲ್ಲೆಯ ಅಮ್ಮಸಂದ್ರದಲ್ಲಿ ಬಿರ್ಲಾ ಕಂಪನಿಯ ಸಿಮೆಂಟ್ ಕಾರ್ಖಾನೆಯಿದೆ. ಬೆಂಗಳೂರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ದಿಮೆಗಳಿಗೆ ಪ್ರಸಿದ್ಧಿಯಾಗಿದೆ. ಕೈಗಾರಿಕೆಗಳು ಉದ್ಯೋಗದ ಮೂಲಗಳಾಗಿವೆ.

ಬಟ್ಟೆ ರಫ್ತು ವ್ಯಾಪಾರದಲ್ಲಿ ದೇಶದಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ನಮ್ಮ ವಿಭಾಗದ ದೊಡ್ಡಬಳ್ಳಾಪುರ, ಆನೇಕಲ್ ಮುಂತಾದ ನಗರಗಳಲ್ಲಿ ಸರ್ಕಾರ ಸಿದ್ಧ ಉಡುಪಿನ ಪಾರ್ಕುಗಳನ್ನು ಸ್ಥಾಪಿಸಿದೆ. ಬೆಂಗಳೂರಿನಲ್ಲಿ ವಿಮಾನ ಕಾರ್ಖಾನೆ, ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಉದ್ದಿಮೆಗಳು ಕಾರ್ಯ ನಿರತವಾಗಿವೆ. ಕೆಲವು ಉದ್ದಿಮೆಗಳು ಸಾರ್ವಜನಿಕ ವಲಯದಲ್ಲಿದ್ದರೆ ಉಳಿದವು ಖಾಸಗಿ ಮಾಲೀಕತ್ವದಲ್ಲಿವೆ.

### 1.1.5 ಕಲೆ, ಸಾಹಿತ್ಯ, ಜಾನಪದ, ನಾಟಕ, ನೃತ್ಯ

ಪ್ರಾಚೀನ ಕಾಲದಿಂದಲೂ ಈ ವಿಭಾಗವು ಕಲೆ, ಸಾಹಿತ್ಯಕ್ಕೆ ಹೆಸರುವಾಸಿಯಾಗಿದೆ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭುಗಳು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಗೆ ಸೇರಿದವರು. ಅದೇ ರೀತಿಯಲ್ಲಿ ದಾಸ ಪರಂಪರೆಗೆ ಸೇರಿದ ಶ್ರೀಪಾದರಾಯರು ಮುಂತಾದವರು ಬೆಂಗಳೂರು ವಿಭಾಗಕ್ಕೆ ಸೇರಿದವರು.

©KTBS NOT TO BE REPUBLISHED


ಮಾಸ್ತಿ ವೆಂಕಟೇಶ ಅಯ್ಯಂಗಾರ್


ಕುವೆಂಪು


ಯು.ಆರ್. ಅನಂತಮೂರ್ತಿ


ಜಿ.ಎಸ್. ಶಿವರುದ್ರಪ್ಪ


ನಿಸಾರ್ ಅಹಮದ್


ಪಿ. ಲಂಕೇಶ್


ಡಿ.ವಿ. ಗುಂಡಪ್ಪ


ಅನುಪಮ ನಿರಂಜನ


ಎಂ. ಕೆ. ಇಂದಿರಾ


ನಾ. ಡಿಸೋಜ

ಆಧುನಿಕ ಕಾಲಕ್ಕೆ ಬಂದರೆ ರಾಷ್ಟ್ರಕವಿ ಹಾಗೂ ಜ್ಞಾನಪೀಠ ಪುರಸ್ಕೃತ ಸಾಹಿತಿ ಕುವೆಂಪು ಈ ವಿಭಾಗಕ್ಕೆ ಸೇರಿದವರು. ಈ ವಿಭಾಗದ ಇನ್ನಿಬ್ಬರು ಜ್ಞಾನಪೀಠ ಪುರಸ್ಕೃತ ಸಾಹಿತಿಗಳು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಾಗೂ ಯು. ಆರ್. ಅನಂತಮೂರ್ತಿ. ಡಿ. ವಿ. ಗುಂಡಪ್ಪ, ನಿಸಾರ್ ಅಹಮದ್, ಟಿ. ಪಿ. ಕೈಲಾಸಂ, ಎಂ. ಕೆ. ಇಂದಿರಾ, ತ.ರಾ.ಸು, ಡಾ. ಅನುಪಮಾ ನಿರಂಜನ, ಹಾ. ಮಾ. ನಾಯಕ, ವಿ. ಸೀತಾರಾಮಯ್ಯ, ಬಿ. ಜಿ. ಎಲ್. ಸ್ವಾಮಿ, ಎಂ. ವಿ. ಸೀತಾರಾಮಯ್ಯ, ಕೆ. ವಿ. ಸುಬ್ಬಣ್ಣ, ಜಿ. ವೆಂಕಟಸುಬ್ಬಯ್ಯ, ಜಿ. ಎಸ್. ಶಿವರುದ್ರಪ್ಪ, ಬರಗೂರು ರಾಮಚಂದ್ರಪ್ಪ, ಡಾ. ಡಿ. ಆರ್. ನಾಗರಾಜ್, ಡಾ. ಸಿದ್ಧಲಿಂಗಯ್ಯ, ನಾ. ಡಿಸೋಜ, ದೊಡ್ಡರಂಗೇಗೌಡ , ಪ್ರತಿಭಾನಂದ ಕುಮಾರ ಮುಂತಾದವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾಹಿತಿಗಳು.

ಸಾಹಿತ್ಯದಷ್ಟೇ ನಾಟಕ ಕ್ಷೇತ್ರದಲ್ಲಿಯೂ ವಿಭಾಗದ ಸಾಧನೆ ಮಹತ್ವದ್ದಾಗಿದೆ. ಗುಬ್ಬಿವೀರಣ್ಣ ಅವರ ಹೆಸರು ಕನ್ನಡ ನಾಟಕ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ. ನಾಟಕರತ್ನ, ನಾಟಕ ಸಾರ್ವಭೌಮ ಎಂಬ ಬಿರುದುಗಳು ಅವರಿಗಿದ್ದವು. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಗಮನಿಸಬೇಕಾದ ಇನ್ನೊಂದು ಹೆಸರು – ಸುಬ್ಬಯ್ಯ ನಾಯ್ಡು ಅವರದು. ಇವರು ಕನ್ನಡದ ಮೊದಲನೇ ವಾಕ್ಚಿತ್ರ 'ಸತಿ ಸುಲೋಚನ'ದ ನಾಯಕ ನಟರು. ಕಲ್ಚರ್ಡ್ ಕಮೆಡಿಯನ್ ಎಂದು ಹೆಸರು ಮಾಡಿದ ಕೆ. ಹಿರಣ್ಣಯ್ಯ ಮತ್ತು ಅವರ ಪುತ್ರ ಮಾಸ್ಟರ್ ಹಿರಣ್ಣಯ್ಯ ಅವರ ರಂಗಭೂಮಿ ಕೊಡುಗೆ ಪ್ರಶಂಸನೀಯ. ನೃತ್ಯ ಲೋಕಕ್ಕೆ ಅಪಾರ ಕಾಣಿಕೆ ನೀಡಿರುವ ಶ್ರೀಮತಿ ಮಾಯಾರಾವ್ ಬೆಂಗಳೂರಿನವರು. ಬೆಂಗಳೂರು ಈಗ ಚಲನಚಿತ್ರೋದ್ಯಮದ ಪ್ರಮುಖ ಕೇಂದ್ರವಾಗಿದೆ. ನಟರಾದ ಡಾ. ರಾಜ್‌ಕುಮಾರ್, ಡಾ. ವಿಷ್ಣುವರ್ಧನ್, ಶಂಕರನಾಗ್, ಅಂಬರೀಷ್ ಮುಂತಾದವರು ಈ ರಂಗದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಜನಪದ ಸಾಹಿತ್ಯ ಮತ್ತು ಕಲೆಗೆ ಈ ವಿಭಾಗ ಪ್ರಸಿದ್ಧಿಯಾಗಿದೆ. ಪ್ರಸಿದ್ಧ ಜನಪದ ತಜ್ಞರಾದ ಸಾಹಿತಿ ಎಚ್.ಎಲ್. ನಾಗೇಗೌಡ ಅವರು ಸ್ಥಾಪಿಸಿರುವ 'ಜಾನಪದ ಲೋಕ' ರಾಮನಗರ ಜಿಲ್ಲೆಯಲ್ಲಿದೆ.

©KTBS NOT TO BE REPUBLISHED



ಡಾ. ರಾಜಕುಮಾರ್



ಡಾ. ವಿಷ್ಣುವರ್ಧನ್



ಶಂಕರನಾಗ್



ಮಾಯಾರಾವ್



ಸುಬ್ಬಯ್ಯ ನಾಯ್ಡು



ಗುಬ್ಬಿ ವೀರಣ್ಣ



ಜಾನಪದ ಲೋಕ

## ಬೆಂಗಳೂರು ವಿಭಾಗದ ಪ್ರಸಿದ್ಧ ಜನಪದ ಕಲೆಗಳು:

ಬೆಂಗಳೂರಿನಲ್ಲಿ ಪ್ರತಿ ವರ್ಷ ನಡೆಯುವ ಕರಗ ಉತ್ಸವ ಒಂದು ಜನಪದ ಪ್ರಕಾರವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧವಾದ ಸೋಮನ ಕುಣಿತ ಮತ್ತೊಂದು ಜಾನಪದ ಪ್ರದರ್ಶನ ಕಲೆಯಾಗಿದೆ. ಈ ವಿಭಾಗಕ್ಕೆ ವಿಶೇಷವಾದ ಜಾನಪದ ನಾಟಕವೆಂದರೆ ಮೂಡಲಪಾಯ ಯಕ್ಷಗಾನ. ಗಾರುಡಿ ಕುಣಿತ, ಡೊಳ್ಳು ಕುಣಿತ, ಕಂಸಾಲೆ ಕುಣಿತ ಮುಂತಾದವು ಜಾನಪದ ಕಲೆಗಳಾಗಿವೆ. ಚಿತ್ರಕಲೆಗೆ ಆರ್.ಎಸ್. ನಾಯ್ಡು, ರುಮಾಲೆ ಚನ್ನಬಸವಯ್ಯ, ವೆಂಕಟಪ್ಪ ಮುಂತಾದವರ ಕೊಡುಗೆ ಅನನ್ಯ.

@KTBS NOT TO BE REPUBLISHED



ಕರಗ ಉತ್ಸವ



ವೆಂಕಟಪ್ಪ ಆರ್ಟ್ ಗ್ಯಾಲರಿ

### 1.1.6 ಶಿಕ್ಷಣ ಮತ್ತು ಆರೋಗ್ಯ

ಬೆಂಗಳೂರು ವಿಭಾಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉನ್ನತ ಸಾಧನೆ ಮಾಡಿದೆ. ಭಾರತ ರತ್ನ ಪ್ರಶಸ್ತಿ ಪಡೆದ ಇಬ್ಬರು ಈ ವಿಭಾಗದ ಕೋಲಾರ ಜಿಲ್ಲೆಗೆ ಸೇರಿದ್ದಾರೆ. ಅವರಲ್ಲಿ ಒಬ್ಬರು ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಮತ್ತೊಬ್ಬರು ವಿಜ್ಞಾನಿ ಸಿ. ಎನ್. ಆರ್. ರಾವ್. ನೊಬೆಲ್ ಪ್ರಶಸ್ತಿ ಪಡೆದ ಸರ್. ಸಿ. ವಿ. ರಾಮನ್ ಅವರು ಬೆಂಗಳೂರಿನಲ್ಲಿ ಸಂಶೋಧನೆ ನಡೆಸಿದ್ದರು.

ಬೆಂಗಳೂರು ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿದೆ. ಬೆಂಗಳೂರು ವಿಭಾಗದಲ್ಲಿ ಅನೇಕ ಪ್ರಸಿದ್ಧ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿವೆ. ಇದಲ್ಲದೆ ಇಲ್ಲಿ ಕೇಂದ್ರ ಸರ್ಕಾರದ ಸಂಶೋಧನಾ ಸಂಸ್ಥೆಗಳು ಮತ್ತು ವೈಜ್ಞಾನಿಕ ಪ್ರಯೋಗಾಲಯಗಳಿವೆ. ಬೆಂಗಳೂರು, ತುಮಕೂರು, ಶಿವಮೊಗ್ಗ, ದಾವಣಗೆರೆಗಳಲ್ಲಿ ವಿಶ್ವವಿದ್ಯಾಲಯಗಳಿವೆ. ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾಲಯವಿದೆ. ಸ್ವಾತಂತ್ರ್ಯಪೂರ್ವದಿಂದಲೂ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಅನೇಕ ಧಾರ್ಮಿಕ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿವೆ. ಸಿದ್ಧಗಂಗಾ ಮಠವು ಶ್ರೀ ಶಿವಕುಮಾರಸ್ವಾಮಿಗಳ ನೇತೃತ್ವದಲ್ಲಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹದ ಕಾರ್ಯ ನಡೆಸುತ್ತಿದೆ. ರಾಮನಗರ ಜಿಲ್ಲೆಯಲ್ಲಿ ಜನಿಸಿದ ಶ್ರೀ ಬಾಲಗಂಗಾಧರ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಳೆದ ಆದಿಚುಂಚನಗಿರಿ ಮಠದ ಶೈಕ್ಷಣಿಕ ಸೇವೆಯು ಅಪೂರ್ವವಾಗಿದ್ದು ಮೂಲಶಿಕ್ಷಣ, ವೃತ್ತಿ ಶಿಕ್ಷಣದ ಕಾಲೇಜುಗಳನ್ನು ನಡೆಸುತ್ತಿದೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠ ಮತ್ತು ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ.

NOT TO BE REPUBLISHED © KTBS



ಶ್ರೀ ಶಿವಕುಮಾರಸ್ವಾಮೀಜಿ



ಸಿದ್ಧಗಂಗಾ ಮಠ



ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಆರೋಗ್ಯಕ್ಕೆ ಸಂಬಂಧಿಸಿದಂತೆಯೂ ಈ ವಿಭಾಗವು ಮಹತ್ವದ ಸಾಧನೆ ಮಾಡಿದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಗಿದೆ. ಶಿಶುಮರಣ ಪ್ರಮಾಣ ಕಡಿಮೆಯಾಗಿದೆ. ಪೋಲಿಯೋ, ಸಿಡುಬು ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳು ಅಪೌಷ್ಠಿಕತೆಯನ್ನು ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಆರೋಗ್ಯ ಉಪಕೇಂದ್ರಗಳು ಜನರಿಗೆ ವೈದ್ಯಕೀಯ ಸೌಲಭ್ಯ ಒದಗಿಸುತ್ತಿವೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ

ಸುಸಜ್ಜಿತವಾದ ಜಿಲ್ಲಾ ಆಸ್ಪತ್ರೆಗಳಿವೆ. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳಿವೆ. ತಾಲ್ಲೂಕು ಆಸ್ಪತ್ರೆಗಳು ತಾಲ್ಲೂಕು ಕೇಂದ್ರಗಳಲ್ಲಿವೆ. ಸಂತಾನೋತ್ಪತ್ತಿ ಆರೋಗ್ಯವನ್ನು ಉತ್ತಮ ಪಡಿಸುವುದಕ್ಕಾಗಿ ಸರ್ಕಾರವು ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 24/7 (ದಿನದ ಎಲ್ಲಾ ಹೊತ್ತೂ ತೆರೆದಿರುವ) ಕೇಂದ್ರಗಳೆಂದು ಘೋಷಿಸಿದೆ. ಗ್ರಾಮೀಣ ಪ್ರದೇಶದಲ್ಲಿನ ಗರ್ಭಿಣಿಯರಿಗೆ ಸೇವೆ ಒದಗಿಸುವುದಕ್ಕಾಗಿ ಸಂಚಾರಿ ವಾಹನ ವ್ಯವಸ್ಥೆಯನ್ನು ಮಾಡಲಾಗಿದೆ.

### 1.1.7 ಸಾಂಸ್ಕೃತಿಕ ಸಂಪತ್ತು

ಬೆಂಗಳೂರು ವಿಭಾಗವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಇಲ್ಲಿ ಅರಣ್ಯ ಮತ್ತು ಪ್ರಾಣಿ ಸಂಪತ್ತಿದೆ. ನದಿಗಳು, ಕಣಿವೆಗಳು, ಗಿರಿಧಾಮಗಳು, ಧಾರ್ಮಿಕ ಸ್ಥಳಗಳು, ಪ್ರವಾಸಿ ಕೇಂದ್ರಗಳು, ಸಾಂಸ್ಕೃತಿಕ ಉತ್ಸವಗಳು, ಜಾತ್ರೆ, ಹಬ್ಬಗಳು ಮುಂತಾದ ಸಂಗತಿಗಳಿಂದ ಕೂಡಿ ಇದು ಸಮೃದ್ಧವಾದ ವಿಭಾಗವಾಗಿದೆ. ರಾಜಕೀಯ ಮುತ್ಸದ್ದಿಗಳು ರಾಜ್ಯ ನಿರ್ಮಾಣಕ್ಕೆ ಅಪಾರ ಕಾಣಿಕೆ ನೀಡಿದ್ದಾರೆ. ಕರ್ನಾಟಕ ಏಕೀಕರಣ ರೂವಾರಿ ಕೆಂಗಲ್ ಹನುಮಂತಯ್ಯ ಅವರು ಈ ವಿಭಾಗಕ್ಕೆ ಸೇರಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ವಿಧಾನಸೌಧ ಕಟ್ಟಡ ನಿರ್ಮಾಣವಾಯಿತು. ಮತ್ತೊಬ್ಬ ಏಕೀಕರಣ ಹೋರಾಟಗಾರ ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿಯಾಗಿ ರಾಜ್ಯ ನಿರ್ಮಾಣ ಕಾರ್ಯಗಳನ್ನು ಕೈಗೊಂಡರು. ನಮ್ಮ ರಾಜ್ಯದಲ್ಲಿ ಸಮಾಜವಾದಿ ಚಳವಳಿಗೆ ಅಡಿಪಾಯ ಹಾಕಿದವರು ಶಾಂತವೇರಿ ಗೋಪಾಲಗೌಡರು ಶಿವಮೊಗ್ಗ ಜಿಲ್ಲೆಯವರು. ಪರಿಸರ ಪೋಷಣೆಗೆ ಮತ್ತೊಂದು ಹೆಸರು ಸಾಲುಮರದ ತಿಮ್ಮಕ್ಕ. ನಮ್ಮ ದೇಶದ ಕ್ರಿಕೆಟ್‌ಗೆ ನಮ್ಮ ಕೊಡುಗೆ ಅನಿಲ್ ಕುಂಬ್ಳೆ. ಯೋಗ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿರುವ ಬಿ.ಕೆ.ಎಸ್. ಅಯ್ಯಂಗಾರ್ ಮತ್ತು ಮಲ್ಲಾಡಿಹಳ್ಳಿ ಶ್ರೀರಾಘವೇಂದ್ರ ಸ್ವಾಮೀಜಿ ಈ ವಿಭಾಗದವರು. ಈ ವಿಭಾಗದಲ್ಲಿ ಅನೇಕ ಪ್ರೇಕ್ಷಣಿಯ ಸ್ಥಳಗಳಿವೆ.

©KTBS NOT TO BE REPUBLISHED



ಲಾಲ್‌ಬಾಗ್

### 1.1.8 ಸ್ವಾತಂತ್ರ್ಯ ಹೋರಾಟಗಾರರು


ಕೆಂಗಲ್ ಹನುಮಂತಯ್ಯ


ಎಸ್. ನಿಜಲಿಂಗಪ್ಪ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಈ ವಿಭಾಗದ ಅನೇಕ ಮುತ್ಸದ್ದಿಗಳು ಭಾಗವಹಿಸಿದ್ದರು. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ. ಸಿ. ರೆಡ್ಡಿ ಅವರು, ಎರಡನೆಯ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿದಂತೆ ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ, ಕಡಿದಾಳ್ ಮಂಜಪ್ಪ, ತಿ.ತಾ. ಶರ್ಮ, ಭಾಗೀರಥಮ್ಮ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕೆಂಗಲ್ ಹನುಮಂತಯ್ಯ ಮತ್ತು ಎಸ್. ನಿಜಲಿಂಗಪ್ಪ ಅವರು ಕರ್ನಾಟಕ ಏಕೀಕರಣದ ರೂವಾರಿಗಳೂ ಹೌದು.

@KTBS
NOT TO BE REPUBLISHED

## ಅಭ್ಯಾಸಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಆಳಿದ ಮೂರು ರಾಜ ಮನೆತನಗಳು ಯಾವುವು?
2. ಬೆಂಗಳೂರು ವಿಭಾಗದಲ್ಲಿ ಎಷ್ಟು ಜಿಲ್ಲೆಗಳಿವೆ?
3. ಈ ವಿಭಾಗವನ್ನು ಆಳಿದ ಎರಡು ಪಾಳೆಪಟ್ಟುಗಳ ಹೆಸರನ್ನು ಬರೆಯಿರಿ.
4. ಪ್ರಾಕೃತಿಕ ಸಂಪನ್ಮೂಲ ಎಂದರೇನು? ಉದಾಹರಣೆ ನೀಡಿ
5. ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಯಾವುದು?
6. ಬೆಂಗಳೂರು ವಿಭಾಗದಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಲು ಕಾರಣಗಳೇನು?
7. ಬೆಂಗಳೂರು ವಿಭಾಗದ ಎರಡು ಜಲಪಾತಗಳ ಹೆಸರನ್ನು ಬರೆಯಿರಿ.
8. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಯಾವ ಜಿಲ್ಲೆಯಲ್ಲಿದೆ?
9. ಬೆಂಗಳೂರು ವಿಭಾಗದಲ್ಲಿರುವ ಅತಿ ಎತ್ತರದ ಗುಡ್ಡದ ಹೆಸರನ್ನು ಬರೆಯಿರಿ
10. ಬೆಂಗಳೂರು ವಿಭಾಗದಲ್ಲಿರುವ ಎರಡು ಪಕ್ಷಿಧಾಮಗಳ ಹೆಸರನ್ನು ತಿಳಿಸಿ.

11. ರಾಮನಗರ ಜಿಲ್ಲೆಯಲ್ಲಿರುವ ಪಕ್ಷಿಧಾಮದಲ್ಲಿ ಯಾವ ಪಕ್ಷಿಯನ್ನು ರಕ್ಷಿಸಲಾಗುತ್ತಿದೆ?

12. ಬೆಂಗಳೂರು ವಿಭಾಗದಲ್ಲಿನ ಪ್ರಮುಖ ಆಹಾರ ಬೆಳೆಗಳು ಯಾವುದು?

13. ಹಿಪ್ಪುನೇರಳೆ ಎಲೆಯು ಯಾವ ಉದ್ದಿಮೆಗೆ ಕಚ್ಚಾ ಸಾಮಗ್ರಿಯಾಗಿದೆ?

14. ಭದ್ರಾವತಿಯಲ್ಲಿರುವ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯನ್ನು ಯಾವ ವರ್ಷ ಆರಂಭಿಸಲಾಯಿತು?

15. ಬೆಂಗಳೂರು ವಿಭಾಗದಲ್ಲಿ ಯಾವ ಸ್ಥಳಗಳಲ್ಲಿ ಸಿದ್ಧ ಉಡುಪು ಪಾರ್ಕುಗಳನ್ನು ಸ್ಥಾಪಿಸಲಾಗಿದೆ?

16. ಬೆಂಗಳೂರು ವಿಭಾಗದ ಮೂವರು ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಹೆಸರಿಸಿ.

17. ಪ್ರಸಿದ್ಧ ಜಾನಪದ ಮ್ಯೂಸಿಯಂ 'ಜಾನಪದ ಲೋಕ'ವನ್ನು ಸ್ಥಾಪಿಸಿದವರಾರು?

18. ಬೆಂಗಳೂರು ನಗರದಲ್ಲಿ ಪ್ರತಿ ವರ್ಷ ನಡೆಯುವ ಪ್ರಸಿದ್ಧ ಉತ್ಸವ ಯಾವುದು?

19. ಭಾರತರತ್ನ ಪ್ರಶಸ್ತಿ ಪಡೆದ ಬೆಂಗಳೂರು ವಿಭಾಗದ ಇಬ್ಬರ ಹೆಸರನ್ನು ಬರೆಯಿರಿ.

20. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯ ಹೆಸರನ್ನು ಬರೆಯಿರಿ.

21. ಇಬ್ಬರು ಕರ್ನಾಟಕ ಏಕೀಕರಣದ ರೂವಾರಿಗಳ ಹೆಸರನ್ನು ಬರೆಯಿರಿ.

@KTBS NOT TO BE REPUBLISHED

### ಚಟುವಟಿಕೆಗಳು

- ಬನ್ನೇರುಘಟ್ಟ ರಾಷ್ಟ್ರೀಯ ಪಾರ್ಕಿಗೆ ಭೇಟಿ ನೀಡಿ ಅಲ್ಲಿರುವ ಪ್ರಾಣಿಗಳ ಪಟ್ಟಿಯನ್ನು ಸಿದ್ಧಪಡಿಸಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ. ಇದರ ಒಂದು ವರದಿಯನ್ನು ತಯಾರಿಸಿ.
- ಬೆಂಗಳೂರು ನಗರದಲ್ಲಿರುವ ಪ್ರಮುಖ ಕಾರ್ಖಾನೆಗಳ ಪಟ್ಟಿ ಮಾಡಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ವರದಿ ಸಿದ್ಧಪಡಿಸಿ.

## 1.2 ಮೈಸೂರು ವಿಭಾಗ

ನಮ್ಮ ನಾಡಿನ ಮತ್ತೊಂದು ಆಡಳಿತ ವಿಭಾಗವೆಂದರೆ ಮೈಸೂರು ವಿಭಾಗ. ಮೈಸೂರು ಆರಂಭದಲ್ಲಿ ಒಡೆಯರ್ ರಾಜ್ಯದ ರಾಜಧಾನಿಯಾಗಿತ್ತು. ಈ ವಿಭಾಗದಲ್ಲಿ ಎಂಟು ಜಿಲ್ಲೆಗಳಿವೆ. ಅವು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣಕನ್ನಡ, ಚಾಮರಾಜನಗರ ಮತ್ತು ಕೊಡಗು. ಈ ವಿಭಾಗದ ಆಡಳಿತ ಕೇಂದ್ರ ಮೈಸೂರು. ಈ ವಿಭಾಗವು ನದಿಗಳಿಗೆ, ಪರ್ವತ ಶ್ರೇಣಿಗಳಿಗೆ, ಅರಣ್ಯಗಳಿಗೆ, ವನ್ಯಮೃಗಗಳಿಗೆ, ಕಾಫಿ ತೋಟಗಳಿಗೆ, ಕರಾವಳಿಗೆ, ಬಂದರುಗಳಿಗೆ ಪ್ರಸಿದ್ಧವಾಗಿದೆ.




ಮೈಸೂರು ವಿಭಾಗದ ಜಿಲ್ಲಾವಾರು ಭೂಪಟ

@KTBS NOT TO BE REPUBLISHED

### 1.2.1 ಚಾರಿತ್ರಿಕ ಹಿನ್ನೆಲೆ

ಮೈಸೂರಿನ ರಾಜೇತಿಹಾಸ, ಸ್ಪಷ್ಟವಾಗಿ ಆರಂಭವಾಗುವುದು ಗಂಗರ ಕಾಲದಿಂದ. ತಲಕಾಡು ಗಂಗರ ರಾಜಧಾನಿಯಾಗಿತ್ತು. ಅನಂತರ ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೈಸೂರು ಪ್ರದೇಶದಲ್ಲಿ ಆಳ್ವಿಕೆ ನಡೆಸಿದರು.



ಚಿಕ್ಕದೇವರಾಜ ಒಡೆಯರ್

ಮೈಸೂರು ಅನೇಕ ಶತಮಾನಗಳ ಕಾಲ ಒಡೆಯರ್ ಅವರ ಮನೆತನದ ಆಳ್ವಿಕೆಯಲ್ಲಿತ್ತು. ಕೆಲವು ವರ್ಷಗಳ ಕಾಲ ಅದು ಹೈದರಾಲಿ ಮತ್ತು ಅವರ ಮಗ ಟಿಪ್ಪೂಸುಲ್ತಾನ್ ಅವರುಗಳ ಆಡಳಿತದ ವಶದಲ್ಲಿತ್ತು. ಚಾರಿತ್ರಿಕವಾಗಿ ಮತ್ತು ಪೌರಾಣಿಕವಾಗಿ ಮೈಸೂರನ್ನು ಮಹಿಷನಾಡು ಎಂದು ಕರೆಯಲಾಗುತ್ತದೆ. ಪುರಾಣ ಕಥೆಯ ಪ್ರಕಾರ ದೇವಿ ಪಾರ್ವತಿಯು ಚಾಮುಂಡೇಶ್ವರಿ ರೂಪ ಧರಿಸಿ, ರಾಕ್ಷಸನಾಗಿದ್ದ ಮಹಿಷಾಸುರನನ್ನು ಸಂಹರಿಸಿದಳು. ಮಹಿಷಾಸುರನನ್ನು ಸಂಹರಿಸಿದ ಸ್ಥಳವೇ ಮೈಸೂರಾಯಿತು. ಯದುರಾಯ ಅನ್ನುವವರು ಒಡೆಯರ್ ಮನೆತನದ ಮೊದಲ ಅರಸು. ಚಿಕ್ಕದೇವರಾಜ ಒಡೆಯರ್ ಅವರು ಪ್ರಸಿದ್ಧ ದೊರೆಯಾಗಿದ್ದರು. ಅವರ ನಂತರ ಸಿಂಹಾಸನಕ್ಕೆ ಬಂದ ಅರಸರು ದುರ್ಬಲರಾಗಿದ್ದರು.

ಆ ಸಮಯದಲ್ಲಿ ಸೇನಾಧಿಪತಿಯಾಗಿದ್ದ ಹೈದರಾಲಿಯು ಆಳ್ವಿಕೆಯನ್ನು ಅಕ್ರಮವಾಗಿ ವಶಪಡಿಸಿಕೊಂಡ. ಅವನು ಮತ್ತು ಅವನ ಮಗ ಟಿಪ್ಪೂಸುಲ್ತಾನ್ 1761 ರಿಂದ 1799 ರವರೆಗೆ ಆಡಳಿತ ನಡೆಸಿದರು.

ಟಿಪ್ಪೂಸುಲ್ತಾನನ ಮರಣದ ನಂತರ ಮೈಸೂರಿನ ಆಡಳಿತವು ಮತ್ತೆ ಒಡೆಯರ ಕೈಗೆ ಬಂತು. ಬ್ರಿಟಿಷರು 1831ರಲ್ಲಿ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆದರೆ 1881ರಲ್ಲಿ ಮತ್ತೆ ಆಳ್ವಿಕೆಯನ್ನು ಒಡೆಯರ ವಶಕ್ಕೆ ನೀಡಿದರು. ಕಳೆದ 20ನೆಯ ಶತಮಾನದ ಆದಿ ಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದಲ್ಲಿ ಅನೇಕ ಜನಪರ ಕಾರ್ಯಗಳಾದವು ವಿಶೇಷವಾಗಿ ಶಿಕ್ಷಣ, ಸಂಸ್ಕೃತಿ, ನೀರಾವರಿಗೆ ಇವರು ಆದ್ಯತೆ ನೀಡಿದರು. ಸರ್. ಎಮ್. ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಅವರ ದಿವಾನಗಿರಿಯಲ್ಲಿ ಮೈಸೂರು ಅಪೂರ್ವ ಯಶಸ್ಸನ್ನು ಪಡೆಯಿತು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮೈಸೂರು ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು.


ನಾಲ್ವಡಿ ಕೃಷ್ಣರಾಜ ಒಡೆಯರ್


ಸರ್. ಎಮ್. ವಿಶ್ವೇಶ್ವರಯ್ಯ


ಸರ್. ಮಿರ್ಜಾ ಇಸ್ಮಾಯಿಲ್

© NOT TO BE REPUBLISHED

ಈ ವಿಭಾಗದ ಬೇರೆ ಬೇರೆ ಜಿಲ್ಲೆಗಳಲ್ಲಿ ವಿವಿಧ ರಾಜ ಮನೆತನಗಳು ಆಳ್ವಿಕೆ ನಡೆಸಿದ ಚರಿತ್ರೆಯಿದೆ. ಕೊಡಗು ಪ್ರದೇಶದಲ್ಲಿ ಅನೇಕ ರಾಜ ಮನೆತನಗಳು ಆಡಳಿತ ನಡೆಸಿದವು. ಹಾಲೇರಿ ಮನೆತನವು 17ನೆಯ ಶತಮಾನದಲ್ಲಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿತು. ಬಿದನೂರು ಇವರ ರಾಜಧಾನಿಯಾಗಿತ್ತು. ಹಾಲೇರಿ ಅರಸರಲ್ಲಿ ದೊಡ್ಡವೀರಪ್ಪ ಪ್ರಸಿದ್ಧ ದೊರೆ. ಚಿಕ್ಕವೀರರಾಜ ಕೊನೆಯ ಅರಸ. ಇವನು ದುರ್ಬಲನಾಗಿದ್ದ. ಇದನ್ನು ಬಳಸಿಕೊಂಡು ಬ್ರಿಟಿಷರು ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಸ್ವಾತಂತ್ರ್ಯಾನಂತರ ಕೊಡಗು ಪ್ರತ್ಯೇಕ ರಾಜ್ಯವಾಗಿತ್ತು. ಆದರೆ 1956ರಲ್ಲಿ ಅದು ಕರ್ನಾಟಕದಲ್ಲಿ ವಿಲೀನಗೊಂಡಿತು. ಕೆಳದಿ ಸಂಸ್ಥಾನ ಮತ್ತೊಂದು ರಾಜಮನೆತನವಾಗಿದೆ.

ಕರ್ನಾಟಕದ ಕರಾವಳಿ ಪ್ರದೇಶವನ್ನು ತುಳುನಾಡು ಎಂದು ಕರೆಯುತ್ತಿದ್ದರು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡ ತುಳುನಾಡಲ್ಲಿ 7ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಅಳುಪ ಮನೆತನದ ಅರಸರು ಆಳ್ವಿಕೆ ನಡೆಸಿದರು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಉದ್ಯಾವರ, ಮಂಗಲಪುರ, ಹುಂಚ ಮತ್ತು ಬನವಾಸಿಗಳು ಅಳುಪರ ರಾಜಧಾನಿಗಳಾಗಿದ್ದವು. ತುಳುನಾಡಿನಲ್ಲಿ ಅನೇಕ ಪಾಳೆಗಾರರು ಆಡಳಿತ ನಡೆಸಿದರು. ಅವರಲ್ಲಿ ಪ್ರಸಿದ್ಧರಾದವರೆಂದರೆ ಪುತ್ತಿಗೆಯ ಚೌಟರು, ಬಂಗವಾಡಿಯ ಬಂಗರು, ಕಾರ್ಕಳದ ಬೈರವರಸರು, ಕಾಸರಗೋಡಿನ ಕುಂಬಳೆ ಅರಸರು ಮುಂತಾದವರು.

ಕರಾವಳಿ ಪ್ರದೇಶವನ್ನು ಬ್ರಿಟಿಷರು ಕೆನರ ಎಂದು ಕರೆದರು. ಈ ಪ್ರದೇಶವನ್ನು ಅವರು 1801ರಲ್ಲಿ ವಶಪಡಿಸಿಕೊಂಡರು. ಬ್ರಿಟಿಷರು ಕರಾವಳಿಯನ್ನು 1860ರಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂದು ವಿಭಜಿಸಿದರು. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ 1997ರಲ್ಲಿ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು.

### 1.2.2 ಪ್ರಾಕೃತಿಕ ಸಂಪನ್ಮೂಲ

ಈ ವಿಭಾಗವು ವಿವಿಧ ಹವಾಮಾನಗಳಿಂದ ಕೂಡಿದ ಪ್ರದೇಶವಾಗಿದೆ. ಈ ವಿಭಾಗಕ್ಕೆ ಸೇರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ವಿಶಾಲವಾದ ಕರಾವಳಿ ಪ್ರದೇಶವನ್ನು ಹೊಂದಿದೆ. ಪರ್ವತ ಶ್ರೇಣಿ, ದಟ್ಟ ಕಾಡುಗಳು ಮತ್ತು ಕರಾವಳಿ ಪ್ರದೇಶಗಳು ಒಟ್ಟಿಗೆ ಇಲ್ಲಿರುವುದರಿಂದ ಇಲ್ಲಿನ ವಾಯುಗುಣವನ್ನು ಉಷ್ಣ ವಲಯದ ಮಳೆಮಾರುತ ವಾತಾವರಣ ಎಂದು ಕರೆಯಲಾಗುತ್ತದೆ.

ಈ ವಿಭಾಗದಲ್ಲಿನ ಹವಾಮಾನವು ತೀವ್ರ ಚಳಿ ಮತ್ತು ಸರಾಸರಿ ಉಷ್ಣ ವಲಯದಿಂದ ಕೂಡಿದೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ಒಣ ಹವಾಮಾನದಿಂದ ಕೂಡಿವೆ. ಈ ವಿಭಾಗದಲ್ಲಿ ಉಡುಪಿಯು ಅತಿ ಹೆಚ್ಚು ಮಳೆಯನ್ನು ಪಡೆದರೆ ಮಂಡ್ಯ ಜಿಲ್ಲೆಯು ಅತಿ ಕಡಿಮೆ ಮಳೆಯನ್ನು ಪಡೆಯುತ್ತದೆ. ವಿವಿಧ ಹವಾಮಾನ, ವಿವಿಧ ಪ್ರಮಾಣದ ಮಳೆ, ಪರ್ವತಗಳು, ಅರಣ್ಯ ಮುಂತಾದ ವಿಭಿನ್ನತೆಯಿಂದಾಗಿ ಇಲ್ಲಿ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಇಲ್ಲಿ ಬೆಳೆಯುವ ಮುಖ್ಯ ಕೃಷಿ ಬೆಳೆಗಳೆಂದರೆ ರಾಗಿ, ಭತ್ತ, ಉದ್ದು, ಹೆಸರು, ಹುರುಳಿಕಾಳು, ಜೋಳ ಮುಂತಾದವು. ಇಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳೆಂದರೆ ಕಾಫಿ, ಕಬ್ಬು, ತಂಬಾಕು, ಅಡಕೆ, ಏಲಕ್ಕಿ, ಕಿತ್ತಳೆಹಣ್ಣು, ಪೈನಾಪಲ್, ಗೋಡಂಬಿ ಮುಂತಾದವು. ಭಾರತದಲ್ಲಿ ಕಾಫಿಯನ್ನು ಮೊದಲು ಚಿಕ್ಕಮಗಳೂರಿನಲ್ಲಿ ಬೆಳೆಯಲಾಯಿತು. ಈ ವಿಭಾಗದ ಅನೇಕ ಪ್ರದೇಶಗಳಲ್ಲಿ ವೀಳೆದೆಲೆಗಳನ್ನು ಬೆಳೆಯಲಾಗುತ್ತದೆ.

ಪ್ರಾಕೃತಿಕ ಸಂಪನ್ಮೂಲದ ದೃಷ್ಟಿಯಿಂದ ಇದು ಸಮೃದ್ಧ ವಿಭಾಗವಾಗಿದೆ. ಕೊಡಗು, ದಕ್ಷಿಣ ಕನ್ನಡ, ಮೈಸೂರು, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ವಿವಿಧ ಬಗೆಯ ಅರಣ್ಯಗಳಿವೆ. ತೇಗ, ಶ್ರೀಗಂಧ, ಹೊಂಗೆ, ನಂದಿ, ಮತ್ತಿ, ಮುಂತಾದವು ಇಲ್ಲಿ ಬೆಳೆಯುವ ಮರಗಳು. ಈ ಅರಣ್ಯಗಳು ಅನೇಕ ಬಗೆಯ ಉತ್ಪನ್ನಗಳಿಗೆ ಹೆಸರುವಾಸಿಯಾಗಿವೆ. ಗೋಂದು, ಜೇನುತುಪ್ಪ ಮತ್ತು ಮೇಣ, ಕಾಡುಹಣ್ಣು ಮುಂತಾದವು ಕಿರು ಅರಣ್ಯ ಉತ್ಪನ್ನಗಳು.

ಈ ವಿಭಾಗವು ಅನೇಕ ದೊಡ್ಡ ಮತ್ತು ಸಣ್ಣ ಪರ್ವತಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವು ಸುಬ್ರಹ್ಮಣ್ಯ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮಲೈಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ, ಚಾಮುಂಡಿ ಬೆಟ್ಟ, ಶ್ರವಣಬೆಳಗೊಳದ ಚಂದ್ರಗಿರಿ, ಇಂದ್ರಗಿರಿ ಮುಂತಾದವು ಪ್ರಸಿದ್ಧ ಬೆಟ್ಟಗಳು.

ದಟ್ಟವಾದ ಅರಣ್ಯಗಳಿಗೆ ಹೆಸರುವಾಸಿಯಾದ ಮೈಸೂರು ವಿಭಾಗವು ಜೀವವೈವಿಧ್ಯಕ್ಕೂ ಹೆಸರುವಾಸಿಯಾಗಿದೆ. ಹುಲಿ, ಚಿರತೆ, ಕಾಡುನಾಯಿ, ಜಿಂಕೆ, ನರಿ, ಕಾಡೆಮ್ಮೆ ವಿವಿಧ ಬಗೆಯ ಹಾವುಗಳು ಮುಂತಾದ ವನ್ಯಮೃಗಗಳು ಇಲ್ಲಿನ ಅರಣ್ಯಗಳಲ್ಲಿ ವಾಸವಾಗಿವೆ. ಮಂಡ್ಯ ಜಿಲ್ಲೆಯ ಬನ್ನೂರು ಉತ್ತಮ ತಳಿ ಟಗರುಗಳಿಗೆ ಹೆಸರುವಾಸಿಯಾಗಿದೆ.

NOT TO BE REPUBLISHED @KTBS

ಈ ವಿಭಾಗದ ಪ್ರಸಿದ್ಧ ನದಿಗಳು: ಕಾವೇರಿ, ಹೇಮಾವತಿ, ಹಾರಂಗಿ, ನೇತ್ರಾವತಿ, ಕುಮಾರಧಾರ, ವೇದಾವತಿ, ಕಪಿಲ, ಯಗಚಿ, ಗಂಗೊಳ್ಳಿ ಮುಂತಾದವು. ಇಲ್ಲಿ ಅನೇಕ ಪ್ರಸಿದ್ಧ ಜಲಪಾತಗಳಿವೆ. ಅವು: ಗಗನಚುಕ್ಕಿ ಭರಚುಕ್ಕಿ, ಅಬ್ಬೆ ಜಲಪಾತ, ಇರ್ಪು ಜಲಪಾತ, ಹೆಬ್ಬೆ ಜಲಪಾತ ಮುಂತಾದವು.

ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಮುಖ್ಯ ಖನಿಜಗಳೆಂದರೆ ಬಾಕ್ಸೈಟ್, ಫೆಲ್‌ಸೈಟ್, ಕ್ರೋಮೈಟ್, ಸುಣ್ಣಕಲ್ಲು, ಗ್ರಾನೈಟ್, ಮ್ಯಾಂಗನೀಸ್ ಮುಂತಾದವು. ನಮ್ಮ ದೇಶದಲ್ಲಿ ಫೆಲ್‌ಸೈಟ್ ಅದಿರು ಮೈಸೂರು ಜಿಲ್ಲೆಯಲ್ಲಿ ಮಾತ್ರ ದೊರೆಯುತ್ತದೆ. ಈ ವಿಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕರಾವಳಿ ಜಿಲ್ಲೆಗಳಾಗಿವೆ. ಇಲ್ಲಿ ಬಂದರುಗಳಿವೆ. ಈ ಜಿಲ್ಲೆಗಳು ಸಮುದ್ರ ಮೀನುಗಾರಿಕೆಗೆ ಹೆಸರುವಾಸಿಯಾಗಿವೆ. ಇಲ್ಲಿ ಸಂಸ್ಕರಿಸಿದ ಮೀನನ್ನು ರಫ್ತು ಮಾಡಲಾಗುತ್ತದೆ. ಸಾವಿರಾರು ಮೀನುಗಾರರಿಗೆ ಇದು ವರಮಾನದ ಮೂಲವಾಗಿದೆ. ಕೊಡಗು, ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳು ಮರಗಳ ದಿಮ್ಮಿಗಳ ಮಾರಾಟದ ಕೇಂದ್ರಗಳಾಗಿವೆ.




ಗಗನಚುಕ್ಕಿ – ಭರಚುಕ್ಕಿ ಜಲಪಾತ



ಕರಾವಳಿಯಲ್ಲಿ ಮೀನುಗಾರಿಕೆ

## 1.2.3 ಅರಣ್ಯಗಳು, ವನ್ಯಮೃಗಗಳು, ರಾಷ್ಟ್ರೀಯ ಉದ್ಯಾನಗಳು

ಮೈಸೂರು ಅರಣ್ಯಗಳ ನಾಡು. ಮೈಸೂರು, ಕೊಡಗು, ಚಿಕ್ಕಮಗಳೂರು, ಹಾಸನ ಮುಂತಾದ ಜಿಲ್ಲೆಗಳು ವೈವಿಧ್ಯಮಯವಾದ ದಟ್ಟ ಅರಣ್ಯ ಪ್ರದೇಶದಿಂದ ಕೂಡಿವೆ. ಬಂಡೀಪುರ, ನಾಗರಹೊಳೆ, ಮಲೈಮಹದೇಶ್ವರ ಬೆಟ್ಟ, ಪುಷ್ಪಗಿರಿ, ಮುಂತಾದವು ಪ್ರಸಿದ್ಧ ಅರಣ್ಯ ಪ್ರದೇಶಗಳಾಗಿವೆ. ಇಲ್ಲಿ ಹತ್ತಾರು ಬಗೆಯ ಕಿರು ಅರಣ್ಯ ಉತ್ಪನ್ನಗಳು ದೊರೆಯುತ್ತವೆ. ಸಾವಿರಾರು ಬುಡಕಟ್ಟು ಜನರಿಗೆ ಕಿರು ಅರಣ್ಯ ಉತ್ಪನ್ನಗಳು ವರಮಾನದ, ಆಹಾರದ ಮೂಲಗಳಾಗಿವೆ. ಮೈಸೂರು ವಿಭಾಗದ ಜಿಲ್ಲೆಗಳು ಅನೇಕ ಬುಡಕಟ್ಟು ಸಮುದಾಯಗಳಿಗೆ ನೆಲೆಯಾಗಿವೆ. ಜೇನುಕುರುಬರು ಅತಿ ಹೆಚ್ಚು ಜನಸಂಖ್ಯೆಯ ಬುಡಕಟ್ಟು ಸಮುದಾಯವಾಗಿದೆ. ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ.



ಬುಡಕಟ್ಟು ಸಮುದಾಯ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೊರಗ ಬುಡಕಟ್ಟು ಸಮುದಾಯವಿದೆ. ಅತ್ಯಂತ ಹಿಂದುಳಿದ ಸಮುದಾಯ ಇದಾಗಿದೆ. ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯವೆಂದರೆ ಮಲೆಕುಡಿಯರು. ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಂಡು ಬರುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುವ ಸೋಲಿಗರು ಮತ್ತೊಂದು ಬುಡಕಟ್ಟು ಸಮುದಾಯ. ಇವರಲ್ಲದೆ ಯರವರು, ಹಕ್ಕಿಪಿಕ್ಕಿಗಳು, ಹಲಸರು, ಮೇದಾರರು ಮುಂತಾದ ಬುಡಕಟ್ಟು ಸಮುದಾಯಗಳಿವೆ.



**ಹುಲಿ**



**ಆನೆ**



**ಕಾಡೆಮ್ಮೆ**

ಹುಲಿ ನಮ್ಮ ರಾಷ್ಟ್ರ ಪ್ರಾಣಿ. ಹುಲಿಸಂರಕ್ಷಣಾ ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿದೆ. ರಾಜ್ಯದಲ್ಲಿರುವ ಐದು ಹುಲಿ ಸಂರಕ್ಷಣಾ ವನ್ಯಮೃಗ ಧಾಮಗಳಲ್ಲಿ ಮೂರು ಮೈಸೂರು ವಿಭಾಗದಲ್ಲಿವೆ. ಬಂಡೀಪುರ, ನಾಗರಹೊಳೆ, ಭದ್ರಾ ಹುಲಿ ಸಂರಕ್ಷಣಾ ಮೀಸಲು ಪ್ರದೇಶಗಳಾಗಿವೆ. ಇದೇ ರೀತಿಯಲ್ಲಿ ಆನೆಗಳ ಸಂರಕ್ಷಣಾ ಯೋಜನೆಯು ಇಲ್ಲಿ ಅನುಷ್ಠಾನದಲ್ಲಿದೆ. ಆನೆಗಳ ದಂತಕ್ಕಾಗಿ, ಹುಲಿ ಚರ್ಮಕ್ಕಾಗಿ ಅವುಗಳನ್ನು ಅಕ್ರಮವಾಗಿ ಕೊಲ್ಲಲಾಗುತ್ತಿದೆ. ಅದನ್ನು ತಡೆದು ಅವುಗಳ ಸಂತತಿಯನ್ನು ರಕ್ಷಿಸುವ ಉದ್ದೇಶದಿಂದ ಹುಲಿ ಸಂರಕ್ಷಣಾ ಯೋಜನೆ ಮತ್ತು ಆನೆ ಸಂರಕ್ಷಣಾ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದೇಶದಲ್ಲಿ ಹುಲಿಗಳ ಸಂಖ್ಯೆಯು ಅತಿ ಹೆಚ್ಚಿರುವ ರಾಜ್ಯ ಕರ್ನಾಟಕ.



**ರಂಗನತಿಟ್ಟು ಪಕ್ಷಿಧಾಮ**

ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ವನ್ಯಮೃಗ ಧಾಮಗಳು, ಪಕ್ಷಿ ಸಂರಕ್ಷಣಾ ಧಾಮಗಳು ಮೈಸೂರು ವಿಭಾಗದಲ್ಲಿವೆ. ರಂಗನತಿಟ್ಟು ಪಕ್ಷಿಧಾಮ, ಗುಡವಿ ಪಕ್ಷಿಧಾಮ, ಕೊಕ್ಕರೆಬೆಳ್ಳೂರು ಮುಖ್ಯ ಪಕ್ಷಿಧಾಮಗಳಾದರೆ, ಮೇಲುಕೋಟೆ ವನ್ಯಮೃಗಧಾಮ, ಕಾವೇರಿ ವನ್ಯಮೃಗಧಾಮ, ಮಲೈಮಹದೇಶ್ವರ ವನ್ಯಮೃಗಧಾಮ, ಪುಷ್ಪಗಿರಿ ವನ್ಯಮೃಗಧಾಮ ಮುಂತಾದವು ಮೈಸೂರು ವಿಭಾಗದಲ್ಲಿರುವ ಪ್ರಸಿದ್ಧ ವನ್ಯಮೃಗಧಾಮಗಳು. ಮೈಸೂರು ಜಿಲ್ಲೆಯಲ್ಲಿ ರಾಜೀವಗಾಂಧಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವಿದ್ದರೆ ಚಾಮರಾಜನಗರ ಜಿಲ್ಲೆಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವಿದೆ. ಖೆಡ್ಡ ಎಂಬ ಕಾರ್ಯಾಚರಣೆ ಮೂಲಕ ಕಾಡಾನೆಗಳನ್ನು ಅಲ್ಲಿ ಪಳಗಿಸಲಾಗುತ್ತದೆ.

©KTBS NOT TO BE REPUBLISHED

### 1.2.4 ಕೃಷಿ ಮತ್ತು ಉದ್ದಿಮೆಗಳು

ಕೃಷಿಯು ನಮ್ಮ ಜನರ ಜೀವದ್ರವ್ಯ. ಇದಕ್ಕೆ ಮೈಸೂರು ವಿಭಾಗದ ಜಿಲ್ಲೆಗಳು ಅಪವಾದವಲ್ಲ. ಮೈಸೂರು ಜಿಲ್ಲೆಯು ರೇಷ್ಮೆ ಬೆಳೆಗೆ, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಕಾಫಿ ತೋಟಗಳಿಗೆ, ಮಂಡ್ಯ ಜಿಲ್ಲೆಯು ಕಬ್ಬು ಬೆಳೆಗೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಗಳು ಗೋಡಂಬಿ, ಮೆಣಸು, ಏಲಕ್ಕಿ, ರಬ್ಬರ್ ಬೆಳೆಗಳಿಗೆ ಪ್ರಸಿದ್ಧವಾಗಿವೆ. ದೇಶದಲ್ಲಿ ಅತಿ ಹೆಚ್ಚು ಕಾಫಿಯನ್ನು ಚಿಕ್ಕಮಗಳೂರಿನಲ್ಲಿ ಬೆಳೆಯುತ್ತಾರೆ. ಕೃಷಿ ಚಟುವಟಿಕೆಗಳು ಕೇವಲ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಮೀಸಲಾಗಿಲ್ಲ. ಈ ವಿಭಾಗದ ಜಿಲ್ಲೆಗಳಲ್ಲಿ ಕೃಷಿ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ ಮತ್ತು ತೋಟಗಾರಿಕೆಗಳ ಸಂಯುಕ್ತ ಚಟುವಟಿಕೆಗಳಿವೆ. ಈ ವಿಭಾಗದಲ್ಲಿ ಬೆಳೆಯುವ ಮುಖ್ಯ ಬೆಳೆಗಳೆಂದರೆ ಭತ್ತ, ರಾಗಿ, ಜೋಳ, ಅವರೆ, ಹೆಸರು, ಉದ್ದು ಮುಂತಾದವು. ಇಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳೆಂದರೆ ತಂಬಾಕು, ಕಾಫಿ, ಗೋಡಂಬಿ, ಅಡಕೆ, ಆಲೂಗಡ್ಡೆ, ಕಬ್ಬು, ಹತ್ತಿ, ಕಿತ್ತಳೆ, ತೆಂಗು ಮುಂತಾದವು.



**ಹೈನುಗಾರಿಕೆ**

ಈ ವಿಭಾಗದಲ್ಲಿನ ಕೃಷಿಗೆ ನಾಲ್ಕು ಯೋಜನೆಗಳಿಂದ ನೀರಾವರಿ ದೊರೆಯುತ್ತಿದೆ. ಅವುಗಳಾವುವೆಂದರೆ ಕೃಷ್ಣರಾಜಸಾಗರ, ಹಾರಂಗಿ, ಹೇಮಾವತಿ ಮತ್ತು ಕಬಿನಿ ನೀರಾವರಿ ಯೋಜನೆಗಳು. ಈ ವಿಭಾಗದಲ್ಲಿ ಕೃಷಿಯ ಬೆಳವಣಿಗೆಗೆ ಅನುಕೂಲವಾಗಲು ಅನೇಕ ಕೃಷಿ ಫಾರಂಗಳನ್ನು, ಕೃಷಿ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.

ಈ ವಿಭಾಗದ ಮೈಸೂರು, ಮಂಗಳೂರು, ಹಾಸನ, ಚಿಕ್ಕಮಗಳೂರು, ಮಂಡ್ಯ, ಮಡಿಕೇರಿ ಮುಂತಾದವು ಕೈಗಾರಿಕಾ ಕೇಂದ್ರಗಳಾಗಿವೆ. ಔಷಧಿ ಕಾರ್ಖಾನೆಗಳು, ಕಾಫಿ ಕ್ಯೂರಿಂಗ್ ಉದ್ದಿಮೆಗಳು, ಆಹಾರ ಸಂಸ್ಕರಣಾ ಘಟಕಗಳು, ರಸಗೊಬ್ಬರ ಕಾರ್ಖಾನೆಗಳು, ಪೆಟ್ರೋಲಿಯಮ್ ಸಂಸ್ಕರಣಾ ಕಾರ್ಖಾನೆ, ಕ್ಯಾಂಪ್ಕೋ ಚಾಕಲೇಟ್ ಕಾರ್ಖಾನೆ, ಸಕ್ಕರೆ ಕಾರ್ಖಾನೆ, ಸಿಮೆಂಟ್ ಉದ್ಯಮ ಮುಂತಾದವು ಮೈಸೂರು ವಿಭಾಗದ ಜಿಲ್ಲೆಗಳಲ್ಲಿರುವ ಉದ್ದಿಮೆಗಳು. ಈ ವಿಭಾಗದಲ್ಲಿರುವ ಬೃಹತ್ ಉದ್ದಿಮೆಗಳ ಸಂಖ್ಯೆ ಕಡಿಮೆ. ಆದರೆ ಸಾವಿರಾರು ಸಣ್ಣ ಮತ್ತು ಮಧ್ಯಮ ಗಾತ್ರ ಉದ್ದಿಮೆಗಳು ಇಲ್ಲಿವೆ.

NOT TO BE REPUBLISHED

## 1.2.5 ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ, ನೃತ್ಯ

ಈ ವಿಭಾಗವು ಕಲೆ, ಸಾಹಿತ್ಯ, ನಾಟಕ, ನೃತ್ಯ ಮುಂತಾದ ಕಲೆಗಳಿಂದ ಶ್ರೀಮಂತವಾಗಿದೆ. ಮೈಸೂರು ನಗರವನ್ನು ಕಲೆಯ ತವರೂರು ಎಂದು ಹೇಳುತ್ತಾರೆ. ಕರಾವಳಿ ಜಿಲ್ಲೆಗಳು ಯಕ್ಷಗಾನ ಬಯಲಾಟಕ್ಕೆ ಹೆಸರುವಾಸಿಯಾಗಿವೆ. ಯಕ್ಷಗಾನವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮನ್ನಣೆ ಗಳಿಸಿಕೊಂಡಿದೆ. ಕಂಸಾಳೆ ಕುಣಿತ, ಚೌಡಿಕೆ ಕಲೆ, ವೀರಗಾಸೆ ಕುಣಿತ, ಪಟ ಕುಣಿತ, ನಂದಿಕೋಲು ಮುಂತಾದವು ಜನಪ್ರಿಯ ಜನಪದ ಕಲೆಗಳಾಗಿವೆ. ಕೊಡವರ ಹುತ್ತರಿ ಹಬ್ಬ, ಕರಾವಳಿ ಜಿಲ್ಲೆಗಳಲ್ಲಿನ ಭೂತಾರಾಧನೆ, ಕಂಬಳ ಮುಂತಾದವು ವಿಶಿಷ್ಟವಾದ ಜನಪ್ರಿಯ ಆಚರಣೆಗಳಾಗಿವೆ.

ಮೈಸೂರು ಅರಮನೆಯು ಕಲೆ, ನೃತ್ಯ, ಸಂಗೀತ ಮುಂತಾದವುಗಳಿಗೆ ಪ್ರೋತ್ಸಾಹ ನೀಡುತ್ತಿತ್ತು. ಇದರಿಂದ ಮೈಸೂರು ಸಂಪ್ರದಾಯದ ವಿಶಿಷ್ಟತೆಯ ನೃತ್ಯ, ಸಂಗೀತ, ವರ್ಣಕಲೆ ಮುಂತಾದವು ರೂಪುಗೊಂಡವು. ಭರತನಾಟ್ಯ, ನಾಟಕ, ಸಂಗೀತ, ನಾಟಕಗಳಿಗೆ ಅರಮನೆಯು ಪ್ರೋತ್ಸಾಹ ನೀಡುತ್ತಿತ್ತು. ಮೈಸೂರು ನಗರದಲ್ಲಿ ಸರ್ಕಾರಿ ಅನುದಾನಿತ ನಾಟಕ ತಂಡ (ರೆಪರ್ಟರಿ) ರಂಗಾಯಣ ಸ್ಥಾಪನೆಯಾಗಿದೆ. ಅದು ವರ್ಷಪೂರ್ತಿ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸುತ್ತದೆ. ಈಗ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ರಂಗಾಯಣ ಕೇಂದ್ರಗಳು ಆರಂಭಗೊಂಡಿವೆ. ಮೈಸೂರಿನಲ್ಲಿ ಬೃಹತ್ ಕಲಾಮಂದಿರವನ್ನು ಕಟ್ಟಲಾಗಿದೆ.



**ಮೈಸೂರು ಅರಮನೆ**

ಮೈಸೂರು ವಿಭಾಗದ ಜಿಲ್ಲೆಗಳು ಅನೇಕ ಪ್ರಸಿದ್ಧ ಸಾಹಿತಿಗಳ ತಾಣಗಳಾಗಿವೆ. ಹಾಸನದ ರಾಜಾರಾವ್ ಇಂಗ್ಲೀಷಿನಲ್ಲಿ ಪ್ರಸಿದ್ಧ ಕಾದಂಬರಿಗಾರರು. ಆರ್. ಕೆ. ನಾರಾಯಣ್ ಅವರು ಮತ್ತೊಬ್ಬ ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿಜೇತ ಶಿವರಾಮ ಕಾರಂತ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರು. ಕನ್ನಡದ ಭಾವಗೀತೆಗಳಿಗೆ ಜೀವ ತುಂಬಿದ ಕೆ. ಎಸ್. ನರಸಿಂಹಸ್ವಾಮಿ ಮೈಸೂರು ನಗರಕ್ಕೆ ಸೇರಿದವರು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ. ಎಸ್. ಎಲ್. ಭೈರಪ್ಪ, ಎಂ. ಗೋಪಾಲಕೃಷ್ಣ ಅಡಿಗ, ಬಿ.ಎಂ.ಶ್ರೀಕಂಠಯ್ಯ, ಎ. ಎನ್. ಮೂರ್ತಿರಾವ್, ದೇವನೂರ ಮಹಾದೇವ, ಅಕಬರ್ ಅಲಿ, ಸಾರಾ ಅಬೂಬಕರ್, ಆಲನಹಳ್ಳಿ ಕೃಷ್ಣ, ಪೂರ್ಣಚಂದ್ರತೇಜಸ್ವಿ, ಕೊಡಗಿನ ಗೌರಮ್ಮ, ತಿರುಮಲಾಂಬ, ತ್ರಿವೇಣಿ, ನಿರಂಜನ ಮುಂತಾದವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಈ ವಿಭಾಗಮೂಲದ ಮಹನೀಯರು. ಆರ್. ಕೆ. ಶ್ರೀಕಂಠನ್, ವೀಣೆ ಶೇಷಣ್ಣ, ಪಿಟೀಲ್ ಚೌಡಯ್ಯ, ವೀಣೆ ದೊರೆಸ್ವಾಮಿ

@KTBS NOT TO BE REPUBLISHED

ಅಯ್ಯಂಗಾರ್, ಕದ್ರಿ ಗೋಪಾಲನಾಥ್ ಮುಂತಾದವರು ಸಂಗೀತ ಕ್ಷೇತ್ರದ ದಿಗ್ಗಜರು. ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ್, ರಂಗಭೂಮಿಯ ಮಹಮದ್ ಪೀರ್, ಚಿತ್ರಕಲೆಯ ಕೆ. ಕೆ. ಹೆಬ್ಬಾರ್, ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದ ಬಿ. ವಿ. ಕಾರಂತ, ಆಧುನಿಕ ಪೂರ್ವ ಸಾಹಿತ್ಯದ ಸಂಚಿಹೊನ್ನಮ್ಮ, ರತ್ನಾಕರವರ್ಣಿ, ಸಿಂಗಾರಾರ್ಯ ಮುಂತಾದವರು ಮೈಸೂರು ವಿಭಾಗಕ್ಕೆ ಸೇರಿದ ಸಾಂಸ್ಕೃತಿಕ ಸಾಧಕರು. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ, ಜನರಲ್ ಕೆ. ಎಸ್. ತಿಮ್ಮಯ್ಯ ಅವರು ರಾಷ್ಟ್ರಕ್ಕೆ ಕೀರ್ತಿತಂದ ಸೈನಿಕ ದಂಡಾಧಿಪತಿಗಳು. ವಿಜ್ಞಾನಿಗಳಾದ ರಾಜಾರಾಮಣ್ಣ, ಯು. ಆರ್. ರಾವ್ ಅವರ ಸಾಧನೆ ಉಲ್ಲೇಖನೀಯ. ಸಾಮಾಜಿಕ ನ್ಯಾಯದ ಹರಿಕಾರರಾದ ದೇವರಾಜ್‌ಅರಸ್‌ರವರು ಈ ವಿಭಾಗಕ್ಕೆ ಸೇರಿದವರಾಗಿದ್ದಾರೆ.


ಬಿ.ಎಂ.ಶ್ರೀ


ಪಿಟೀಲು ಚೌಡಯ್ಯ


ಕೆ.ಎಸ್. ನರಸಿಂಹಸ್ವಾಮಿ


ರಾಜರಾಮಣ್ಣ


ಕೆ.ಕೆ. ಹೆಬ್ಬಾರ್


ಆರ್.ಕೆ. ನಾರಾಯಣ್


ಫೀಲ್ಡ್ ಮಾರ್ಶಲ್
ಕೆ.ಎಂ.ಕಾರ್ಯಪ್ಪ


ದೇವರಾಜ ಅರಸು

### 1.2.6 ಶಿಕ್ಷಣ ಮತ್ತು ಆರೋಗ್ಯ

ಮೈಸೂರು ಒಂದು ಶಿಕ್ಷಣಕೇಂದ್ರವಾಗಿದೆ. ಈ ವಿಭಾಗದಲ್ಲಿ ಸಾಕ್ಷರತೆಯ ಮಟ್ಟ ಉತ್ತಮವಾಗಿದೆ. ಮೈಸೂರು ಒಡೆಯರ ಆಳ್ವಿಕೆಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ದೊರಕಿತು. ಶತಮಾನೋತ್ಸವ ಕಂಡಿರುವ ಮೈಸೂರು ವಿಶ್ವವಿದ್ಯಾಲಯವು 1915ರಲ್ಲಿ ಆರಂಭವಾಯಿತು. ಈ ವಿಭಾಗದ ಅನೇಕ ಜಿಲ್ಲೆಗಳಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿವೆ. ಈ ವಿಭಾಗದ ಪ್ರಮುಖ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯವಿದೆ. ಈ ವಿಭಾಗದಲ್ಲಿ ಅನೇಕ ಖಾಸಗಿ ವಿಶ್ವವಿದ್ಯಾಲಯಗಳಿವೆ. ಮೈಸೂರು ನಗರದಲ್ಲಿ ಆಹಾರ ಸಂಶೋಧನಾ ಸಂಸ್ಥೆ ಸಿಎಫ್‌ಟಿಆರ್‌ಐ (ಸೆಂಟ್ರಲ್ ಫುಡ್ ಟೆಕ್ನಾಲಜಿ ರೀಸರ್ಚ್ ಇನ್ಸಿಟ್ಯೂಟ್) ಇದೆ. ಶಿಕ್ಷಣ ಕ್ಷೇತ್ರಕ್ಕೆ ಸುತ್ತೂರು ಮಠದ ಕೊಡುಗೆ ಅಪಾರ. ಈ ವಿಭಾಗದಲ್ಲಿ ಶಿಕ್ಷಣ ಮತ್ತು

ಆರೋಗ್ಯ ಕ್ಷೇತ್ರಕ್ಕೆ ಧರ್ಮಸ್ಥಳ ಮತ್ತು ಮಣಿಪಾಲ ಸಂಸ್ಥೆಗಳ ಕೊಡುಗೆ ಗಮನೀಯವಾದುದು.

ಈ ವಿಭಾಗದ ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲಾ ಆಸ್ಪತ್ರೆಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಆರೋಗ್ಯ ಉಪಕೇಂದ್ರಗಳಿವೆ. ಇಲ್ಲಿ ಮಕ್ಕಳಿಗೆ ರೋಗನಿರೋಧಕ ಚುಚ್ಚು ಮದ್ದು ನೀಡಲಾಗುತ್ತದೆ. ಗರ್ಭಿಣಿ ಮತ್ತು ಬಾಣಂತಿಯ ಆರೋಗ್ಯ ನಿರ್ವಹಿಸಲು ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತರು ಇದ್ದಾರೆ. ಈ ವಿಭಾಗದಲ್ಲಿ ಶಿಶು ಮರಣ ಪ್ರಮಾಣ ಕೆಳಮಟ್ಟದಲ್ಲಿದೆ. ಜನರ ಜೀವನಾಯುಷ್ಯ ಉತ್ತಮವಾಗಿದೆ. ತಾಯಂದಿರ ಮರಣ ಪ್ರಮಾಣವೂ ಕೆಳಮಟ್ಟದಲ್ಲಿದೆ. ಇವೆಲ್ಲ ಜನರ ಆರೋಗ್ಯಸೂಚಿಗಳಾಗಿವೆ.



**ರೋಗ ನಿರೋಧಕ ಚುಚ್ಚುಮದ್ದು ನೀಡುತ್ತಿರುವುದು**

## 1.2.7 ವಿಭಾಗದ ಸಾಂಸ್ಕೃತಿಕ ಸಂಪತ್ತು

ಸಾಂಸ್ಕೃತಿಕವಾಗಿ ಶ್ರೀಮಂತ ವಿಭಾಗ ಮೈಸೂರು ವಿಭಾಗ. ಈ ಜಿಲ್ಲೆಗಳಲ್ಲಿ ಪ್ರಕೃತಿ ಸಂಪತ್ತು ತುಂಬಿ ತುಳುಕುತ್ತಿದೆ. ಸಮೃದ್ಧ ನದಿಗಳು, ದಟ್ಟವಾದ ಅರಣ್ಯಗಳು, ವೈವಿಧ್ಯಮಯವಾದ ವನ್ಯಪ್ರಾಣಿಗಳು, ಮೈನವಿರೇಳಿಸುವ ಜಲಪಾತಗಳು, ಕಲೆ–ವಾಸ್ತು ವೈಭವ, ಸಾಹಿತ್ಯ, ಕಲೆಗಳ ತವರೂರು ಮೈಸೂರು ವಿಭಾಗದ ಜಿಲ್ಲೆಗಳು. ಮಂಡ್ಯ ಜಿಲ್ಲೆಯು ಸಕ್ಕರೆಗೆ ಪ್ರಸಿದ್ಧಿಯಾಗಿದ್ದರೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಕಾಫಿಗೆ ಪ್ರಸಿದ್ಧವಾಗಿವೆ. ಯಕ್ಷಗಾನ ಕಲೆಗೆ ಕರಾವಳಿ ಜಿಲ್ಲೆಗಳು ಪ್ರಸಿದ್ಧವಾಗಿದ್ದರೆ ಕಂಸಾಳೆ ಕುಣಿತಕ್ಕೆ ಚಾಮರಾಜನಗರ ಪ್ರಸಿದ್ಧವಾಗಿದೆ. ಸೋಮನಾಥಪುರ, ಬೇಲೂರು ಚನ್ನಕೇಶವ ದೇವಾಲಯದ ಮದನಿಕೆ ವಿಗ್ರಹಗಳು, ಶ್ರವಣಬೆಳಗೊಳದ



**ಪುತ್ತರಿ ಹಬ್ಬ, ಕೊಡಗು**



**ಸುತ್ತೂರು ಮಠ**

NOT TO BE REPUBLISHED

ಗೊಮ್ಮಟೇಶ್ವರನ ಏಕಶಿಲಾ ವಿಗ್ರಹ, ಹಳೇಬಿಡು, ಮೂಡುಬಿದ್ರೆ ಮುಂತಾದವು ವಿಶ್ವವಿಖ್ಯಾತ ಕಲಾಕುಸರಿ ಮೆರೆದಿರುವ ದೇವಾಲಯಗಳಿಗೆ ಹೆಸರುವಾಸಿಯಾಗಿವೆ. ಮೈಸೂರು ವಿಭಾಗದ ಜಿಲ್ಲೆಗಳೆಲ್ಲವೂ ಪ್ರವಾಸೋದ್ಯಮಕ್ಕೆ ಫಲವತ್ತಾದ ಕ್ಷೇತ್ರಗಳಾಗಿವೆ. ಕಾವೇರಿ ನದಿಯು ನಮ್ಮ ರಾಜ್ಯದ ಜೀವಧಾರೆಯಾಗಿದೆ. ಇದು ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟುತ್ತದೆ. ನೂರಾರು ಕಿಲೋಮೀಟರ್ ಉದ್ದದ ಕರಾವಳಿ ತೀರ ಇಲ್ಲಿದೆ. ಮೀನುಗಾರಿಕೆ, ಬಂದರು, ಸಮುದ್ರದ ಮೇಲಿನ ಸಾಹಸ ಕ್ರೀಡೆಗಳು, ಶೈಕ್ಷಣಿಕ ಕೇಂದ್ರಗಳು ಮುಂತಾದವು ಇಲ್ಲಿವೆ. ಸಾಂಸ್ಕೃತಿಕವಾಗಿ ಸಮೃದ್ಧವಾದ ವಿಭಾಗ ಮೈಸೂರು ವಿಭಾಗ.



**ಗೊಮ್ಮಟೇಶ್ವರ ವಿಗ್ರಹ – ಶ್ರವಣಬೆಳಗೊಳ**

## 1.2.8 ವಿಭಾಗದ ಸ್ವಾತಂತ್ರ್ಯ ಹೋರಾಟಗಾರರು

ಈ ವಿಭಾಗದ ಜಿಲ್ಲೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವು. ಗಾಂಧೀಜಿಗೆ ಪ್ರಿಯವಾಗಿದ್ದ ಖಾದಿ ಕೇಂದ್ರಗಳು, ಗೃಹ ಕೈಗಾರಿಕೆಗಳು ಕೂಡ ಇಲ್ಲಿ ವ್ಯಾಪಕವಾಗಿ ಚಾಲನೆಯಲ್ಲಿದ್ದವು. ಮಂಗಳೂರಿನ ಕುದ್ಮಲ್ ರಂಗರಾವ್ ಅವರು ಅಸ್ಪೃಶ್ಯತೆ ನಿವಾರಣೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ತಗಡೂರು ರಾಮಚಂದ್ರರಾವ್ ಅವರು ಗಾಂಧೀಜಿ ಅನುಯಾಯಿಗಳು. ಇವರೂ ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಟ ಮಾಡಿದರು. ಎಚ್. ಸಿ. ದಾಸಪ್ಪ, ಯಶೋಧರಮ್ಮ ದಾಸಪ್ಪ, ಕಾರ್ನಾಡ್ ಸದಾಶಿವರಾವ್, ಎಚ್. ಕೆ. ವೀರಣ್ಣಗೌಡ, ಕೆ. ಟಿ. ಭಾಷ್ಯಂ, ಕಮಲಾದೇವಿ ಚಟ್ಟೋಪಾಧ್ಯಾಯ, ಕೆ. ವಿ. ಶಂಕರೇಗೌಡ, ಕೆ. ರಾಮಕೃಷ್ಣ ಕಾರಂತ, ಸಿ. ಎಮ್. ಪೂಣಚ್ಚ ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಅನೇಕರು ಕರ್ನಾಟಕ ಏಕೀಕರಣದಲ್ಲಿಯೂ ಭಾಗವಹಿಸಿದ್ದರು. ಹೀಗೆ ಮೈಸೂರು ವಿಭಾಗದ ಜಿಲ್ಲೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗಳಿಸಿದ್ದವು. ಮೈಸೂರಿನ ದಸರಾ ಉತ್ಸವವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯವಾದ ಉತ್ಸವವಾಗಿದೆ.

NOT TO BE REPUBLISHED

## ಅಭ್ಯಾಸಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮೈಸೂರು ವಿಭಾಗದಲ್ಲಿ ಇಂದು ಎಷ್ಟು ಜಿಲ್ಲೆಗಳಿವೆ?
2. ಮೈಸೂರು ಎಂಬ ಹೆಸರು ಬರಲು ಕಾರಣವನ್ನು ತಿಳಿಸಿ.
3. ಮೈಸೂರು ಸಂಸ್ಥಾನದ ಬೆಳವಣಿಗೆಗೆ 20ನೆಯ ಶತಮಾನದ ಆದಿ ಭಾಗದಲ್ಲಿ ಕಾರಣರಾದ ಒಡೆಯರ್ ಹೆಸರನ್ನು ಬರೆಯಿರಿ.
4. ಕರಾವಳಿ ಪ್ರದೇಶವನ್ನು ಬ್ರಿಟಿಷರು ಮೊದಲು ಏನೆಂದು ಕರೆದರು?
5. ಮೈಸೂರು ವಿಭಾಗದ ಎರಡು ಪ್ರಸಿದ್ಧ ನದಿಗಳ ಹೆಸರು ಬರೆಯಿರಿ.
6. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆ ಬೀಳುವ ಜಿಲ್ಲೆ ಹಾಗೂ ಅತಿ ಕಡಿಮೆ ಮಳೆ ಬೀಳುವ ಜಿಲ್ಲೆ ಯಾವುದು?
7. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಎರಡು ಖನಿಜಗಳ ಹೆಸರನ್ನು ಬರೆಯಿರಿ.
8. ಮೈಸೂರು ವಿಭಾಗದ ಕರಾವಳಿ ಜಿಲ್ಲೆಗಳಲ್ಲಿ ಜನರ ಮುಖ್ಯ ಉದ್ಯೋಗವೇನು?
9. ಮೈಸೂರು ವಿಭಾಗದಲ್ಲಿರುವ ಎರಡು ಪ್ರಸಿದ್ಧ ಅರಣ್ಯ ಪ್ರದೇಶಗಳಾವುವು?
10. ಮೈಸೂರು ವಿಭಾಗದ ಜಿಲ್ಲೆಗಳಲ್ಲಿ ನೆಲೆಸಿರುವ ಎರಡು ಬುಡಕಟ್ಟು ಸಮುದಾಯಗಳ ಹೆಸರನ್ನು ಬರೆಯಿರಿ
11. ಎರಡು ಪಕ್ಷಿಧಾಮ ಮತ್ತು ಎರಡು ವನ್ಯಮೃಗಧಾಮಗಳ ಹೆಸರನ್ನು ಬರೆಯಿರಿ.
12. ಮೈಸೂರು ವಿಭಾಗದಲ್ಲಿರುವ ಎರಡು ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ.
13. ಮೈಸೂರು ವಿಭಾಗದ ಆಯ್ದ ಆರು ಮುಖ್ಯ ಬೆಳೆಗಳನ್ನು ತಿಳಿಸಿ.
14. ಮೈಸೂರು ವಿಭಾಗದಲ್ಲಿ ಕೃಷಿಗೆ ನೀರಾವರಿ ಒದಗಿಸುವ ಎರಡು ನೀರಾವರಿ ಯೋಜನೆಗಳಾವುವು?
15. ಮೈಸೂರು ವಿಭಾಗದಲ್ಲಿರುವ ಮೂರು ಮುಖ್ಯ ಉದ್ದಿಮೆಗಳನ್ನು ಹೆಸರಿಸಿ.
16. ಕೊಡವರು ಆಚರಿಸುವ ಸುಗ್ಗಿ ಹಬ್ಬದ ಹೆಸರೇನು?
17. ಕರ್ನಾಟಕ ಸರ್ಕಾರದ ನಾಟಕ ಸಂಸ್ಥೆ ರಂಗಾಯಣದ ಕೇಂದ್ರ ಸ್ಥಾನ ಯಾವ ನಗರದಲ್ಲಿದೆ
18. ಕನ್ನಡದ ಇಬ್ಬರು ಪ್ರಸಿದ್ಧ ಕಾದಂಬರಿಕಾರರ ಹೆಸರನ್ನು ಬರೆಯಿರಿ.
19. ಮೈಸೂರಿನಲ್ಲಿ ಶತಮಾನೋತ್ಸವ ಆಚರಿಸಿರುವ ವಿಶ್ವವಿದ್ಯಾಲಯದ ಹೆಸರನ್ನು ಬರೆಯಿರಿ.
20. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ಕೇಂದ್ರಗಳ ಹೆಸರೇನು?

© KTBS NOT TO BE REPUBLISHED

21. ಎರಡು ಆರೋಗ್ಯ ಸೂಚಿಗಳನ್ನು ಹೆಸರಿಸಿ.

22. ಮೈಸೂರು ವಿಭಾಗಕ್ಕೆ ಸೇರಿದ ಇಬ್ಬರು ಪ್ರಸಿದ್ಧ ಇಂಗ್ಲೀಷ್ ಕಾದಂಬರಿಕಾರರ ಹೆಸರನ್ನು ಬರೆಯಿರಿ.

23. ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಅಸ್ಪೃಶ್ಯತಾ ನಿವಾರಣೆ ಚಳುವಳಿಯಲ್ಲಿ ತೊಡಗಿದ್ದ ಇಬ್ಬರು ಸಮಾಜ ಸುಧಾರಕರ ಹೆಸರು ಬರೆಯಿರಿ.

24. ಶ್ರವಣಬೆಳಗೊಳವು ಯಾವುದಕ್ಕೆ ಪ್ರಸಿದ್ಧಿಯಾಗಿದೆ?

25. ಈ ಜಿಲ್ಲೆಗೆ ಸೇರಿದ ನಾಲ್ವರು ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಬರೆಯಿರಿ.

## ಖಾಲಿ ಜಾಗಗಳನ್ನು ಭರ್ತಿ ಮಾಡಿ.

1. ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ---------- ವರ್ಷ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು.
2. ಮೈಸೂರು ವಿಭಾಗದ ------------ ಮತ್ತು -------------- ಕರಾವಳಿ ಜಿಲ್ಲೆಗಳು.
3. ನಮ್ಮ ರಾಷ್ಟ್ರೀಯ ಪ್ರಾಣಿ ------- .
4. ಕಾಡಾನೆಗಳನ್ನು ಪಳಗಿಸುವ ವಿಧಾನವನ್ನು -------- ಎಂದು ಕರೆಯುತ್ತಾರೆ.
5. ಮೈಸೂರು ವಿಭಾಗದ ---------------- ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಕಾಫಿ ಬೆಳೆಯುತ್ತಾರೆ.
6. ಕೊಡಗು ಜಿಲ್ಲೆಯ --------- ನಲ್ಲಿ ಕಾವೇರಿ ನದಿ ಹುಟ್ಟುತ್ತದೆ.
7. ಕುದ್ಮಲ್ ರಂಗರಾವ್ ಅವರು ---------- ನಿವಾರಣೆಗಾಗಿ ಹೋರಾಟ ಮಾಡಿದರು.
8. ಮೈಸೂರಿನಲ್ಲಿ ನಡೆಯುವ ವಿಶ್ವವಿಖ್ಯಾತ ಉತ್ಸವದ ಹೆಸರು --------.
9. ಮೈಸೂರು ವಿಭಾಗದ --------- ಮತ್ತು --------- ಜಿಲ್ಲೆಗಳಲ್ಲಿ ಬಂದರುಗಳಿವೆ.

## ಚಟುವಟಿಕೆಗಳು

- ಈ ವಿಭಾಗದ ಜಿಲ್ಲೆಗಳಲ್ಲಿರುವ ಪ್ರಾಚೀನ ದೇವಾಲಯಗಳನ್ನು ಮತ್ತು ಅವುಗಳನ್ನು ಕಟ್ಟಿಸಿದ ಅರಸು ಮನೆತನಗಳನ್ನು ಪಟ್ಟಿ ಮಾಡಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ.
- ಈ ವಿಭಾಗದ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಗೊಮ್ಮಟೇಶ್ವರನ ವಿಗ್ರಹಗಳ ಪಟ್ಟಿ ಮಾಡಿ. ಪ್ರತಿ ವಿಗ್ರಹದ ಎತ್ತರವನ್ನು ಸಂಗ್ರಹಿಸಿ. ಈ ವರದಿಯಲ್ಲಿ ವಿಗ್ರಹಗಳ ಚಿತ್ರಗಳನ್ನು ಹಾಕಿ.

@KTBS NOT TO BE REPUBLISHED

## 1.3 ಕಲಬುರಗಿ ವಿಭಾಗ (ಕಲಬುರ್ಗಿ)

ಕಲಬುರಗಿ ವಿಭಾಗದಲ್ಲಿ ಏಳು ಜಿಲ್ಲೆಗಳಿವೆ. ಅವು ಯಾವುವೆಂದರೆ ಕಲಬುರಗಿ, ಬೀದರ್, ಬಳ್ಳಾರಿ, ವಿಜಯನಗರ, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ. ಆರಂಭದಲ್ಲಿ ನಾಲ್ಕು ಜಿಲ್ಲೆಗಳಿದ್ದವು. ಆದರೆ 1997ರಲ್ಲಿ ರಾಯಚೂರು ಜಿಲ್ಲೆಯನ್ನು ವಿಭಜಿಸಿ ಕೊಪ್ಪಳ ಜಿಲ್ಲೆಯನ್ನು ರಚಿಸಲಾಯಿತು ಮತ್ತು ಕಲಬುರಗಿ ಜಿಲ್ಲೆಯನ್ನು ವಿಭಜಿಸಿ ಯಾದಗೀರ್ (ಯಾದಗಿರಿ) ಜಿಲ್ಲೆಯನ್ನು ಏಪ್ರಿಲ್ 10, 2010ರಂದು ರಚಿಸಲಾಯಿತು. 2021ರ ಅಕ್ಟೋಬರ್ 2ರಂದು ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ವಿಜಯನಗರ ಜಿಲ್ಲೆಯನ್ನು ಹುಟ್ಟುಹಾಕಲಾಯಿತು.



© KTBS NOT TO BE REPUBLISHED

ಕಲಬುರಗಿ ವಿಭಾಗದ ಜಿಲ್ಲಾವಾರು ಭೂಪಟ

## 1.3.1 ಚಾರಿತ್ರಿಕ ಹಿನ್ನೆಲೆ



ಶಿಲಾಶಾಸನ

ಈ ವಿಭಾಗದ ಜಿಲ್ಲೆಗಳಿಗೆ ಅತ್ಯಂತ ಶ್ರೀಮಂತವಾದ ಪ್ರಾಚೀನ ಚರಿತ್ರೆಯಿದೆ. ಇತಿಹಾಸಪೂರ್ವ ಪಳೆಯುಳಿಕೆಗಳನ್ನು ಇಲ್ಲಿ ಕಾಣಬಹುದು. ಚರಿತ್ರೆಯ ಆರಂಭದಲ್ಲಿ ಈ ಪ್ರದೇಶವು ಮೌರ್ಯರ ಆಡಳಿತಕ್ಕೆ ಸೇರಿತ್ತು. ನಂತರ ಇದು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು. ಅಶೋಕನ ಅನೇಕ ಶಿಲಾಶಾಸನಗಳು ಇಲ್ಲಿ ದೊರೆತಿವೆ. ಸಾಮಾನ್ಯ ಶಕೆ 8ನೆಯ ಶತಮಾನದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಆಳ್ವಿಕೆ ನಡೆಸಿತು. ಅವರ ರಾಜಧಾನಿಯಾಗಿದ್ದ ಮಾನ್ಯಖೇಟ (ಇಂದಿನ ಮಳಖೇಡ) ಕಲಬುರಗಿ ಜಿಲ್ಲೆಯಲ್ಲಿದೆ. ಕಲ್ಯಾಣ ಚಾಲುಕ್ಯರು ನಂತರ ಆಳ್ವಿಕೆ ನಡೆಸಿದರು. ಬಸವಕಲ್ಯಾಣವು ಇವರ ರಾಜಧಾನಿಯಾಗಿತ್ತು. ವಿಜಯನಗರ ಜಿಲ್ಲೆಯ ಹಂಪಿಯು ವಿಜಯನಗರ ಅರಸರ ರಾಜಧಾನಿಯಾಗಿತ್ತು. ಪ್ರಸಿದ್ಧ ವಚನಕಾರ ಬಸವಣ್ಣನವರ ನೇತೃತ್ವದಲ್ಲಿ ನಡೆದ ವಚನ ಚಳುವಳಿಯ ಕೇಂದ್ರವಾದ ಕಲ್ಯಾಣವು ಕಲಬುರಗಿ ವಿಭಾಗಕ್ಕೆ ಸೇರಿದೆ. ಮುಂದೆ ಮಧ್ಯಯುಗದಲ್ಲಿ ಬಹಮನಿ ಅರಸರು ಅಧಿಕಾರಕ್ಕೆ ಬಂದರು. ಅವರ ರಾಜಧಾನಿ ಕಲಬುರಗಿಯಾಗಿತ್ತು. ಬಹಮನಿ ಮತ್ತು ವಿಜಯನಗರ ಸಾಮ್ರಾಜ್ಯಗಳ ಪತನದ ನಂತರ ಕಲಬುರಗಿ ಪ್ರದೇಶವು ಹೈದರಾಬಾದ್ ನಿಜಾಮ ಆಳ್ವಿಕೆಗೆ ಒಳಪಟ್ಟಿತ್ತು. ಮುಂದೆ 1948ರಲ್ಲಿ ನಿಜಾಮ್ ಸಂಸ್ಥಾನ ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು. ರಾಜ್ಯ ಪುನರ್ ವಿಂಗಡಣೆ ಯೋಜನೆ ಪ್ರಕಾರ 1956ರಲ್ಲಿ ನಿಜಾಮ್ ಸಂಸ್ಥಾನದ ವಶದಲ್ಲಿದ್ದ ಬೀದರ್, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳು ಕರ್ನಾಟಕದಲ್ಲಿ ವಿಲೀನಗೊಂಡವು. ಕಲಬುರಗಿಯು ವಿಭಾಗೀಯ ಕೇಂದ್ರವಾಗಿದೆ. ಮದರಾಸು ಪ್ರಾಂತಕ್ಕೆ ಸೇರಿದ್ದ ಅವಿಭಜಿತ ಬಳ್ಳಾರಿ ಜಿಲ್ಲೆಯು ಕರ್ನಾಟಕದಲ್ಲಿ ವಿಲೀನಗೊಂಡಿತು.

ಬಹಮನಿ ಮತ್ತು ವಿಜಯನಗರ ಆಳ್ವಿಕೆಯ ನಂತರ ಅನೇಕ ಪಾಳೇಗಾರರು ಈ ಪ್ರದೇಶದಲ್ಲಿ ಸ್ವತಂತ್ರರಾದರು. ಅವರಲ್ಲಿ ಹರಪನಹಳ್ಳಿ, ಜರಿಮಲೆ, ಸಂಡೂರು ಮತ್ತು ಸುರಪುರ ಪಾಳೆಗಾರರು ಪ್ರಸಿದ್ಧರಾಗಿದ್ದಾರೆ. ಸುರಪುರ ನಾಯಕ ಕೃಷ್ಣಪ್ಪನಾಯಕರು ಕಾಲವಶರಾದ ಮೇಲೆ ಅವರ ಮಗ ವೆಂಕಟಪ್ಪ ನಾಯಕ ಅಧಿಕಾರಕ್ಕೆ ಬಂದರು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ತಿಳಿದುಕೊಂಡಿದ್ದ ವೆಂಕಟಪ್ಪ ನಾಯಕರು ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದರು. ಆದರೆ ವೆಂಕಟಪ್ಪ ನಾಯಕರನ್ನು ಸೆರೆ ಹಿಡಿದ ಬ್ರಿಟಿಷರು ಅವರನ್ನು ಸೆರೆಮನೆಗಟ್ಟಿದರು. ಬ್ರಿಟಿಷರು ಸುರಪುರವನ್ನು ಹೈದರಾಬಾದ್ ನಿಜಾಮನಿಗೆ ಕೊಡುಗೆಯಾಗಿ ನೀಡಿದರು. ಹೀಗೆ ಬೀದರ್, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳು ನಿಜಾಮ್ ಸಂಸ್ಥಾನದ ಭಾಗವಾದವು. ಈ ಜಿಲ್ಲೆಗಳು 1956ರಲ್ಲಿ ಕರ್ನಾಟಕದಲ್ಲಿ ವಿಲೀನಗೊಂಡವು.

### ಹೈದರಾಬಾದ್ ಕರ್ನಾಟಕ ಪ್ರದೇಶ ವಿಮೋಚನಾ ಹೋರಾಟ

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ನಿಜಾಮನು ಭಾರತ ಗಣರಾಜ್ಯದಲ್ಲಿ ತನ್ನ ಸಂಸ್ಥಾನವನ್ನು ವಿಲೀನಗೊಳಿಸಲು ಸಿದ್ಧನಿರಲಿಲ್ಲ. ಇದರಿಂದ ರೊಚ್ಚಿಗೆದ್ದ ಜನರು ನಿಜಾಮಶಾಹಿ ವಿರುದ್ಧ ಹೋರಾಟವನ್ನು ನಡೆಸಿದರು. ಈ ಭಾಗದ ಸ್ವಾತಂತ್ರ್ಯ ಹೋರಾಟದ ನೇತೃತ್ವವನ್ನು ಸ್ವಾಮಿ ರಮಾನಂದತೀರ್ಥರು ವಹಿಸಿದ್ದರು. ನಿಜಾಮ್‌ನ ವಶದಲ್ಲಿದ್ದ ಹೈದರಾಬಾದ್ ಕರ್ನಾಟಕ

©KTBS NOT TO BE REPUBLISHED

ಪ್ರದೇಶದ ವಿಮೋಚನಾ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಮುಖಂಡರೆಂದರೆ ಸರದಾರ್ ಶರಣಗೌಡ ಇನಾಂದಾರ್, ಶಿವಮೂರ್ತಿ ಅಳವಂಡಿ, ಶಿರೂರು ವೀರಭದ್ರಪ್ಪ, ಪ್ರಭುರಾಜ ಪಾಟೀಲ ಸಂಗನಾಳ, ಪುಂಡಲೀಕಪ್ಪ ಮುಂತಾದವರು. ಇವರು ನಿಜಾಮಶಾಹಿ ವಿರುದ್ಧ ಸತ್ಯಾಗ್ರಹವನ್ನು ಸಂಘಟಿಸಿದರು. ನಿಜಾಮ ಸರ್ಕಾರವು ನಾಗರಿಕರಿಗೆ ಹಿಂಸೆಯನ್ನು ಕೊಡ ತೊಡಗಿತು. ರಜಾಕಾರರೆಂಬ ನಿಜಾಮ್ ಖಾಸಗಿ ಸೈನ್ಯದ ವಿರುದ್ಧ ಜನರು ತೀವ್ರ ಹೋರಾಟ ನಡೆಸಿದರು. ಕೇಂದ್ರ ಸರ್ಕಾರವು ನೇರ ಕ್ರಮವನ್ನು ತೆಗೆದುಕೊಂಡು ನಿಜಾಮ ಸಂಸ್ಥಾನವನ್ನು ಭಾರತ ಗಣರಾಜ್ಯದಲ್ಲಿ ಸೆಪ್ಟೆಂಬರ್ 17, 1948ರಲ್ಲಿ ವಿಲೀನಗೊಳಿಸಿತು. ಈ ಕಾರ್ಯಾಚರಣೆಯ ಮುಖ್ಯ ರೂವಾರಿ ಆಗ ಕೇಂದ್ರ ಸರ್ಕಾರದಲ್ಲಿ ಗೃಹಸಚಿವರಾಗಿದ್ದ ಸರ್ದಾರ್ ವಲ್ಲಭಬಾಯ್ ಪಟೇಲರು.

### 1.3.2 ಪ್ರಾಕೃತಿಕ ಸಂಪನ್ಮೂಲ

ಈ ವಿಭಾಗದ ಪ್ರಮುಖ ನದಿಗಳೆಂದರೆ ಭೀಮ, ತುಂಗಭದ್ರ, ಕೃಷ್ಣ, ಮುಲ್ಲಾಮಾರಿ, ಬೆಣ್ಣೆತೊರ ಮುಂತಾದವು. ಕಾರಂಜಾ ಅಣೆಕಟ್ಟೆಯು ಬೀದರ್ ಜಿಲ್ಲೆಯ ವರದಾನವಾಗಿದೆ. ಕೆಂಪು, ಕಪ್ಪು ಮತ್ತು ಮೆಕ್ಕಲು ಮಣ್ಣು ವಿಭಾಗದಲ್ಲಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಭತ್ತವನ್ನು ಪ್ರಮುಖ ಬೆಳೆಯಾಗಿ ಬೆಳೆಯುತ್ತಾರೆ. ಕಬ್ಬು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಹತ್ತಿ, ನವಣೆ, ಕುಸುಬೆ, ಜೋಳ, ಹುರುಳಿ, ತೊಗರಿ ಮುಂತಾದವು ವಿಭಾಗದ ಪ್ರಮುಖ ಬೆಳೆಗಳು. ಈ ವಿಭಾಗದ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶ ವಿರಳವಾಗಿದೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ದಟ್ಟವಾದ ಅರಣ್ಯ ಪ್ರದೇಶವಿದೆ. ಬೀದರ್ ಜಿಲ್ಲೆಯಲ್ಲಿ ತೆಳುವಾದ ಅರಣ್ಯ ಪ್ರದೇಶವಿದೆ. ಕೊಪ್ಪಳ ಜಿಲ್ಲೆಯಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ಕನಿಷ್ಠತಮವಾಗಿದೆ.

ಈ ವಿಭಾಗದ ಜಿಲ್ಲೆಗಳಲ್ಲಿ ದೊರೆಯುವ ಪ್ರಮುಖ ಖನಿಜಗಳೆಂದರೆ ಬೆಳ್ಳಿ, ಸಿಲಿಕ, ಚಿನ್ನ (ರಾಯಚೂರು ಜಿಲ್ಲೆ), ಕಬ್ಬಿಣದ ಅದಿರು, ಸುಣ್ಣಕಲ್ಲು, ಮ್ಯಾಂಗನೀಸ್ ಅದಿರು (ಬಳ್ಳಾರಿ, ವಿಜಯನಗರ). ಗ್ರಾನೈಟ್ ಶಿಲೆಯು ವಿಭಾಗದ ಎಲ್ಲ ಜಿಲ್ಲೆಗಳಲ್ಲೂ ದೊರೆಯುತ್ತದೆ. ಪ್ರಾಕೃತಿಕ ಸಂಪನ್ಮೂಲ ದೃಷ್ಟಿಯಿಂದ ಇದು ಸಮೃದ್ಧ ವಿಭಾಗವಲ್ಲ.



ತುಂಗಾಭದ್ರಾ ಅಣೆಕಟ್ಟು



ಕಬ್ಬಿಣ ಗಣಿಗಾರಿಕೆ

ತುಂಗಭದ್ರಾ ಅಣೆಕಟ್ಟೆಯು ವಿಭಾಗದ ರಾಯಚೂರು, ಬಳ್ಳಾರಿ, ವಿಜಯನಗರ ಜಿಲ್ಲೆಗಳಿಗೆ ನೀರಾವರಿ ಒದಗಿಸುತ್ತದೆ. ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬಸವಸಾಗರ ಅಣೆಕಟ್ಟೆಯು ರಾಯಚೂರು ಮತ್ತು ಕಲಬುರಗಿ ಜಿಲ್ಲೆಯ ಕೃಷಿಗೆ ನೀರಾವರಿ ಒದಗಿಸುತ್ತದೆ. ಕಾರಂಜಾ ಯೋಜನೆಯು ಬೀದರ್ ಜಿಲ್ಲೆಯ ಕೃಷಿಗೆ ನೀರಾವರಿ ಒದಗಿಸುತ್ತದೆ.

© KTBS NOT TO BE REPUBLISHED

### 1.3.3 ಅರಣ್ಯಗಳು, ವನ್ಯಮೃಗಧಾಮಗಳು

ಈ ವಿಭಾಗವು ಅರಣ್ಯ ಕೊರತೆಯ ವಿಭಾಗವಾಗಿದೆ. ದೊಡ್ಡ ವನ್ಯಮೃಗಗಳು ಇಲ್ಲಿಲ್ಲ. ಲಂಗೂರ್, ಜಿಂಕೆ, ನರಿ, ಮಂಗಗಳು, ಕರಡಿ, ತೋಳ, ಕಾಡುನಾಯಿ ಮುಂತಾದ ಪ್ರಮುಖ ವನ್ಯಮೃಗಗಳು ಇಲ್ಲಿ ಕಂಡು ಬರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ದರೋಜಿ ಕರಡಿ ಧಾಮವಿದೆ. ರಾಯಚೂರು ಜಿಲ್ಲೆಯಲ್ಲಿ ಜಿಂಕೆಗಳು ಕಂಡು ಬರುತ್ತವೆ.

### 1.3.4 ಕೃಷಿ ಹಾಗೂ ಕೈಗಾರಿಕೆಗಳು



ದರೋಜಿ ಕರಡಿ ಧಾಮ

ಈ ವಿಭಾಗದಲ್ಲಿ ಜನರ ಮುಖ್ಯ ಉದ್ಯೋಗ ಒಕ್ಕಲುತನ. ಇಲ್ಲಿ ಮಳೆಯ ಪ್ರಮಾಣ ಕಡಿಮೆ. ಮಳೆಯನ್ನು ಅವಲಂಬಿಸಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಇಲ್ಲಿ ಮೇಲಿಂದ ಮೇಲೆ ಬರಗಾಲವು ಜನರನ್ನು ಕಾಡುತ್ತದೆ. ಈ ವಿಭಾಗದ ಜಿಲ್ಲೆಗಳನ್ನು ಬರಪೀಡಿತ ಜಿಲ್ಲೆಗಳು ಎಂದು ಕರೆಯಲಾಗುತ್ತದೆ. ಈ ವಿಭಾಗದಲ್ಲಿನ ಪ್ರಮುಖ ಉದ್ದಿಮೆಗಳೆಂದರೆ ಕಬ್ಬಿಣ ಮತ್ತು ಉಕ್ಕು, ಸಕ್ಕರೆ, ಸಿಮೆಂಟು, ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮುಂತಾದವು. ಈ ಉದ್ದಿಮೆಗಳು ಪುರುಷರು ಮತ್ತು ಮಹಿಳೆಯರಿಗೆ ಉದ್ಯೋಗದ ಅವಕಾಶಗಳನ್ನು ನೀಡಿವೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬೃಹತ್ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಿವೆ. ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಬೃಹತ್ ಸಿಮೆಂಟ್ ಕಾರ್ಖಾನೆಗಳಿವೆ. ಬೀದರ್ ಜಿಲ್ಲೆಯ ಬಿದರಿ ಕಲೆಯು ಹೆಸರುವಾಸಿಯಾಗಿದೆ. ಈ ವಿಭಾಗದಲ್ಲಿ ಪ್ರವಾಸೋದ್ಯಮವು ಬೆಳೆಯುತ್ತಿದೆ. ಈ ವಿಭಾಗದಲ್ಲಿರುವ ಪ್ರಮುಖ ಪ್ರವಾಸಿ ಕೇಂದ್ರಗಳೆಂದರೆ ವಿಜಯನಗರ ಜಿಲ್ಲೆಯ ಹಂಪಿ, ತುಂಗಭದ್ರ ಅಣೆಕಟ್ಟೆ, ಕಲಬುರಗಿ ಜಿಲ್ಲೆಯ ಸನ್ನತಿ, ಖ್ವಾಜಾ ಬಂದೇ ನವಾಜ್ ದರ್ಗಾ, ಬೀದರ್ ಜಿಲ್ಲೆಯಲ್ಲಿನ ಕೋಟೆ, ಬಸವಕಲ್ಯಾಣ, ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಮುಂತಾದವು. ಇಡೀ ಭಾರತದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದನೆ ಮಾಡುವ ಗಣಿ ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿದೆ.



ಹಟ್ಟಿ ಚಿನ್ನದ ಗಣಿ

NOT TO BE REPUBLISHED

### 1.3.5 ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ, ನೃತ್ಯ

ಕಲಬುರಗಿ ವಿಭಾಗದ ಜಿಲ್ಲೆಗಳು ಆರ್ಥಿಕವಾಗಿ ಹಿಂದುಳಿದಿರಬಹುದು. ಆದರೆ ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಮುಂತಾದ ವಿಷಯಗಳಲ್ಲಿ ಅದು ಶ್ರೀಮಂತವಾಗಿದೆ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಲಬುರಗಿ ವಿಭಾಗಕ್ಕೆ ಪ್ರಾಚೀನ ಚರಿತ್ರೆಯಿದೆ. ಕನ್ನಡದ ಶಾಸ್ತ್ರಕೃತಿ 'ಕವಿರಾಜಮಾರ್ಗ' ರಚನೆಯಾದುದು ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ. ಆದಿಕವಿ ಪಂಪನು ಅರಸ ಅರಿಕೇಸರಿ ನೀಡಿದ ರಾಜಾಶ್ರಯದಲ್ಲಿ ತನ್ನ ಮಹತ್ವವಾದ ಕಾವ್ಯ 'ವಿಕ್ರಮಾರ್ಜುನವಿಜಯ'ವನ್ನು ರಚಿಸಿದ. ಕನ್ನಡದಲ್ಲಿ ಮೂರು ರತ್ನತ್ರಯರನ್ನು ಗುರುತಿಸಲಾಗುತ್ತದೆ. ಅವರು ಪಂಪ, ಪೊನ್ನ ಮತ್ತು ರನ್ನ. ಇವರು ಮೂವರು ಕಲಬುರಗಿ ವಿಭಾಗಕ್ಕೆ ಸೇರಿದವರು. ಕನ್ನಡದ ಪ್ರಥಮ ವ್ಯಾಕರಣ ಗ್ರಂಥ 'ಶಬ್ದಮಣಿದರ್ಪಣ'ವನ್ನು ರಚಿಸಿದ ಕೇಶಿರಾಜ ಕಲಬುರಗಿ ಜಿಲ್ಲೆಗೆ ಸೇರಿದವನು.

**ವಚನ ಚಳವಳಿ :**

ಕರ್ನಾಟಕದಲ್ಲಿ 12ನೆಯ ಶತಮಾನದಲ್ಲಿ ಜರುಗಿದ ಮಹತ್ವದ ಸಮಾಜ ಸುಧಾರಣಾ ಚಳವಳಿ ಎಂದೇ ಹೆಸರಾಗಿರುವ ವಚನ ಸಾಹಿತ್ಯ ಪರಂಪರೆಯು ಕಲಬುರಗಿ ವಿಭಾಗದ ಕಲ್ಯಾಣ ನಗರದಲ್ಲಿ ಬೆಳೆಯಿತು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಜೇಡರದಾಸಿಮಯ್ಯ, ಸಿದ್ಧರಾಮ ಮುಂತಾದ ಶಿವಶರಣರು ಸಿದ್ಧಿ ಸಾಧನೆ ಮಾಡಿದ ಕಾರ್ಯಕ್ಷೇತ್ರ ಕಲಬುರಗಿ ವಿಭಾಗ. ಈ ಚಳವಳಿಯ ಭಾಗವಾಗಿ ಸಮಾಜದ ಎಲ್ಲ ಸ್ತರದ ಪುರುಷರು ಮತ್ತು ಮಹಿಳೆಯರು ವಚನಗಳನ್ನು ಬರೆದರು.



ಬಸವಣ್ಣ

**ದಾಸ ಸಾಹಿತ್ಯ :**

ಕಲಬುರಗಿ ವಿಭಾಗದ ರಾಯಚೂರು ಜಿಲ್ಲೆಯು ದಾಸ ಸಾಹಿತ್ಯದ ತವರೂರು. ಶ್ರೀವ್ಯಾಸರಾಯರ ನೇತೃತ್ವದಲ್ಲಿ ದಾಸಕೂಟವನ್ನು ರೂಪಿಸಲಾಯಿತು. ಪುರಂದರದಾಸರು, ಕನಕದಾಸರು, ರಾಘವೇಂದ್ರತೀರ್ಥರು ಮುಂತಾದವರು ಕೀರ್ತನೆಗಳನ್ನು ರಚಿಸಿದರು. ದಾಸಸಾಹಿತ್ಯವು ಮುಂದೆ ಕರ್ನಾಟಕ ಸಂಗೀತ ಪರಂಪರೆಗೆ ದೊಡ್ಡ ಕೊಡುಗೆಯನ್ನೇ ಕೊಟ್ಟಿತು. ನೂರಾರು ದಾಸರ ಕೃತಿ, ಕೀರ್ತನೆ, ಸುಳಾದಿ, ಗೀತ, ಪ್ರಬಂಧ, ನಾಮಾವಳಿ ಮುಂತಾದ ಸಂಗೀತರಚನೆಗಳಿಂದ ಕನ್ನಡ ಸಾಹಿತ್ಯ ಶ್ರೀಮಂತವಾಯಿತು.



ಪುರಂದರದಾಸರು

© KTBS NOT TO BE REPUBLISHED

### ತತ್ವ ಪದಕಾರರು

ವಚನ ಸಾಹಿತ್ಯ, ದಾಸ ಸಾಹಿತ್ಯ, ಪ್ರಾಚೀನ ಕಾವ್ಯಗಳು ಮುಂತಾದ ವಿಚಾರಗಳಿಂದ ಪ್ರಭಾವಿತರಾದ ಜನರು ತತ್ತ್ವಪದಗಳನ್ನು ಕಟ್ಟಿದರು. ಜನಪದ ಕಲಾವಿದರು, ಸಾಧು-ಸಂತರು, ಫಕೀರರು ಕಟ್ಟಿದ ಹಾಡುಗಳನ್ನು ತತ್ತ್ವಪದಗಳು ಎಂದು ಕರೆಯಬಹುದು. 18 ಮತ್ತು 19ನೆಯ ಶತಮಾನದಲ್ಲಿ ಅನೇಕ ತತ್ತ್ವಪದಕಾರರು ಲಿಂಗ ಅಸಮಾನತೆಯ ವಿರುದ್ಧ, ಅಸ್ಪೃಶ್ಯತೆಯ ವಿರುದ್ಧ, ಸುಳ್ಳು ಹೇಳುವುದರ ವಿರುದ್ಧ, ಹಣ ಸಂಪಾದನೆ ವಿರುದ್ಧ ತಮ್ಮ ಪದಗಳಲ್ಲಿ ವ್ಯಂಗ್ಯವಾಡಿದ್ದಾರೆ. ಚೆನ್ನೂರ ಜಲಾಲ್ ಸಾಬ್, ಹನುಮಂತವ್ವ ಮುಂತಾದವರು ತತ್ತ್ವಪದಗಳನ್ನು ರಚಿಸಿದ್ದಾರೆ. ಅನೇಕ ಅನಕ್ಷರಸ್ಥರು ತತ್ತ್ವಪದಗಳನ್ನು ಕಟ್ಟಿ ಹಾಡಿದ್ದಾರೆ.

ಆಧುನಿಕ ಕಾಲಕ್ಕೆ ಬಂದರೆ ಕಲಬುರಗಿ ವಿಭಾಗದಲ್ಲಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರೆಂದರೆ ಸಿದ್ದಯ್ಯ ಪುರಾಣಿಕ, ಜಯತೀರ್ಥ ರಾಜಪುರೋಹಿತ, ಶಾಂತರಸ, ಪಂಡಿತ ತಾರಾನಾಥ, ಬೀಚಿ, ಮುದೇನೂರ ಸಂಗಣ್ಣ, ಸಿಂಪಿಲಿಂಗಣ್ಣ, ಶ್ರೀಮತಿ ಶೈಲಜ ಚಡಚಣ, ಜಯದೇವಿ ತಾಯಿ ಲಿಗಾಡೆ, ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ ಮುಂತಾದವರು. ಸಂಗೀತ ಕ್ಷೇತ್ರಕ್ಕೂ ಕಲಬುರಗಿ ವಿಭಾಗ ಅಪಾರ ಕಾಣಿಕೆ ನೀಡಿದೆ. ಸಿದ್ಧರಾಮ ಜಂಬಲದಿನ್ನಿ, ಪಂ. ತಾರಾನಾಥ, ಗಜಲ್ ಗುಂಡಮ್ಮ, ಸುಭದ್ರಮ್ಮ ಮನ್ಸೂರ್ ಮುಂತಾದವರು ಸಂಗೀತ ಕ್ಷೇತ್ರಕ್ಕೆ ಕಾಣಿಕೆ ನೀಡಿದ್ದಾರೆ. ಚಿತ್ರಕಲೆಯಲ್ಲಿ ಪ್ರಸಿದ್ಧರಾದ ಎಸ್. ಎಂ. ಪಂಡಿತ್ ಅವರ ಹೆಸರು ಮುಂಚೂಣಿಯಲ್ಲಿದೆ. ಜನಪದ ನಾಟಕಕ್ಕೆ ಬಂದರೆ ಕಲಬುರಗಿ ವಿಭಾಗದಲ್ಲಿ ದೊಡ್ಡಾಟ, ಸಣ್ಣಾಟ, ತೊಗಲು ಗೊಂಬೆ ಪ್ರದರ್ಶನ ಮುಂತಾದವು ಪ್ರಚಲಿತದಲ್ಲಿವೆ. ತೊಗಲು ಬೊಂಬೆಯಾಟದಲ್ಲಿ ಬೆಳಗಲ್ ವೀರಣ್ಣ ಪ್ರಸಿದ್ಧರು.

ನಂದಿ ಕುಣಿತ, ಅಲಾವಿ ಕುಣಿತ, ಚೌಡಮ್ಮನ ಕುಣಿತ, ಲಂಬಾಣಿ ಕುಣಿತ, ಕೋಲಾಟ, ವೀರಗಾಸೆ, ದುರಗ-ಮುರಗಿ ಮುಂತಾದವು ಜನಪದ ಕಲಾ ಪ್ರಕಾರಗಳಾಗಿವೆ. ಕರಡಿ ಮಜಲು, ಶಿಳ್ಳೆಕ್ಯಾತರ ಆಟ, ಮೊಹರಂ ಕುಣಿತ, ಹಗಲು ವೇಷಗಾರರು ಮುಂತಾದವು ಜನಪದ ಪ್ರಕಾರಗಳಾಗಿವೆ. ಬೀದರ್ ಜಿಲ್ಲೆಯ ಬಿದರಿ ಕಲೆ, ಕಿನ್ನಾಳದ ಗೊಂಬೆಗಳು, ಕೊಪ್ಪಳ ಜಿಲ್ಲೆಯ ಕೌದಿಗಳು ಮುಂತಾದವು ಪ್ರಚಲಿತದಲ್ಲಿರುವ ಸಾಂಪ್ರದಾಯಿಕ ಕಲೆಗಳಾಗಿವೆ.

@KTBS NOT TO BE REPUBLISHED

### 1.3.6 ಶಿಕ್ಷಣ – ಆರೋಗ್ಯ

ನಮ್ಮ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಾದ ಯಾದಗೀರ್, ರಾಯಚೂರು ಜಿಲ್ಲೆಗಳು ಕಲಬುರಗಿ ವಿಭಾಗದಲ್ಲಿವೆ. ಶೈಕ್ಷಣಿಕ ಪ್ರಗತಿಯ ಸೂಚಿಯಾದ ಸಾಕ್ಷರತೆಯ ಪ್ರಮಾಣ ಇಲ್ಲಿ ಕೆಳಮಟ್ಟದಲ್ಲಿದೆ. ಇತ್ತೀಚೆಗೆ ಸಾಕ್ಷರತೆಯ ಮಟ್ಟ ಉತ್ತಮವಾಗುತ್ತಿದೆ. ಈ ವಿಭಾಗದ ಕಲಬುರಗಿ ನಗರದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವಿದೆ ಹಾಗೂ ಇಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವಿದೆ. ರಾಯಚೂರು ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಮತ್ತು ಬಳ್ಳಾರಿಯಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವಿದೆ ಹಾಗೂ ವಿಜಯನಗರ ಜಿಲ್ಲೆಯ ಹಂಪಿ ಪ್ರದೇಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಇದೆ. ಬೀದರಿನಲ್ಲಿ ಪಶು ಸಂಗೋಪನಾ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯವಿದೆ. ಕಲಬುರಗಿಯಲ್ಲಿ ಪ್ರಸಿದ್ಧ ಬುದ್ಧ ವಿಹಾರವಿದೆ.

ಬಳ್ಳಾರಿ, ಕಲಬುರಗಿ, ರಾಯಚೂರು, ಬೀದರ್‌ನಲ್ಲಿ ವೈದ್ಯಕೀಯ ಕಾಲೇಜುಗಳಿವೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಆರೋಗ್ಯ ಒದಗಿಸುವ ಆರೋಗ್ಯ ಉಪಕೇಂದ್ರಗಳಿವೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ ತೀವ್ರಗತಿಯಲ್ಲಿ ನಡೆಯುತ್ತಿದೆ. ಇಲ್ಲಿ ದೊಡ್ಡದಾದ ಇ.ಎಸ್.ಐ ಆಸ್ಪತ್ರೆಯು ಇದೆ.



ಬುದ್ಧ ವಿಹಾರ



ಗುಲ್ಬರ್ಗ ವಿಶ್ವವಿದ್ಯಾಲಯ

© KTBS NOT TO BE REPUBLISHED

### 1.3.7 ಸಾಂಸ್ಕೃತಿಕ ಸಂಪತ್ತು

ಸಂಗೀತ, ಸಾಹಿತ್ಯ, ಚಿತ್ರಕಲೆ, ಜಾನಪದ, ನಾಟಕ, ನೃತ್ಯ, ಮುಂತಾದ ಕ್ಷೇತ್ರಗಳಲ್ಲಿ ಕಲಬುರಗಿ ವಿಭಾಗದ ಜಿಲ್ಲೆಗಳು ನಾಡಿಗೆ ಅಪಾರ ಕಾಣಿಕೆ ನೀಡಿವೆ. ಕರ್ನಾಟಕದ ಪ್ರಾಚೀನ ನಾಲ್ಕು ಮಹತ್ವದ ರಾಜ ಮನೆತನಗಳಿಗೆ ಇದು ಆಶ್ರಯ ನೀಡಿದೆ. ಅವು ಯಾವುವೆಂದರೆ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಬಹಮನಿ ಮತ್ತು ವಿಜಯನಗರ ಸಾಮ್ರಾಜ್ಯಗಳು. ಈ ರಾಜ ಮನೆತನಗಳ ಆಳ್ವಿಕೆಯಲ್ಲಿ ಸಾಹಿತ್ಯ, ಕಲೆ, ಸಂಗೀತಗಳಿಗೆ ಪ್ರೋತ್ಸಾಹ ದೊರೆತಿದೆ. ವೃತ್ತಿ ರಂಗಭೂಮಿಗೂ ಈ ವಿಭಾಗ ಹೆಸರುವಾಸಿಯಾಗಿದೆ.



ಕಿನ್ನಾಳದ ಗೊಂಬೆಗಳು

ಬೀದರ್‌ನ ಬಿದರಿ ಕಲೆ, ಕಿನ್ನಾಳದ ಆಟಿಕೆಗಳು, ಕೌದಿ ಮುಂತಾದ ಗೃಹ ಕೈಗಾರಿಕೆಗಳು ಇಲ್ಲಿವೆ. ಪ್ರಾಚೀನ ವಾಸ್ತುಶಿಲ್ಪ ಕಲೆಗೆ ಇದು ಹೆಸರುವಾಸಿಯಾಗಿದೆ. ಬೀದರ್‌ನ ಕೋಟೆ, ಹಂಪಿಯ ಸ್ಮಾರಕಗಳು, ಬಸವ ಕಲ್ಯಾಣದ ಬಸವ ಸ್ಮಾರಕಗಳು, ಕಲಬುರಗಿಯ ಖ್ವಾಜಾ ಬಂದೇ ನವಾಜ ದರ್ಗಾ, ಸನ್ನತಿಯ ಸ್ಮಾರಕಗಳು ಇತ್ಯಾದಿ ಇಲ್ಲಿನ ವಾಸ್ತುಶಿಲ್ಪದ ಅದ್ಭುತಗಳಾಗಿವೆ.

### 1.3.8 ಸ್ವಾತಂತ್ರ್ಯ ಹೋರಾಟಗಾರರು

ಕರ್ನಾಟಕದ ಇತರೆ ಭಾಗಗಳಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸಿದರೆ ಕಲಬುರಗಿ ವಿಭಾಗದಲ್ಲಿ ಜನರು ಸ್ವಾತಂತ್ರ್ಯ ಹೋರಾಟ, ನಿಜಾಮ್ ಸಂಸ್ಥಾನದ ವಿಮೋಚನಾ ಚಳವಳಿ ಮತ್ತು ಕರ್ನಾಟಕ ಏಕೀಕರಣ ಚಳವಳಿಗಳಲ್ಲಿ ಭಾಗವಹಿಸಬೇಕಾಯಿತು. ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದಂತೆ ಕಲಬುರಗಿ ವಿಭಾಗದಲ್ಲಿ ನಡೆದ ಎರಡು ಬೆಳವಣಿಗೆಗಳನ್ನು ಉಲ್ಲೇಖಿಸಬೇಕು. ಮೊದಲನೆಯದು ಜನರಲ್ಲಿ ರಾಷ್ಟ್ರೀಯ ಚಳವಳಿಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಆರಂಭಿಸಲಾದ ವಾಚನಾಲಯ ಚಳವಳಿ ಮತ್ತು ಎರಡನೆಯದು ಮಕ್ಕಳಿಗೆ ಶಿಕ್ಷಣ ನೀಡುವುದಕ್ಕಾಗಿ ಮತ್ತು ಸ್ವಾತಂತ್ರ್ಯ ಹೋರಾಟದ ಬಗ್ಗೆ ತರಬೇತಿ ನೀಡಲು ರಾಷ್ಟ್ರೀಯ ಶಾಲೆಗಳ ಸ್ಥಾಪನೆ. ನಾಲ್ಕು ರಾಷ್ಟ್ರೀಯ ಶಾಲೆಗಳು ಸ್ಥಾಪಿಸಲ್ಪಟ್ಟವು. ಅವುಗಳೆಂದರೆ,

1. ನೂತನ ವಿದ್ಯಾಲಯ, ಕಲಬುರಗಿ (1907)
2. ಉಸ್ಮಾನಿಯ ರಾಷ್ಟ್ರೀಯ ಶಾಲೆ, ಚಿಂಚೋಳಿ
3. ವಿದ್ಯಾನಂದ ಗುರುಕುಲ, ಕುಕನೂರು (1922)
4. ಹಮ್‌ದರ್ದ್ ರಾಷ್ಟ್ರೀಯ ಶಾಲೆ, ರಾಯಚೂರು (1922).

NOT TO BE REPUBLISHED @KTBS

ಈ ವಿಭಾಗದಲ್ಲಿ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆ ಆರ್ಯ ಸಮಾಜದಿಂದ ಮತ್ತು ವಂದೇಮಾತರಂ ಚಳವಳಿಗಳಿಂದ ಬಂದಿತು. ಮಹಾಗಾಂವ್‌ನ ಕಲ್ಯಾಣಶೆಟ್ಟಿ ಅವರು ಸ್ವಾತಂತ್ರ್ಯ ಹೋರಾಟ ನಡೆಸಲು ತರುಣ ಸಂಘವನ್ನು ಕಟ್ಟಿದರು. ಮಹಾಗಾಂವ್‌ನ ಚಂದ್ರಶೇಖರ ಪಾಟೀಲರು ಅದರ ಅಧ್ಯಕ್ಷರಾಗಿ ಅದನ್ನು ಮುನ್ನಡೆಸಿದರು. ಶ್ರೀ ರಮಾನಂದ ತೀರ್ಥ ಅವರು ಈ ವಿಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು. ಇವರಲ್ಲದೆ ನೂರಾರು ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು.


ಶ್ರೀ ರಮಾನಂದ ತೀರ್ಥ

ನಿಜಾಮ್‌ಶಾಹಿ ವಿಮೋಚನಾ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವರಲ್ಲಿ ಸರದಾರರು ಶರಣಗೌಡ ಇನಾಂದಾರ್ ಪ್ರಮುಖರು. ನಿಜಾಮನ ಖಾಸಗಿ ಸೈನ್ಯ ರಜಾಕಾರರು ಕಲಬುರಗಿ ವಿಭಾಗದಲ್ಲಿ ನಾಗರಿಕರ ಮೇಲೆ ಅಪಾರ ಹಿಂಸೆ ನಡೆಸಿದರು. ಅವರ ವಿರುದ್ಧ ಜನರು ತೀವ್ರ ವಿರೋಧ ವ್ಯಕ್ತಪಡಿಸಿದರು. ಭಾರತಕ್ಕೆ ಆಗಸ್ಟ್ 15, 1947ರಲ್ಲಿ ಸ್ವಾತಂತ್ರ್ಯ ಬಂದಿತು. ಸೆಪ್ಟೆಂಬರ್ 17, 1948ರಂದು ನಿಜಾಮ್ ಸಂಸ್ಥಾನ ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಸಂವಿಧಾನದ ಯಾವ ಅನುಚ್ಛೇದದಲ್ಲಿ ಕಲಬುರಗಿ ವಿಭಾಗದ ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ?
2. ನಿಜಾಮ್ ಸಂಸ್ಥಾನವು ಯಾವ ವರ್ಷದಂದು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು?
3. ವಿಜಯನಗರ ಜಿಲ್ಲೆಯಲ್ಲಿನ ಹಂಪಿಯು ಯಾವ ಸಾಮ್ರಾಜ್ಯದ ರಾಜಧಾನಿಯಾಗಿತ್ತು?
4. ವಿಜಯನಗರ ಮತ್ತು ಬಹಮನಿ ಅರಸು ಮನೆತನಗಳ ಪತನದ ನಂತರ ಆಡಳಿತ ನಡೆಸಿದ ಎರಡು ಪಾಳೆಪಟ್ಟುಗಳ ಹೆಸರು ಬರೆಯಿರಿ.
5. ಕಲಬುರಗಿ ವಿಭಾಗದ ಎರಡು ಪ್ರಮುಖ ನದಿಗಳು ಯಾವುವು?
6. ಬೀದರ್ ಜಿಲ್ಲೆಯಲ್ಲಿನ ಒಂದು ಅಣೆಕಟ್ಟೆಯ ಹೆಸರನ್ನು ಬರೆಯಿರಿ.
7. ಬಳ್ಳಾರಿ, ವಿಜಯನಗರ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರಾವರಿ ಒದಗಿಸುತ್ತಿರುವ ಅಣೆಕಟ್ಟೆಯ ಹೆಸರನ್ನು ಬರೆಯಿರಿ.
8. ಕಲಬುರಗಿ ವಿಭಾಗದ ಪ್ರಮುಖ ಉದ್ದಿಮೆಗಳನ್ನು ಹೆಸರಿಸಿ.
9. ಕಲಬುರಗಿ ವಿಭಾಗದ ಯಾವ ಜಿಲ್ಲೆಯಲ್ಲಿ ಬೃಹತ್ ಕಬ್ಬಿಣದ ಅದಿರು ನಿಕ್ಷೇಪಗಳಿವೆ?
10. ಕಲಬುರಗಿಯಲ್ಲಿರುವ ದರ್ಗಾದ ಹೆಸರೇನು?
11. ಕಲಬುರಗಿ ವಿಭಾಗದಲ್ಲಿ ಪ್ರಾಚೀನ ಕಾಲದಲ್ಲಿ ರಚಿತವಾದ ಎರಡು ಕಾವ್ಯಗಳನ್ನು ಹೆಸರಿಸಿ.
12. ವಚನ ಚಳವಳಿಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
13. ದಾಸ ಸಾಹಿತ್ಯದಲ್ಲಿ ಸಾಧನೆ ಮಾಡಿದ ಇಬ್ಬರು ದಾಸ ಶ್ರೇಷ್ಠರ ಹೆಸರನ್ನು ಬರೆಯಿರಿ.
14. ಕಲಬುರಗಿ ವಿಭಾಗದಲ್ಲಿ ಜನಪದ ಕುಣಿತಗಳನ್ನು ಹೆಸರಿಸಿ.
15. ಈ ವಿಭಾಗದ ರಾಯಚೂರು ಜಿಲ್ಲೆಯಲ್ಲಿರುವ ವಿಶ್ವವಿದ್ಯಾಲಯ ಯಾವುದು?
16. ಬಳ್ಳಾರಿ ಜಿಲ್ಲೆಯಲ್ಲಿರುವ ವಿಶ್ವವಿದ್ಯಾಲಯ ಯಾವುದು?

©KTBS NOT TO BE REPUBLISHED

17. ಕನ್ನಡ ವಿಶ್ವವಿದ್ಯಾಲಯವು ಯಾವ ಸ್ಥಳದಲ್ಲಿದೆ?

18. ಕಲಬುರಗಿ ವಿಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಮತ್ತೆರಡು ಚಳವಳಿಗಳು ನಡೆದವು. ಅವು ಯಾವುವು?

19. ನಿಜಾಮನ ಖಾಸಗಿ ಸೇನೆಯ ಹೆಸರೇನು?

20. ಕಲಬುರಗಿ ವಿಭಾಗದಲ್ಲಿ ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ಆರಂಭವಾದ ಎರಡು ರಾಷ್ಟ್ರೀಯ ಶಾಲೆಗಳ ಹೆಸರನ್ನು ಬರೆಯಿರಿ.

21. ಹೈದರಾಬಾದ್ ನಿಜಾಮರ ಸಂಸ್ಥಾನ ಯಾವ ದಿನಾಂಕದಂದು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು?

22. ಕಲಬುರಗಿ ವಿಭಾಗದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರನ ಹೆಸರೇನು?

## ಖಾಲಿ ಜಾಗಗಳನ್ನು ಭರ್ತಿ ಮಾಡಿ

1. ವಿಜಯನಗರ ಜಿಲ್ಲೆಯ -------- ಎಂಬಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು.
2. ಕಲಬುರಗಿ ವಿಭಾಗದ ಜಿಲ್ಲೆಗಳಿಗೆ ------- ರಲ್ಲಿ ಸ್ವಾತಂತ್ರ್ಯ ದೊರೆಯಿತು.
3. ಕಲಬುರಗಿ ವಿಭಾಗದ ------ ಎಂಬಲ್ಲಿ ಚಿನ್ನದ ಗಣಿ ಇದೆ
4. ಬಳ್ಳಾರಿ ಜಿಲ್ಲೆಯಲ್ಲಿ ---------- ಕರಡಿ ಧಾಮವಿದೆ.
5. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ------ ಜಿಲ್ಲೆಯಲ್ಲಿದೆ.
6. ವಿಜಯನಗರ ಜಿಲ್ಲೆಯ ಹಂಪಿಯಲ್ಲಿರುವ ವಿಶ್ವವಿದ್ಯಾಲಯದ ಹೆಸರು ---------.

## ಚಟುವಟಿಕೆ

ಈ ವಿಭಾಗದ ಜಿಲ್ಲೆಗಳಲ್ಲಿರುವ ಕಬ್ಬಿಣದ ಗಣಿಗಳನ್ನು ಮತ್ತು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳನ್ನು ಪಟ್ಟಿ ಮಾಡಿ. ಅವುಗಳ ಚಿತ್ರಗಳನ್ನು ಸಂಗ್ರಹಿಸಿ ವರದಿಯನ್ನು ಸಿದ್ಧಪಡಿಸಿ.

©KTBS NOT TO BE REPUBLISHED

## 1.4 ಬೆಳಗಾವಿ ವಿಭಾಗ

ಈ ವಿಭಾಗದ ನಾಲ್ಕು ಜಿಲ್ಲೆಗಳು 1956ರವರೆಗೆ ಮುಂಬೈ ಪ್ರಾಂತದಲ್ಲಿದ್ದವು. ರಾಜ್ಯ ಪುನರ್ವಿಂಗಡಣೆಯಲ್ಲಿ ಕರ್ನಾಟಕದಲ್ಲಿ ವಿಲೀನಗೊಂಡವು. ಈ ವಿಭಾಗದ ಧಾರವಾಡ ಜಿಲ್ಲೆಯನ್ನು 1997ರಲ್ಲಿ ವಿಭಜಿಸಿ ಹಾವೇರಿ ಮತ್ತು ಗದಗ ಜಿಲ್ಲೆಗಳನ್ನು ರಚಿಸಲಾಯಿತು ಮತ್ತು ವಿಜಾಪುರ (ವಿಜಯಪುರ) ಜಿಲ್ಲೆಯನ್ನು ವಿಭಜಿಸಿ ಬಾಗಲಕೋಟೆ ಜಿಲ್ಲೆಯನ್ನು ರಚಿಸಲಾಯಿತು. ಈ ವಿಭಾಗದಲ್ಲಿ ಇಂದು ಏಳು ಜಿಲ್ಲೆಗಳಿವೆ. ಅವು ಯಾವುವೆಂದರೆ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆ.




ಬೆಳಗಾವಿ ವಿಭಾಗದ ಜಿಲ್ಲಾವಾರು–ಭೂಪಟ

NOT TO BE REPUBLISHED ©KTBS

### 1.4.1 ಚಾರಿತ್ರಿಕ ಹಿನ್ನೆಲೆ

ಈ ಪ್ರದೇಶದಲ್ಲಿ ಶಾತವಾಹನರು ಮತ್ತು ಮೌರ್ಯರು ಆಳ್ವಿಕೆ ನಡೆಸಿದರು. ಈ ವಿಭಾಗದ ಬನವಾಸಿಯು ಕದಂಬರ ರಾಜಧಾನಿಯಾಗಿತ್ತು. ಚಾಲುಕ್ಯರ ರಾಜಧಾನಿ ಬಾದಾಮಿ ಇಲ್ಲಿದೆ. ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಗಳಲ್ಲಿ ವಿಶ್ವ ಪ್ರಸಿದ್ಧ ದೇವಾಲಯಗಳಿವೆ. ಬಾದಾಮಿಯ ಗವಿಗಳಲ್ಲಿ ಶಿಲ್ಪಕಲಾ ವೈಭವವನ್ನು ಕಾಣಬಹುದು. ಈ ವಿಭಾಗದ ಬಸವನಬಾಗೇವಾಡಿ, ಕೂಡಲಸಂಗಮ ಮುಂತಾದವು ವಚನ ಚಳವಳಿಗೆ ಕೇಂದ್ರಗಳಾಗಿವೆ. ಸಾಮಾಜಿಕ ಬದಲಾವಣೆಯ ಹರಿಕಾರ ಶ್ರೀ ಬಸವೇಶ್ವರರು ಐಕ್ಯರಾದ ಐಕ್ಯಸ್ಥಳ ಕೂಡಲಸಂಗಮದಲ್ಲಿದೆ. ಬೆಳಗಾವಿ ವಿಭಾಗದಲ್ಲಿ ರಾಷ್ಟ್ರಕೂಟರು, ತದನಂತರ ಬಹಮನಿ ಅರಸರು ಆಳ್ವಿಕೆ ನಡೆಸಿದರು.

ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಬೆಳಗಾವಿ ವಿಭಾಗದ ಜಿಲ್ಲೆಗಳು ಅದ್ಭುತ ಪಾತ್ರ ನಿರ್ವಹಿಸಿವೆ. ಕಿತ್ತೂರು ರಾಣಿ ಚೆನ್ನಮ್ಮ 1824ರಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದಳು. ಕಿತ್ತೂರು ಚೆನ್ನಮ್ಮ ನಡೆಸಿದ ಬ್ರಿಟಿಷ್ ವಿರೋಧಿ ಸಂಘರ್ಷ ಚಾರಿತ್ರಿಕವಾದುದು. ಆನಂತರ

ಸಂಗೊಳ್ಳಿ ರಾಯಣ್ಣ ನಡೆಸಿದ ಹೋರಾಟ ಸ್ಮರಣೀಯ. ಬೆಳಗಾವಿಯಲ್ಲಿ 1924ರಲ್ಲಿ ಮಹಾತ್ಮ ಗಾಂಧಿ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ ನಿರಾಕರಣೆ ಸತ್ಯಾಗ್ರಹ ನಡೆಯಿತು.



ಕಿತ್ತೂರು ರಾಣಿ ಚೆನ್ನಮ್ಮ



ಸಂಗೊಳ್ಳಿ ರಾಯಣ್ಣ

ಈ ವಿಭಾಗದ ಜಿಲ್ಲೆಗಳು ಮುಂಬೈ ಪ್ರಾಂತದ ಭಾಗದಲ್ಲಿದ್ದವು. ಕರ್ನಾಟಕ ಏಕೀಕರಣವಾದಾಗ (1956)ರಲ್ಲಿ ಅವು ಕರ್ನಾಟಕದಲ್ಲಿ ವಿಲೀನಗೊಂಡವು. ಆರಂಭದಲ್ಲಿ ಈ ವಿಭಾಗದಲ್ಲಿ ಬೆಳಗಾವಿ, ಉತ್ತರ ಕನ್ನಡ, ಬಿಜಾಪುರ (ವಿಜಯಪುರ) ಮತ್ತು ಧಾರವಾಡ ಎಂಬ ನಾಲ್ಕು ಜಿಲ್ಲೆಗಳಿದ್ದವು. ಆರಂಭದಲ್ಲಿ ತಿಳಿಸಿದಂತೆ ಧಾರವಾಡ ಮತ್ತು ವಿಜಯಪುರ ಜಿಲ್ಲೆಗಳನ್ನು ವಿಭಜಿಸಿದ್ದರಿಂದ ಇಂದು ಈ ವಿಭಾಗದಲ್ಲಿ ಏಳು ಜಿಲ್ಲೆಗಳಿವೆ. ಈ ವಿಭಾಗದ ವಿಜಯಪುರ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳು ಗಡಿ ಜಿಲ್ಲೆಗಳಾಗಿವೆ.

### 1.4.2 ಪ್ರಾಕೃತಿಕ ಸಂಪತ್ತು

ಈ ವಿಭಾಗವು ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಸಮೃದ್ಧವಾಗಿದೆ. ತುಂಬಿ ಹರಿಯುವ ನದಿಗಳಿವೆ. ದಟ್ಟವಾದ ಅರಣ್ಯಗಳಿವೆ. ಅನೇಕ ಖನಿಜ ನಿಕ್ಷೇಪಗಳಿವೆ. ಫಲವತ್ತಾದ ಮಣ್ಣಿದೆ. ವಿದ್ಯುತ್ ಸ್ಥಾವರಗಳಿವೆ. ಈ ವಿಭಾಗದಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ, ಕಾಳಿ, ತುಂಗಭದ್ರಾ ಮುಂತಾದವು. ಈ ನದಿಗಳು ಹರಿಯುವ ಪ್ರದೇಶಗಳಲ್ಲಿ ಅನೇಕ ಸುಂದರ ಜಲಪಾತಗಳಿವೆ. ಗೋಕಾಕ್ ಜಲಪಾತ ಆಕರ್ಷಣೀಯವಾಗಿದೆ. ದಾಂಡೇಲಿ ಹತ್ತಿರದ ಮಾಗೋಡು ಜಲಪಾತ, ಕಾರವಾರ ಹತ್ತಿರದ ದೇವಮಾಲಾ ಜಲಪಾತ, ಮುರುಡೇಶ್ವರದ ಹತ್ತಿರವಿರುವ ಅಪ್ಸರಕೊಂಡ ಜಲಪಾತ ಮುಂತಾದವು ಪ್ರಾಕೃತಿಕ ಸೌಂದರ್ಯದ ತಾಣಗಳಾಗಿವೆ. ಪ್ರವಾಸೋದ್ಯಮಕ್ಕೆ ಉತ್ತಮವಾದ ವಾತಾವರಣ ಇಲ್ಲಿದೆ. ಅಂಶಿ ರಾಷ್ಟ್ರೀಯ ಉದ್ಯಾನವನ ಕಾಳಿ ನದಿಯ ದಡದಲ್ಲಿದೆ. ಇಲ್ಲಿರುವ ಮತ್ತೊಂದು ವನ್ಯಮೃಗಧಾಮ ದಾಂಡೇಲಿ ವನ್ಯಮೃಗಧಾಮ. ಅಟ್ಟಿವೇರಿ ಪಕ್ಷಿಧಾಮ ಮತ್ತೊಂದು ಪ್ರಕೃತಿಯ ಸುಂದರ



ಗುಹಾಂತರ ದೇವಾಲಯ, ಬಾದಾಮಿ

©KTBS NOT TO BE REPUBLISHED

ತಾಣವಾಗಿದೆ. ಈ ವಿಭಾಗದ ಬಾಗಲಕೋಟೆ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ಮತ್ತೊಂದು ಇಲ್ಲಿ ದೊರೆಯುವ ಕಚ್ಚಾ ವಸ್ತುವೆಂದರೆ ಸುಣ್ಣಕಲ್ಲು. ಈ ವಿಭಾಗದ ಜಿಲ್ಲೆಗಳಲ್ಲಿ ಬೆಣಚುಕಲ್ಲು ಅಪಾರವಾಗಿ ದೊರೆಯುತ್ತದೆ. ಇಳಕಲ್ಲು ಭಾಗದಲ್ಲಿ ಗ್ರಾನೈಟಿನ ಅಪಾರ ನಿಕ್ಷೇಪವಿದೆ. ಇಲ್ಲಿಂದ ಗ್ರಾನೈಟ್ ಕಲ್ಲುಗಳನ್ನು ರಫ್ತು ಮಾಡಲಾಗುತ್ತದೆ.



ಇಳಕಲ್ ಗ್ರಾನೈಟ್ ಉದ್ಯಮ

### 1.4.3 ಅರಣ್ಯಗಳು, ವನ್ಯಮೃಗಧಾಮಗಳು

ಈ ವಿಭಾಗದ ಬೆಳಗಾವಿ ಜಿಲ್ಲೆ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿ ದಟ್ಟವಾದ ಅರಣ್ಯವಿದೆ. ನಿತ್ಯಹರಿದ್ವರ್ಣ ಕಾಡುಗಳು ಇಲ್ಲಿವೆ. ಉಷ್ಣ ವಲಯದ ದಟ್ಟವಾದ ಬಹುಹಂತದ ಕಾಡುಗಳನ್ನು ಮತ್ತು ವರ್ಷ ಪೂರ್ತಿ ಹಸಿರಾಗಿರುವ ಕಾಡುಗಳನ್ನು ನಿತ್ಯಹರಿದ್ವರ್ಣ ಕಾಡುಗಳೆಂದು ಕರೆಯುತ್ತಾರೆ. ಇಲ್ಲಿ ಅನಾವೃಷ್ಟಿ ಅನ್ನುವುದೇ ಇರುವುದಿಲ್ಲ. ಇಲ್ಲಿ ಮೀಸಲು ಅರಣ್ಯ ಪ್ರದೇಶವಿದೆ, ಸಂರಕ್ಷಿತ ಅರಣ್ಯ ಪ್ರದೇಶವಿದೆ ಮತ್ತು ಮುಕ್ತ ಅರಣ್ಯ ಪ್ರದೇಶವಿದೆ. ಉತ್ತರ ಕನ್ನಡ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ.80ರಷ್ಟು ಅರಣ್ಯ ಪ್ರದೇಶವಿದೆ. ಆನೆ, ಕಾಡೆಮ್ಮೆ, ಜಿಂಕೆ, ಹುಲಿ, ಚಿರತೆ, ಕರಡಿ, ನವಿಲು, ಕಾಡು ಬೆಕ್ಕು ಮುಂತಾದ ವನ್ಯ ಪ್ರಾಣಿಗಳಿವೆ.



ದಟ್ಟ ಕಾಡು

©KTBS NOT TO BE REPUBLISHED

ಬೀಟೆಮರ, ಗಂಧದ ಮರ, ಮತ್ತಿ, ನಂದಿ, ತೇಗ ಮುಂತಾದ ಬೆಲೆ ಬಾಳುವ ಮರಗಳು ಇಲ್ಲಿನ ಅರಣ್ಯಗಳಲ್ಲಿ ಬೆಳೆಯುತ್ತವೆ. ಕಿರು ಅರಣ್ಯ ಉತ್ಪನ್ನಗಳು ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ವರಮಾನದ ಮೂಲವಾಗಿವೆ.

### 1.4.4 ಕೃಷಿ, ಉದ್ದಿಮೆ

ಈ ವಿಭಾಗದಲ್ಲಿ ವ್ಯಾಪಕವಾಗಿ ಕಪ್ಪು ಮತ್ತು ಕೆಂಪು ಮಣ್ಣು ಇದೆ. ಭತ್ತ, ಹತ್ತಿ, ಮೆಕ್ಕೆಜೋಳ, ಬೇಳೆಕಾಳು, ಗೋಧಿ, ಶೇಂಗಾ, ಸಜ್ಜೆ, ಮೆಣಸಿನಕಾಯಿ ಮುಖ್ಯ ಬೆಳೆಗಳು. ಮಹಾಲಿಂಗಪುರದ ಬೆಲ್ಲ, ಬ್ಯಾಡಗಿಯ ಒಣ ಮೆಣಸಿನಕಾಯಿ, ಗೋಡಂಬಿ ಮುಂತಾದವು ಇಲ್ಲಿನ ಪ್ರಮುಖ ಉತ್ಪಾದನೆಗಳು. ಮಲಪ್ರಭಾ ನೀರಾವರಿ ಯೋಜನೆ (ನವಿಲತೀರ್ಥ) ಕೃಷ್ಣಾ ಮೇಲ್ದಂಡೆ ಯೋಜನೆ (ಆಲಮಟ್ಟಿ) ಮುಖ್ಯ ನೀರಾವರಿ ಯೋಜನೆಗಳಾಗಿವೆ. ಕಾಳಿ, ವರದಾ, ಶರಾವತಿ, ಡೋಣಿ, ಭೀಮಾ ಮುಂತಾದವು ಇಲ್ಲಿನ ಪ್ರಮುಖ ನದಿಗಳು.



ಆಲಮಟ್ಟಿ ಅಣೆಕಟ್ಟು

ಮೀನುಗಾರಿಕೆಯು ಉತ್ತರ ಕನ್ನಡ ಜಿಲ್ಲೆಯಲ್ಲಿನ ಮುಖ್ಯ ಉದ್ಯೋಗವಾಗಿದೆ. ಅಲ್ಲಿ ಅನೇಕ ಮೀನು ಸಂಸ್ಕರಣಾ ಘಟಕಗಳಿವೆ. ಗೋಡಂಬಿ ಮತ್ತೊಂದು ಕೃಷಿ ಉತ್ಪನ್ನವಾಗಿದೆ. ಗೋಡಂಬಿ ಸಂಸ್ಕರಣಾ ಘಟಕಗಳು ಇಲ್ಲಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕದ್ರಾ, ಸೂಪಾ, ಕೊಡಸಳ್ಳಿ, ನಾಗಝರಿ ಮತ್ತು ಕೈಗಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿವೆ. ಅಡಿಕೆ, ಕಬ್ಬು, ಹತ್ತಿ, ಸಾಂಬಾರು ಪದಾರ್ಥಗಳು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಗಳು. ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ತೋಟಗಾರಿಕೆ ಬೆಳೆಗಳಿಗೆ ಪ್ರಸಿದ್ಧವಾಗಿವೆ. ಅಲ್ಲಿನ ಹವಾಮಾನ ಮತ್ತು ಮಣ್ಣಿನ ಗುಣ, ಹಣ್ಣಿನ ಬೆಳೆಗಳಿಗೆ ಸೂಕ್ತವಾಗಿದೆ. ಈ ಜಿಲ್ಲೆಗಳಲ್ಲಿ ದ್ರಾಕ್ಷಿಯನ್ನು ಯಥೇಚ್ಛವಾಗಿ ಬೆಳೆಯಲಾಗುತ್ತದೆ. ದ್ರಾಕ್ಷಿ ಸಂಸ್ಕರಣಾ ಘಟಕಗಳು ಇಲ್ಲಿ ತಲೆಯೆತ್ತುತ್ತಿವೆ. ದಾಳಿಂಬೆ, ಲಿಂಬೆ, ಸಪೋಟ, ಮೂಸಂಬಿ ಮುಂತಾದ ಹಣ್ಣಿನ ಬೆಳೆಗಳನ್ನು ಬೆಳೆಯುತ್ತಾರೆ. ಹಾವೇರಿ ಜಿಲ್ಲೆಯು ಸುಧಾರಿತ ಬೀಜವನ್ನು ಉತ್ಪಾದಿಸುವ ಪ್ರಮುಖ ಕೇಂದ್ರವಾಗಿದೆ. ಇಲ್ಲಿ ಅನೇಕ ರಾಷ್ಟ್ರೀಯ ಬೀಜ ಉತ್ಪಾದನಾ ಕೇಂದ್ರಗಳಿವೆ. ಗುಳೇದಗುಡ್ಡವು ರವಿಕೆ ಖಣದ ಉತ್ಪಾದನೆಗೆ ಹೆಸರುವಾಸಿಯಾಗಿದೆ.

NOT TO BE REPUBLISHED

ಕೈಗಾರಿಕೆಯಲ್ಲಿ ಹುಬ್ಬಳ್ಳಿ, ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ ಪ್ರಮುಖ ಕೇಂದ್ರಗಳಾಗಿ ಬೆಳೆಯುತ್ತಿವೆ. ಇಳಕಲ್ಲಿನಲ್ಲಿ ಅನೇಕ ಗ್ರಾನೈಟ್ ಕಲ್ಲು ಸಂಸ್ಕರಣಾ ಘಟಕಗಳು ಕೆಲಸ ಮಾಡುತ್ತಿವೆ.

### 1.4.5 ಕಲೆ, ಸಾಹಿತ್ಯ, ಸಂಗೀತ, ಜಾನಪದ, ನಾಟಕ

ಈ ವಿಭಾಗದ ಜಿಲ್ಲೆಗಳು ವಿವಿಧ ಬಗೆಯ ಲಲಿತ ಕಲೆಗಳಿಗೆ ಪ್ರಸಿದ್ಧವಾಗಿವೆ. ಧಾರವಾಡವು ರಾಷ್ಟ್ರೀಯ – ಅಂತಾರಾಷ್ಟ್ರೀಯ ಹಿಂದೂಸ್ಥಾನಿ ಸಂಗೀತಗಾರರ ತವರೂರಾಗಿದೆ. ಭಾರತರತ್ನ ಪಂ. ಭೀಮಸೇನ್ ಜೋಶಿ, ಪಂ. ಮಲ್ಲಿಕಾರ್ಜುನ ಮನ್ಸೂರ್, ಬಾಲೇಖಾನ್ (ಸಿತಾರ್), ವಿದುಷಿ ಗಂಗೂಬಾಯಿ ಹಾನಗಲ್, ಪಂ. ವೆಂಕಟೇಶ್ ಕುಮಾರ್, ಪಂ. ಬಸವರಾಜ ರಾಜಗುರು ಮುಂತಾದ ಸಂಗೀತಗಾರರು ಧಾರವಾಡದವರು.


ಕುಮಾರವ್ಯಾಸ


ಕನಕದಾಸರು


ಶಿಶುನಾಳ ಶರೀಫ


ಫಾ. ಫರ್ಡಿನಾಂಡ್ ಕಿಟೆಲ್


ದ.ರಾ. ಬೇಂದ್ರೆ


ಡಿ.ಸಿ. ಪಾವಟೆ


ಮೊಹರೆ ಹಣಮಂತರಾವ್


ದಿನಕರ ದೇಸಾಯಿ

©KTBS NOT TO BE REPUBLISHED

ಮಧ್ಯಯುಗದಲ್ಲಿ ಅನೇಕ ಪ್ರಮುಖ ಕನ್ನಡ ಕಾವ್ಯಗಳನ್ನು ರಚಿಸಿದ ರನ್ನ, ನಾಗಚಂದ್ರ, ನಯಸೇನ, ಕುಮಾರವ್ಯಾಸ, ಚಾಮರಸ, ಬಸವಣ್ಣ, ಕನಕದಾಸ, ಶಿಶುನಾಳ ಶರೀಫ್ ಮುಂತಾದವರು ಬೆಳಗಾವಿ ವಿಭಾಗದ ವಿವಿಧ ಪ್ರದೇಶಕ್ಕೆ ಸೇರಿದವರು. ವಚನ ಪಿತಾಮಹ ಫ. ಗು. ಹಳಕಟ್ಟಿ, ರೆವರೆಂಡ್ ಕಿಟ್ಟೆಲ್, ಭೂಸನೂರಮಠ್, ದಿನಕರ ದೇಸಾಯಿ, ಬಸವರಾಜ ಕಟ್ಟೀಮನಿ, ಎಂ.ಎಂ. ಕಲಬುರ್ಗಿ, ಆದ್ಯರಂಗಾಚಾರ್ಯ (ಶ್ರೀರಂಗ), ಜ್ಞಾನಪೀಠ ಪ್ರಶಸ್ತಿಪುರಸ್ಕೃತರಾದ ದ. ರಾ. ಬೇಂದ್ರೆ, ವಿ.ಕೃ.ಗೋಕಾಕ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ – ಮುಂತಾದವರು ಈ ವಿಭಾಗದವರಾಗಿದ್ದು ಆಧುನಿಕ ಯುಗದಲ್ಲಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಜಾನಪದ ಗಾರುಡಿಗ ಹುಕ್ಕೇರಿ ಬಾಳಪ್ಪ, ನಾಡೋಜ

ಸುಕ್ರಿ ಬೊಮ್ಮಗೌಡ ಮುಂತಾದವರು ಜಾನಪದ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಶ್ರೀಕೃಷ್ಣ ಪಾರಿಜಾತ, ಬಡಗುತಿಟ್ಟು ಯಕ್ಷಗಾನ, ಸಣ್ಣಾಟ, ದೊಡ್ಡಾಟ ಮುಂತಾದ ನಾಟಕ ಪ್ರಕಾರಗಳು ಇಲ್ಲಿ ಬೆಳೆದವು. ಅಪ್ಪಾಲಾಲ ಜಮಖಂಡಿ, ಕೌಜಲಗಿ ನಿಂಗಮ್ಮ, ಲೋಕಾಪುರ ದೇಶಪಾಂಡೆ ಮುಂತಾದವರು ನಟನಾ ಕಲೆಯನ್ನು ಮೆರೆದವರು.


ಕರ್ನಾಟಕ ವಿಶ್ವವಿದ್ಯಾಲಯ


ಕರ್ನಾಟಕ ವಿದ್ಯಾವರ್ಧಕ ಸಂಘ

NOT TO BE REPUBLISHED ©KTBS

### 1.4.6 ಶಿಕ್ಷಣ, ಆರೋಗ್ಯ.

ಧಾರವಾಡ, ಬೆಳಗಾವಿ, ವಿಜಯಪುರ ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿವೆ. ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವಿದೆ, ಹುಬ್ಬಳ್ಳಿಯಲ್ಲಿ ಕರ್ನಾಟಕ ಕಾನೂನು ವಿಶ್ವವಿದ್ಯಾಲಯವಿದೆ. ಬೆಳಗಾವಿಯಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವಿದ್ದರೆ ವಿಜಯಪುರದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವಿದೆ. ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವಿದೆ.

ಈ ವಿಭಾಗದ ಜಿಲ್ಲೆಗಳು ಸಾಕ್ಷರತೆಯಲ್ಲಿ ಉತ್ತಮ ಸ್ಥಾನದಲ್ಲಿವೆ. ಬೆಳಗಾವಿ, ಹುಬ್ಬಳ್ಳಿ, ವಿಜಯಪುರ, ಬಾಗಲಕೋಟೆಗಳಲ್ಲಿ ವೈದ್ಯಕೀಯ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳಿವೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಡೆಪ್ಯುಟಿ ಚನ್ನಬಸಪ್ಪನವರ ನೇತೃತ್ವದಲ್ಲಿ ಕನ್ನಡ ಶಾಲೆಗಳು ಈ ಭಾಗದಲ್ಲಿ ಆರಂಭಗೊಂಡವು. ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿವೆ. ಕ್ರಿಶ್ಚಿಯನ್ ಸಂಸ್ಥೆಗಳು ಶಿಕ್ಷಣ ಪ್ರಸಾರದಲ್ಲಿ ಅಪಾರ ಕಾಣಿಕೆ ನೀಡಿವೆ.

ಆರೋಗ್ಯ ಕ್ಷೇತ್ರದಲ್ಲಿಯೂ ಬೆಳಗಾವಿ ವಿಭಾಗದ ಜಿಲ್ಲೆಗಳು ತೀವ್ರ ಪ್ರಗತಿ ಸಾಧಿಸಿವೆ. ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು ಕೆಳಮಟ್ಟದಲ್ಲಿದೆ. ಆದರೆ ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ ಅಧಿಕಮಟ್ಟದಲ್ಲಿದೆ. ಮಹಿಳೆಯರು ಮತ್ತು ಮಕ್ಕಳು ಅನೀಮಿಯ (ರಕ್ತಹೀನತೆ) ಎದುರಿಸುತ್ತಿದ್ದಾರೆ. ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ತೆರೆಯಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಹಳ್ಳಿಗಳಲ್ಲಿ ಆರೋಗ್ಯ ಉಪಕೇಂದ್ರಗಳಿವೆ. ವೈದ್ಯಕೀಯ ಕಾಲೇಜುಗಳು ತಮ್ಮದೇ ಆಸ್ಪತ್ರೆಗಳನ್ನು ನಡೆಸುತ್ತಿವೆ.

### 1.4.7 ಸಾಂಸ್ಕೃತಿಕ ಸಂಪತ್ತು

ಸಾಂಸ್ಕೃತಿಕ ಸಂಪತ್ತಿನಿಂದ ಸಮೃದ್ಧವಾದ ವಿಭಾಗ ಇದು. ಕಲೆ, ಸಂಗೀತ, ನಾಟಕ, ಸಾಹಿತ್ಯ ಈ ವಿಭಾಗದ ಜಿಲ್ಲೆಗಳ ಕೊಡುಗೆ ಅಪಾರ. ಇಲ್ಲಿನ ಸಂಗೀತಗಾರರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಸಿದ್ಧ ಪಡೆದಿದ್ದಾರೆ. ಗಾನಯೋಗಿ ಪಂಚಾಕ್ಷರಿ ಗವಾಯಿಯವರು ಅಂಧ ಮಕ್ಕಳಿಗೆ ಆಶ್ರಯನೀಡಿ ಸಂಗೀತ ಕಲಿಕೆಗೆ ಪ್ರೋತ್ಸಾಹ ನೀಡಿರುತ್ತಾರೆ. ಹುಬ್ಬಳ್ಳಿಯನ್ನು ಕರ್ನಾಟಕದ ವಾಣಿಜ್ಯ ಕೇಂದ್ರ ಎಂದು ಕರೆಯಲಾಗಿದೆ. ಬ್ಯಾಡಗಿ, ಮಹಾಲಿಂಗಪುರ, ವಿಜಯಪುರ ಕ್ರಮವಾಗಿ ಮೆಣಸಿನಕಾಯಿ, ಬೆಲ್ಲ ಮತ್ತು ದ್ರಾಕ್ಷಿ ವ್ಯಾಪಾರ ಕೇಂದ್ರಗಳಾಗಿವೆ. ಬೆಳಗಾವಿ ವಿಭಾಗವು ವೃತ್ತಿ ರಂಗಭೂಮಿಯ ಸಮೃದ್ಧ ಸ್ಥಾನವಾಗಿದೆ.


ಭಾರತರತ್ನ ಪಂ. ಭೀಮಸೇನ ಜೋಶಿ


ಮಲ್ಲಿಕಾರ್ಜುನ ಮನ್ಸೂರ್


ಗಂಗೂಬಾಯಿ ಹಾನಗಲ್


ಪಂಚಾಕ್ಷರಿ ಗವಾಯಿ

ಈ ವಿಭಾಗದ ಚಾರಿತ್ರಿಕ ಸ್ಮಾರಕಗಳು ವಿಶ್ವವಿಖ್ಯಾತವಾಗಿವೆ. ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಗಳಲ್ಲಿನ ಚಾರಿತ್ರಿಕ ಸ್ಮಾರಕಗಳು ಕರ್ನಾಟಕ ಸಂಸ್ಕೃತಿಯ ಸೂಚಿಗಳಾಗಿವೆ. ಪ್ರವಾಸೋದ್ಯಮವು ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರವು ರಕ್ಷಣಾ ಕ್ಷೇತ್ರದ ಪ್ರಮುಖ ನೌಕಾನೆಲೆಯಾಗಿ ಬೆಳೆಯುತ್ತಿದೆ. ಈ ಜಿಲ್ಲೆಯ ದಟ್ಟ ಅರಣ್ಯ ಪ್ರದೇಶವು ಅನೇಕ ವನ್ಯಮೃಗಗಳಿಗೆ ವಾಸಸ್ಥಾನವಾಗಿದೆ. ಇದು ಅನೇಕ ನದಿಗಳಿಗೆ ಉಗಮಸ್ಥಾನವಾಗಿದೆ. ಈ ವಿಭಾಗದಲ್ಲಿನ ಅನೇಕ ಜಲಪಾತಗಳು ಆಕರ್ಷಣೀಯವಾಗಿ ಪ್ರವಾಸಿಗರನ್ನು ಅಪಾರ ಸಂಖ್ಯೆಯಲ್ಲಿ ಸೆಳೆಯುತ್ತಿವೆ. ಸಮುದ್ರ ದಂಡೆಯಲ್ಲಿನ ಬೀಚುಗಳು ಮತ್ತೊಂದು ಪ್ರವಾಸಿ ತಾಣಗಳಾಗಿವೆ.

### 1.4.8 ಸ್ವಾತಂತ್ರ್ಯ ಹೋರಾಟಗಾರರು

ಬೆಳಗಾವಿ ವಿಭಾಗದ ಕಿತ್ತೂರಿನಲ್ಲಿ 19ನೆಯ ಶತಮಾನದಲ್ಲಿಯೇ ಬ್ರಿಟಿಷರ ವಿರುದ್ಧದ ಸಂಗ್ರಾಮ ಆರಂಭವಾಯಿತು. ಸ್ವಾತಂತ್ರ್ಯಕ್ಕಾಗಿ ಮೈಲಾರ ಮಹದೇವಪ್ಪ ತಮ್ಮ ಪ್ರಾಣವನ್ನು ಬಲಿ ನೀಡಿದರು. ನಮ್ಮ ರಾಜ್ಯದಲ್ಲಿ ಮೊಟ್ಟಮೊದಲು ಸ್ವಾತಂತ್ರ್ಯ ಹೋರಾಟ ಆರಂಭವಾದುದು ಬೆಳಗಾವಿ ವಿಭಾಗದ ಜಿಲ್ಲೆಗಳಲ್ಲಿ.


ಪಾಟೀಲ್ ಪುಟ್ಟಪ್ಪ


ಫ.ಗು. ಹಳಕಟ್ಟಿ

©KTBS NOT TO BE REPUBLISHED

ಈ ವಿಭಾಗದ ಸಾವಿರಾರು ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ಶಿಕ್ಷೆ ಅನುಭವಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರಲ್ಲಿ ಪ್ರಮುಖರು ಸಿದ್ದಪ್ಪ ಕಂಬಳಿ, ಆಲೂರು ವೆಂಕಟರಾವ್, ನಾ. ಸು. ಹರ್ಡಿಕರ್, ಹರ್ಡೇಕರ್ ಮಂಜಪ್ಪ, ಗಂಗಾಧರ ರಾವ್ ದೇಶಪಾಂಡೆ, ಆರ್. ಆರ್. ದಿವಾಕರ್, ನಾಡೋಜ ಪಾಟೀಲ್ ಪುಟ್ಟಪ್ಪ ಮುಂತಾದವರು. ಇವರೆಲ್ಲರೂ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಕರ್ನಾಟಕ ಏಕೀಕರಣಕ್ಕೂ ಹೋರಾಟ ನಡೆಸಿದರು. ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣದ ಜೊತೆಯಲ್ಲಿ ಅನೇಕರು ಸಮಾಜ ಸುಧಾರಣೆಯಲ್ಲಿ ತೊಡಗಿದ್ದರು. ರಾ.ಹ. ದೇಶಪಾಂಡೆಯವರು ಸಮಸ್ತ ಕನ್ನಡಿಗರ ಆತ್ಮಾಭಿಮಾನವನ್ನು ಬಡಿದೆಬ್ಬಿಸುವ ಸಪ್ತಾಕ್ಷರಿ ಮಂತ್ರವಾದ "ಸಿರಿಗನ್ನಡಂ ಗೆಲ್ಗೆ" ಯನ್ನು ಕೊಟ್ಟರು. ವಚನ ಪಿತಾಮಹ ಎಂಬ ಬಿರುದಿಗೆ ಪಾತ್ರರಾಗಿದ್ದ ಡಾ. ಫ. ಗು. ಹಳಕಟ್ಟಿ ಅವರು ಪತ್ರಿಕೋದ್ಯಮದಲ್ಲಿಯೂ ಕೆಲಸ ಮಾಡಿದರು. ಮೊಹರೆ ಹಣಮಂತರಾಯರು, ಪಾಟೀಲ್ ಪುಟ್ಟಪ್ಪ ಮುಂತಾದವರು ಸ್ವಾತಂತ್ರ್ಯ ಹೋರಾಟಕ್ಕೆ ಪತ್ರಿಕೆಗಳ ಮೂಲಕ ಜನರಿಗೆ ಪ್ರೇರಣೆ ನೀಡಿದರು.

## ಅಭ್ಯಾಸಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ರಾಣಿಯ ಹೆಸರೇನು?
2. ಹಾವೇರಿ, ಗದಗ ಮತ್ತು ಬಾಗಲಕೋಟೆ ಹೊಸ ಜಿಲ್ಲೆಗಳು ಯಾವ ವರ್ಷ ರಚನೆಗೊಂಡವು?
3. ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ಈ ವಿಭಾಗದ ಯಾವ ಜಿಲ್ಲೆಯಲ್ಲಿ ಯಾವ ವರ್ಷ ನಡೆಯಿತು?
4. ಬಾದಾಮಿಯು ಯಾವ ಅರಸು ಮನೆತನದ ರಾಜಧಾನಿಯಾಗಿತ್ತು?
5. ಬೆಳಗಾವಿ ವಿಭಾಗದ ಎರಡು ಪ್ರಮುಖ ನದಿಗಳ ಹೆಸರನ್ನು ಬರೆಯಿರಿ
6. ಈ ವಿಭಾಗದಲ್ಲಿರುವ ಪ್ರಮುಖ ವನ್ಯ ಮೃಗಧಾಮಗಳ ಹೆಸರನ್ನು ಬರೆಯಿರಿ
7. ಇಳಕಲ್ಲಿನಲ್ಲಿ ಯಾವ ಸಂಪನ್ಮೂಲ ದೊರೆಯುತ್ತದೆ?
8. ನಿತ್ಯಹರಿದ್ವರ್ಣ ಕಾಡುಗಳೆಂದರೆ ಯಾವುವು?
9. ಬೆಳಗಾವಿ ವಿಭಾಗದ ಪ್ರಮುಖ ಜಲಪಾತಗಳನ್ನು ಹೆಸರಿಸಿ
10. ಬೆಳಗಾವಿ ವಿಭಾಗದ ಯಾವ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ?
11. ಬೆಳಗಾವಿ ವಿಭಾಗದ ಜಿಲ್ಲೆಗಳಲ್ಲಿ ಬೆಳೆಯುವ ಪ್ರಮುಖ ಕೃಷಿ ಉತ್ಪನ್ನಗಳಾವುವು?

NOT TO BE REPUBLISHED @KTBS

12. ಬೆಳಗಾವಿ ವಿಭಾಗದ ಯಾವ ಜಿಲ್ಲೆಯಲ್ಲಿ ಮೀನುಗಾರಿಕೆಯು ಜನರ ಪ್ರಮುಖ ಉದ್ಯೋಗವಾಗಿದೆ?

13. ಬೆಳಗಾವಿ ವಿಭಾಗದ ಯಾವ ಜಿಲ್ಲೆಯಲ್ಲಿ ಬೀಜೋತ್ಪಾದನಾ ಕೇಂದ್ರಗಳಿವೆ?

14. ಬೆಳಗಾವಿ ವಿಭಾಗದ ಬ್ಯಾಡಗಿಯು ಯಾವ ಕೃಷಿ ಉತ್ಪನ್ನಕ್ಕೆ ಹೆಸರುವಾಸಿಯಾಗಿದೆ?

15. ಬೆಳಗಾವಿ ವಿಭಾಗದ ನಾಲ್ವರು ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಹೆಸರನ್ನು ಬರೆಯಿರಿ

16. ಬೆಳಗಾವಿ ವಿಭಾಗದ ಮೂವರು ಪ್ರಸಿದ್ಧ ಸಂಗೀತಗಾರರ ಹೆಸರನ್ನು ಬರೆಯಿರಿ.

17. ಬೆಳಗಾವಿ ಪ್ರದೇಶದ ಎರಡು ಪ್ರಸಿದ್ಧ ನಾಟಕ ಪ್ರಕಾರಗಳ ಹೆಸರನ್ನು ಬರೆಯಿರಿ.

18. ಬೆಳಗಾವಿ ವಿಭಾಗದ ಯಾವ ಜಿಲ್ಲೆಯಲ್ಲಿ ಕರ್ನಾಟಕ ಕಾನೂನು ವಿಶ್ವವಿದ್ಯಾಲಯವಿದೆ?

19. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಸ್ಥಾಪಿಸಿರುವ ಆರೋಗ್ಯ ಕೇಂದ್ರಗಳ ಹೆಸರೇನು?

20. ಈ ವಿಭಾಗದ ಯಾವ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯವಿದೆ?

21. ಕರ್ನಾಟಕ ರಾಜ್ಯದಲ್ಲಿ ಪ್ರಥಮ ಮಹಿಳಾ ವಿಶ್ವವಿದ್ಯಾಲಯ ಎಲ್ಲಿ ಆರಂಭಿಸಲಾಗಿದೆ?

22. ಬೆಳಗಾವಿ ವಿಭಾಗದ ಯಾವ ರಾಣಿಯು ಬ್ರಿಟಿಷರ ವಿರುದ್ಧ 1824ರಲ್ಲಿ ಹೋರಾಟ ನಡೆಸಿದ್ದಳು?

23. ಮೂವರು ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಬರೆಯಿರಿ.

24. ಬೆಳಗಾವಿ ವಿಭಾಗದಲ್ಲಿ ಪತ್ರಿಕೋದ್ಯಮದಲ್ಲಿ ಅಪಾರ ಕಾಣಿಕೆ ನೀಡಿದ ಇಬ್ಬರು ಪ್ರಮುಖರ ಹೆಸರನ್ನು ಬರೆಯಿರಿ.

@KTBS NOT TO BE REPUBLISHED

### ಖಾಲಿ ಜಾಗ ಭರ್ತಿ ಮಾಡಿ

ಬೆಳಗಾವಿ ವಿಭಾಗದ ಜಿಲ್ಲೆಗಳು ------ ವರ್ಷ ಕರ್ನಾಟಕದಲ್ಲಿ ವಿಲೀನಗೊಂಡವು.

### ಚಟುವಟಿಕೆಗಳು

- ಕರ್ನಾಟಕದ ಮೂವತ್ತೊಂದು ಜಿಲ್ಲೆಗಳನ್ನು ಪಟ್ಟಿ ಮಾಡಿ. ಜಿಲ್ಲಾವಾರು ಕರ್ನಾಟಕದ ಭೂಪಟವನ್ನು ಸಂಗ್ರಹಿಸಿ. ಪ್ರತಿ ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳ ಪಟ್ಟಿ ಮಾಡಿ. ಇವೆಲ್ಲವುಗಳನ್ನು ಒಳಗೊಂಡ ವರದಿ ಸಿದ್ಧಪಡಿಸಿ.
- ವಚನಕಾರರ ಪಟ್ಟಿಯನ್ನು ತಯಾರಿಸಿ, ಅವರಿಗೆ ಸಂಬಂಧಿಸಿದ ವಿವಿಧ ಜಿಲ್ಲೆಗಳಲ್ಲಿರುವ ಪ್ರದೇಶಗಳ ವಿವರಗಳನ್ನು ಸಿದ್ಧಪಡಿಸಿ.

| ಅಧ್ಯಾಯ 3 | ಮೌರ್ಯರು ಮತ್ತು ಕುಷಾಣರು |
|---|---|

P2S3T9

**ಪಾಠದ ಪರಿಚಯ**

ಮೌರ್ಯ ಸಾಮ್ರಾಜ್ಯವು ಭಾರತದ ಪ್ರಥಮ ಐತಿಹಾಸಿಕ ಸಾಮ್ರಾಜ್ಯ. ವಿವಿಧ ಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಅಪೂರ್ವವಾದುದು. ಚಂದ್ರಗುಪ್ತ ಮೌರ್ಯ ಮತ್ತು ಅಶೋಕ ಈ ವಂಶದ ಹೆಸರಾಂತ ಸಾಮ್ರಾಟರು. ಇವರ ಜೀವನ ಮತ್ತು ಸಾಧನೆಗಳನ್ನು ಈ ಪಾಠದಲ್ಲಿ ವಿವರಿಸಲಾಗಿದೆ. ಕುಷಾಣ ವಂಶದ ಪ್ರಸಿದ್ಧ ದೊರೆ ಕನಿಷ್ಕನ ಕೊಡುಗೆಗಳನ್ನೂ ಹೇಳಲಾಗಿದೆ.

**ಸಾಮರ್ಥ್ಯಗಳು**

1 ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯ ಹಾಗೂ ಮಾರ್ಗದರ್ಶಕ ಚಾಣಕ್ಯನ ಬಗ್ಗೆ ತಿಳಿಯುವುದು.

2 ಅಶೋಕನ ಜೀವನ ಮತ್ತು ಸಾಧನೆಗಳನ್ನು ಅರಿಯುವುದು.

3 ಮೌರ್ಯರ ಆಡಳಿತ ಪದ್ಧತಿಯನ್ನು ಅರ್ಥೈಸಿಕೊಳ್ಳುವುದು.

4 ಕುಷಾಣ ವಂಶದ ಪ್ರಸಿದ್ಧ ದೊರೆ ಕನಿಷ್ಕನ ಸಾಧನೆಗಳನ್ನು ಗುರುತಿಸುವುದು.

5 ಮೌರ್ಯರು ಹಾಗೂ ಕುಷಾಣರು ಕಲೆ, ಶಿಲ್ಪ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಗಳನ್ನು ತಿಳಿಯುವುದು.

© KTBS NOT TO BE REPUBLISHED

**ಪಾಠಪ್ರವೇಶ**



ಹೀನಾ ಕೌಸರ್ ಐದನೇ ತರಗತಿಯ ವಿದ್ಯಾರ್ಥಿನಿ. ನೋಟುಗಳ ಮೇಲೆ ಮುದ್ರಣವಾದ ಸಂಸತ್ ಭವನ ಮತ್ತು ಗಾಂಧೀಜಿಯ ಚಿತ್ರಗಳನ್ನು ಅವಳು ಈಗಾಗಲೇ ಗುರುತಿಸಿದ್ದಳು. ಆದರೆ ನಾಣ್ಯ ಮತ್ತು ನೋಟಿನ ಮೇಲೆ ಸಿಂಹಗಳ ಲಾಂಛನ ಏಕಿದೆಯೆಂದು ಅವಳಿಗೆ ತಿಳಿಯದು. ಶಿಕ್ಷಕರು ಅಶೋಕನ ಪಾಠವನ್ನು ಮಾಡಿ ಮುಗಿಸಿದಾಗ ಅವಳಿಗೆ ಉತ್ತರ ಸಿಕ್ಕಿತು.

"ಪ್ರಜೆಗಳೆಲ್ಲರು ತನ್ನ ಮಕ್ಕಳಿದ್ದಂತೆ" ಈ ಮಾತನ್ನು ನುಡಿದವನು ಯಾರು ಗೊತ್ತೆ? ಅವನೇ ಅಶೋಕ ಚಕ್ರವರ್ತಿ. ಇಂತಹ ಸಾಮ್ರಾಟನ ರಾಜವಂಶದ ಬಗ್ಗೆ ತಿಳಿಯೋಣ.

**ಚಂದ್ರಗುಪ್ತ ಮೌರ್ಯ:** ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಚಂದ್ರಗುಪ್ತನಿಗೆ ಸಲ್ಲುತ್ತದೆ. ತಂದೆಯನ್ನು ಕಳೆದುಕೊಂಡಿದ್ದ ಇವನನ್ನು ವಿಷ್ಣುಗುಪ್ತ (ಇವನಿಗೆ ಕೌಟಿಲ್ಯ ಮತ್ತು ಚಾಣಕ್ಯ) ಎಂಬ ಬ್ರಾಹ್ಮಣನು ತಕ್ಷಶಿಲಾ ನಗರಕ್ಕೆ ಕರೆದೊಯ್ದು, ಅಲ್ಲಿ ಯೋಗ್ಯ ಶಿಕ್ಷಣವನ್ನು ಕೊಡಿಸಿದನು. ಇದರ ಉದ್ದೇಶ ಚಂದ್ರಗುಪ್ತನ ಮೂಲಕ ಭಾರತದ ವಾಯವ್ಯ ಭೂಭಾಗವನ್ನು ಗ್ರೀಕರ ಆಳ್ವಿಕೆಯಿಂದ ಮುಕ್ತಗೊಳಿಸುವುದಾಗಿತ್ತು. ಇದೇ ವೇಳೆ ಮಗಧ ರಾಜನ ದುಷ್ಟ ಆಡಳಿತವನ್ನು ಕಿತ್ತೊಗೆಯುವುದು ಕೂಡ ಕೌಟಿಲ್ಯನ ಗುರಿಯಾಗಿತ್ತು.



© KTBS NOT TO BE REPUBLISHED

Sketch map not to scale

ಶಿಕ್ಷಣ ಮುಗಿಸಿದ ತರುವಾಯ ಚಂದ್ರಗುಪ್ತನು ಕೌಟಿಲ್ಯನ ಆದೇಶದಂತೆ ಸೈನ್ಯವೊಂದನ್ನು ಕಟ್ಟಿ, ಗ್ರೀಕರೊಡನೆ ಯುದ್ಧ ಹೂಡಿ ಅವರನ್ನು ಭಾರತದ ನೆಲದಿಂದ ಹೊರದಬ್ಬಿದನು. ಅನಂತರ ಮಗಧ ರಾಜನನ್ನು ಸಂಹರಿಸಿ, ಉತ್ತರ ಭಾರತದಲ್ಲಿ ಸಾಮ್ರಾಜ್ಯವೊಂದನ್ನು ಸ್ಥಾಪನೆ ಮಾಡಿದನು. ಪಾಟಲೀಪುತ್ರ (ಪಟ್ನಾ) ಸಾಮ್ರಾಜ್ಯದ ರಾಜಧಾನಿಯಾಯಿತು.

ಈ ಮಧ್ಯೆ ಸೆಲ್ಯೂಕಸ್ ಎಂಬ ಗ್ರೀಕ್ ಅಧಿಕಾರಿಯು, ಭಾರತದ ಮೇಲೆ ದಂಡೆತ್ತಿ ಬಂದನು. ಆದರೆ ಚಂದ್ರಗುಪ್ತನು ಅವನನ್ನು ಯುದ್ಧದಲ್ಲಿ ಹೀನಾಯವಾಗಿ ಸೋಲಿಸಿದನು. ಸೆಲ್ಯೂಕಸ್ ಶಾಂತಿ ಒಪ್ಪಂದವೊಂದನ್ನು ಮಾಡಿಕೊಂಡು ಅಫ್‌ಘಾನಿಸ್ತಾನ ಮತ್ತು ಬಲೂಚಿಸ್ತಾನದ ಭೂಭಾಗಗಳನ್ನು ಚಂದ್ರಗುಪ್ತನಿಗೆ ಬಿಟ್ಟುಕೊಟ್ಟನು. ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತನು ಯುದ್ಧ ತರಬೇತಿ ಪಡೆದ 500 ಆನೆಗಳನ್ನು ಉಡುಗೊರೆಯಾಗಿ ಆತನಿಗೆ ಕೊಟ್ಟನು. ಸೆಲ್ಯೂಕಸನು ತನ್ನ ರಾಯಭಾರಿಯಾಗಿ ಮೆಗಸ್ತನೀಸ್ ಎಂಬವನನ್ನು ಚಂದ್ರಗುಪ್ತನ ಆಸ್ಥಾನಕ್ಕೆ ಕಳುಹಿಸಿದನು. ಮೆಗಸ್ತನೀಸ್ ಆ ಕಾಲದ ಭಾರತದ ಸ್ಥಿತಿಗತಿಗಳ ಬಗ್ಗೆ ಬರೆದಿಟ್ಟ ಪುಸ್ತಕವೇ 'ಇಂಡಿಕಾ'.

**ಕೌಟಿಲ್ಯನ ಅರ್ಥಶಾಸ್ತ್ರ:** ಕೌಟಿಲ್ಯನು ಚಂದ್ರಗುಪ್ತಮೌರ್ಯನ ಮಂತ್ರಿಯಾಗಿದ್ದನು. ಈತನು ರಚಿಸಿದ ಕೃತಿ 'ಅರ್ಥಶಾಸ್ತ್ರ'. ಇದು ರಾಜ್ಯದ ಆಡಳಿತಗಾರರಿಗೆ ಮಾರ್ಗದರ್ಶನ ನೀಡುವ ಉತ್ತಮ ಕೃತಿ. ರಾಜನ ಗುಣ, ನಡತೆ ಮತ್ತು ಶಿಕ್ಷಣಕ್ಕೆ ವಿಶೇಷ ಒತ್ತುನೀಡಬೇಕೆಂಬುದು ಕೌಟಿಲ್ಯನ ಅಭಿಪ್ರಾಯವಾಗಿದೆ. ಏಕೆಂದರೆ ರಾಜನು ಹೇಗಿರುವನೋ ಹಾಗೆಯೇ ಪ್ರಜೆಗಳಿರುತ್ತಾರೆ. ಪ್ರಜೆಗಳ ಭದ್ರತೆ, ಸಮೃದ್ಧಿಗಳಿಗೆ ರಾಜನು ಕಾರಣನಾಗಿರುತ್ತಾನೆ.


**ಕೌಟಿಲ್ಯ**

"ರಾಜಕೀಯ ರಂಗದಲ್ಲಿ ಯಾರನ್ನೂ ನಂಬುವಂತಿಲ್ಲ. ಸರ್ಕಾರಿ ಇಲಾಖೆ ಹಾಗೂ ಜನತೆಯ ಮಧ್ಯೆ ಗೂಢಚಾರರನ್ನು ನೇಮಿಸತಕ್ಕದ್ದು. ಹಣಕಾಸಿನ ವಿಷಯದಲ್ಲಿ ರಾಜನು ವಿಶೇಷ ಕಾಳಜಿ ವಹಿಸಿ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ಪ್ರಜೆಗಳ ಹಿತವೇ ರಾಜನ ಹಿತ. ಪ್ರಜೆಗಳು ಸಂತೋಷದಲ್ಲಿದ್ದರೆ ಮಾತ್ರವೇ ರಾಜನು ಸಂತೋಷದಲ್ಲಿರಬಹುದು. ಕೌಟಿಲ್ಯನ ಇಂತಹ ಕೆಲವು ವಿಚಾರಗಳು ಇಂದಿಗೂ ಪ್ರಸ್ತುತ.

## ಅಶೋಕ ಚಕ್ರವರ್ತಿ

ಚಂದ್ರಗುಪ್ತನ ಅನಂತರ ಆತನ ಮಗನಾದ ಬಿಂದುಸಾರನು ಸಿಂಹಾಸನವನ್ನೇರಿದನು. ಬಿಂದುಸಾರನ ಅನಂತರ ಅಧಿಕಾರಕ್ಕೆ ಬಂದ ಅಶೋಕನು ತನ್ನ ಆದರ್ಶಗಳಿಂದ ಜಗತ್ತಿನ ಇತಿಹಾಸದಲ್ಲಿ ವಿಶಿಷ್ಟ ಸ್ಥಾನಪಡೆದ ಚಕ್ರವರ್ತಿಯಾಗಿದ್ದಾನೆ.

NOT TO BE REPUBLISHED ©KTBS

**ಅಶೋಕನ ಶಾಸನಗಳು:** ಅಶೋಕನ ಜೀವನ ಮತ್ತು ಸಾಧನೆಗಳ ಬಗ್ಗೆ ವಿವರಗಳನ್ನು ತಿಳಿಸುವ ಅವನ ಶಿಲಾಶಾಸನಗಳು ನಮ್ಮ ದೇಶದೆಲ್ಲೆಡೆ ದೊರಕಿವೆ. ಕರ್ನಾಟಕದಲ್ಲಿ ಅವನ ಹದಿನಾಲ್ಕು ಶಾಸನಗಳು ದೊರಕಿವೆ. ಕರ್ನಾಟಕದ ಕೆಲವು ಪ್ರದೇಶಗಳು ಅಶೋಕನ ಸಾಮ್ರಾಜ್ಯದಲ್ಲಿದ್ದವು.



*ಅಶೋಕನ ಶಿಲಾಶಾಸನ (ಬ್ರಾಹ್ಮಿಲಿಪಿ)*

**ಕಳಿಂಗ ಯುದ್ಧ:** ಅಶೋಕನ ಆಳ್ವಿಕೆಯ ಕಾಲದ ಮಹತ್ವದ ಘಟನೆಯೆಂದರೆ ಕಳಿಂಗ ಯುದ್ಧ. ಈ ಘೋರ ಯುದ್ಧದಲ್ಲಿ ಸುಮಾರು ಒಂದು ಲಕ್ಷ ಜನರು ಪ್ರಾಣ ತೆತ್ತರಲ್ಲದೆ, ಒಂದೂವರೆ ಲಕ್ಷ ಯೋಧರು ಯುದ್ಧಕೈದಿಗಳಾದರು.

ಯುದ್ಧದಲ್ಲಿ ಸ್ವತಃ ಭಾಗಿಯಾಗಿದ್ದ ಅಶೋಕನು ಯುದ್ಧದ ಭಯಾನಕ ಸಾವು ನೋವುಗಳಿಂದ ತತ್ತರಿಸಿ ಹೋದನು. ಪರಿಣಾಮವಾಗಿ ಅವನ ಮನಸ್ಸು ಪರಿವರ್ತನೆಗೊಂಡಿತು. ಆ ಕ್ಷಣದಿಂದಲೇ ಯುದ್ಧಮಾಡುವುದನ್ನು ತೊರೆಯಲು ದೃಢ ನಿರ್ಧಾರ ಮಾಡಿದನು. ಧರ್ಮದ ವಿಜಯವೇ ನಿಜವಾದ ವಿಜಯ ಎಂಬುದನ್ನು ಮನಗಂಡನು.

ಅಲ್ಪಕಾಲದಲ್ಲೇ ಅಶೋಕನು ಬುದ್ಧನ ಆದರ್ಶಗಳಿಂದ ಪ್ರಭಾವಿತಗೊಂಡು ಅವುಗಳನ್ನು ತನ್ನ ಪ್ರಜೆಗಳಿಗೆ ಬೋಧನೆ ಮಾಡಿದನು. ಮತೀಯ ಆಚರಣೆಗಿಂತ ಉತ್ತಮ ಗುಣ, ನಡತೆಗಳೇ ಹೆಚ್ಚು ಮುಖ್ಯವಾದದ್ದು. ಹಿರಿಯರು ಮತ್ತು ಗುರುಗಳನ್ನು ಗೌರವದಿಂದ ಕಾಣಬೇಕು. ಅಹಿಂಸೆಯೇ ಪರಮ ಧರ್ಮ. ಜೀವರಾಶಿಗಳಿಗೆ ಹಿಂಸೆ ಮಾಡಬಾರದು. ಈ ರೀತಿಯಾಗಿ ವಿಶ್ವಪ್ರೇಮವನ್ನು ಸಾರಿದ ಆದರ್ಶವಾದಿ ಸಾಮ್ರಾಟನು ಜಗತ್ತಿನ ಇತಿಹಾಸದಲ್ಲಿ ಪ್ರಾಯಶಃ ಬೇರೊಬ್ಬನಿಲ್ಲ.

**ಧರ್ಮ ಪ್ರಸಾರ:** ಅಶೋಕನು ಪಾಟಲೀಪುತ್ರದಲ್ಲಿ ಬೌದ್ಧ ಸಮ್ಮೇಳನವನ್ನು ನಡೆಸಿದನು. ಬೌದ್ಧ ನೀತಿಸೂತ್ರಗಳನ್ನು ಹರಡಲು ರಾಯಭಾರಿಗಳನ್ನು ದೇಶವಿದೇಶಗಳಿಗೆ ಕಳುಹಿಸಿದನು. ಅವುಗಳನ್ನು ಬಂಡೆಗಳು ಮತ್ತು ಶಿಲಾಸ್ತಂಭಗಳ ಮೇಲೆ ಕೆತ್ತಿಸಿದನು. ಅವನು ಪ್ರಚಾರ ಮಾಡಿದ ನೀತಿ ಸೂತ್ರಗಳು ಸಂಕುಚಿತ ಮತೀಯ ಸೂತ್ರಗಳಾಗಿರಲಿಲ್ಲ.



**ಸಾಂಚಿ ಸ್ತೂಪ, ಮಧ್ಯಪ್ರದೇಶ**

©KTBS NOT TO BE REPUBLISHED



ಅಶೋಕನ ಏಕಶಿಲಾಸ್ತಂಭ



ಸಿಂಹಬೋದಿಗೆ – ನಮ್ಮ ರಾಷ್ಟ್ರಲಾಂಛನ

**ಮೌರ್ಯರ ಆಡಳಿತ ಪದ್ಧತಿ:** ಕೇಂದ್ರ ಆಡಳಿತಕ್ಕೆ ರಾಜನೇ ಆಡಳಿತ ವ್ಯವಸ್ಥೆಯ ಮುಖ್ಯಸ್ಥನಾಗಿದ್ದನು. ಎಲ್ಲ ಅಧಿಕಾರಗಳು ಆತನ ಕೈಯಲ್ಲಿದ್ದವು. ರಾಜನಿಗೆ ಸಲಹೆ ನೀಡಲು ಮಂತ್ರಿ ಮಂಡಲವೊಂದಿತ್ತು. ಆಡಳಿತದ ವಿಭಾಗಗಳನ್ನು ನೋಡಿಕೊಳ್ಳಲು ಉನ್ನತ ಅಧಿಕಾರಿಗಳಿದ್ದರು. ಅವರಲ್ಲಿ 'ಧರ್ಮಮಹಾಮಾತ್ರರು' ಎಂಬ ವಿಶೇಷ ಅಧಿಕಾರಿಗಳು ಜನರಲ್ಲಿ ಉತ್ತಮ ನೀತಿ ನಡತೆಯನ್ನು ಪ್ರಚಾರ ಮಾಡುತ್ತಿದ್ದರು. ಅನಾಥರು, ವಿಧವೆಯರು ಮತ್ತು ವಯೋವೃದ್ಧರ ಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಕೂಡ ಅವರಿಗಿತ್ತು. ಆಡಳಿತದ ಅನುಕೂಲಕ್ಕಾಗಿ ವಿಶಾಲವಾದ ಸಾಮ್ರಾಜ್ಯವನ್ನು ಹಲವು ಪ್ರಾಂತಗಳಾಗಿ ವಿಂಗಡಿಸಲಾಗಿತ್ತು.

**ಗ್ರಾಮ ಆಡಳಿತ:** ಗ್ರಾಮಗಳಲ್ಲಿ 'ಗ್ರಾಮಿಕ'ನು ಅಲ್ಲಿಯ ಹಿರಿಯರ ನೆರವಿನಿಂದ ಆಡಳಿತ ಮಾಡುತ್ತಿದ್ದನು. ಗ್ರಾಮಗಳಿಗೆ ಸಾಕಷ್ಟು ಅಧಿಕಾರ ನೀಡಲಾಗಿತ್ತು. ಗ್ರಾಮದ ವಿವಾದಗಳನ್ನು ಗ್ರಾಮಸಭೆಯೇ ಬಗೆಹರಿಸುತ್ತಿತ್ತು.

**ವಾಸ್ತು ಮತ್ತು ಮೂರ್ತಿಶಿಲ್ಪ:** ಅಶೋಕನ ಕಾಲದ ಕೆಲವು ವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಇಂದಿಗೂ ಕಾಣಬಹುದಾಗಿದೆ. ಅವುಗಳೆಂದರೆ – ● ಸ್ತೂಪಗಳು ಮತ್ತು ವಿಹಾರಗಳು. ಅಶೋಕನ ಕಾಲದ ಸ್ತೂಪ ಮಧ್ಯಪ್ರದೇಶದ ಸಾಂಚಿ ಎಂಬಲ್ಲಿದೆ. ● ಶಿಲಾಗುಹೆಗಳು, ಏಕಶಿಲಾ ಸ್ತಂಭಗಳು ಮೂವತ್ತು ಅಡಿ ಎತ್ತರವಿದ್ದು ಅವುಗಳ ನುಣುಪು ಅದ್ಭುತವಾಗಿದೆ. ಸ್ತಂಭದ ಮೇಲುಭಾಗದಲ್ಲಿ (ಬೋದಿಗೆ) ಗೂಳಿ ಮತ್ತು ನಾಲ್ಕು ಸಿಂಹಗಳ ವಿಗ್ರಹವಿದೆ. ಸಾರನಾಥದ ವಸ್ತುಸಂಗ್ರಹಾಲಯದಲ್ಲಿ 'ಸಿಂಹಬೋದಿಗೆ'ಯ ಸ್ತಂಭವನ್ನು ಕಾಣಬಹುದು. ಈ ಸಿಂಹಬೋದಿಗೆಯು ನಮ್ಮ ರಾಷ್ಟ್ರಲಾಂಛನ.

**ಮೌರ್ಯ ಸಾಮ್ರಾಜ್ಯದ ಅವನತಿ:** ಮೌರ್ಯ ಸಾಮ್ರಾಜ್ಯವು ಅಶೋಕನ ಮರಣಾನಂತರದ ಐವತ್ತು ವರ್ಷಗಳಲ್ಲಿ ಪತನಗೊಂಡಿತು. ಇದಕ್ಕೆ ಕೆಲವು ಕಾರಣಗಳನ್ನು ನೀಡಲಾಗಿದೆ. ● ಸಾರಿಗೆ ಸಂಪರ್ಕಗಳ ಕೊರತೆಯಿದ್ದ ಅಂದಿನ ಕಾಲದಲ್ಲಿ ವಿಸ್ತಾರವಾದ ಸಾಮ್ರಾಜ್ಯವನ್ನು ಬಹುಕಾಲ ಆಳುವುದು ದುಸ್ತರವಾಗಿತ್ತು. ● ಅಶೋಕನ ಅನಂತರದ ರಾಜರುಗಳು ದುರ್ಬಲರಾಗಿದ್ದರು. ● ಸಾಮ್ರಾಜ್ಯದಲ್ಲಿ ಅಂತಃಕಲಹಗಳು ತಲೆದೋರಿ, ಸಾಮ್ರಾಜ್ಯವು ಒಡೆದು ಹೋಯಿತು. ● ಈ ನಡುವೆ ಭಾರತದ ವಾಯವ್ಯ ಭಾಗದಲ್ಲಿ ವಿದೇಶೀ ಆಕ್ರಮಣಗಳು ಕೂಡಾ ನಡೆದವು. ● ಮೌರ್ಯ ಸೇನಾನಿಯು ಮೌರ್ಯ ವಂಶದ ಕೊನೆಯ ಅರಸನನ್ನು ಕೊಂದು ತಾನೇ ಅಧಿಕಾರವಹಿಸಿಕೊಂಡನು.

## ಕುಷಾಣರು

**ಕನಿಷ್ಕ:** ಸುಮಾರು 2000 ವರ್ಷಗಳ ಹಿಂದೆ ಗಾಂಧಾರ (ಈಗಿನ ಅಫ್‌ಘಾನಿಸ್ತಾನ) ಎಂಬ ಪ್ರದೇಶದಲ್ಲಿ ಕುಷಾಣ ಎಂಬ ರಾಜವಂಶವು ಆಳ್ವಿಕೆ ನಡೆಸುತ್ತಿತ್ತು. ಕಾಲಕ್ರಮೇಣ ಭಾರತದ ಕೆಲವು ಭಾಗಗಳು ಕುಷಾಣರ ವಶವಾದುವು. ಕುಷಾಣ ವಂಶದ ಅರಸರಲ್ಲಿ ಕನಿಷ್ಕ ಪ್ರಸಿದ್ಧನಾಗಿದ್ದನು. ಅವನು ಸುದೀರ್ಘಕಾಲ ಯುದ್ಧಗಳನ್ನು ಹೂಡಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಉತ್ತರ ಭಾರತದಲ್ಲಿ ಅವನ ಸಾಮ್ರಾಜ್ಯವು ಬಿಹಾರದವರೆಗೂ ಚಾಚಿತ್ತು.


ಗಾಂಧಾರ ಶೈಲಿಯ ಬುದ್ಧನ ವಿಗ್ರಹ, ಪೇಷಾವರ

ಕನಿಷ್ಕನು ಬೌದ್ಧಮತ ಅನುಯಾಯಿಯಾಗಿದ್ದು, ಸ್ತೂಪಗಳನ್ನು ಕಟ್ಟಿಸಿದನು. ಬೌದ್ಧಮತ ಪ್ರಚಾರಕರನ್ನು ದೇಶವಿದೇಶಗಳಿಗೆ ಕಳುಹಿಸಿದನಲ್ಲದೆ ಕಾಶ್ಮೀರದಲ್ಲಿ ಬೌದ್ಧ ಮಹಾಸಭೆಯನ್ನು ನಡೆಸಿದನು.

@KTBS NOT TO BE REPUBLISHED




@KTBS NOT TO BE REPUBLISHED

**ಕಲೆ ಮತ್ತು ವಾಸ್ತುಶಿಲ್ಪ:** ಕನಿಷ್ಕನು ಅನೇಕ ಸ್ತೂಪಗಳನ್ನು ನಿರ್ಮಿಸಿದನು. ಪುರುಷಪುರದಲ್ಲಿ (ಇಂದಿನ ಪೇಶಾವರ್) ಅವನು ಕಟ್ಟಿಸಿದ ಸ್ತೂಪಕ್ಕೆ ಹದಿಮೂರು ಅಂತಸ್ತುಗಳ ಗೋಪುರವಿತ್ತು. ಗೋಪುರವು 400 ಅಡಿ ಎತ್ತರವಿದ್ದು ಆ ಕಾಲದ ಒಂದು ಕೌತುಕವೆನಿಸಿತ್ತು.

ಕನಿಷ್ಕನು ಕಲಾಪೋಷಕನಾಗಿದ್ದನು. ಅವನು ಬೇರೆ ಬೇರೆ ದೇಶಗಳ ಕಲಾಕಾರರನ್ನು ತನ್ನಲ್ಲಿಗೆ ಕರೆಸಿಕೊಂಡನು. ಇದರ ಪರಿಣಾಮವಾಗಿ ವಿವಿಧ ಕಲಾ ಶೈಲಿಗಳು (ವಿಶಿಷ್ಟ ವಿಧಾನಗಳು) ಬೆರೆತು ಗಾಂಧಾರ ಮತ್ತು ಮಥುರಾ ಎಂಬ ಹೊಸ ಶೈಲಿಗಳು ಹುಟ್ಟಿಕೊಂಡವು. ಮಥುರೆಯಲ್ಲಿ ಕನಿಷ್ಕನ ಕಲ್ಲಿನ ವಿಗ್ರಹ ದೊರಕಿದೆ. ಇದರ ತಲೆಭಾಗವು ನಾಶವಾಗಿದ್ದು, ಕೆಳಭಾಗದಲ್ಲಿ ಕನಿಷ್ಕನ ಹೆಸರನ್ನು ಕೆತ್ತಲಾಗಿದೆ. ಕುಷಾಣರ ಅನೇಕ ನಾಣ್ಯಗಳು ದೊರೆತಿವೆ.

**ಸಾಹಿತ್ಯ:** ಕನಿಷ್ಕನು ವಿದ್ವಾಂಸರು ಮತ್ತು ಸಾಹಿತಿಗಳಿಗೆ ಆಶ್ರಯ ನೀಡಿದ್ದನು. ಅವರಲ್ಲಿ 'ಸಾಹಿತ್ಯ ರತ್ನ' ಬಿರುದಾಂಕಿತನಾದ ಅಶ್ವಘೋಷ ಪ್ರಮುಖನು. ಇವನು 'ಬುದ್ಧಚರಿತ' ಎಂಬ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.



ಕನಿಷ್ಕನ ಕಲ್ಲಿನ ವಿಗ್ರಹ (ತಲೆಭಾಗ ನಾಶವಾಗಿದೆ)



ಕುಷಾಣರ ನಾಣ್ಯಗಳು

ನಾಗಾರ್ಜುನನು ಕನಿಷ್ಕನ ಆಸ್ಥಾನದಲ್ಲಿದ್ದ ಶ್ರೇಷ್ಠ ತತ್ವಜ್ಞಾನಿ ಹಾಗೂ ವಿಜ್ಞಾನಿ. ವಸುಮಿತ್ರ ಓರ್ವ ವಿದ್ವಾಂಸ ಹಾಗೂ ಬೌದ್ಧ ಮಹಾಸಭೆಯ ಅಧ್ಯಕ್ಷನಾಗಿದ್ದವನು. ಚರಕ ಎಂಬವನು ಕನಿಷ್ಕನ ವೈದ್ಯನಾಗಿದ್ದ. "ಚರಕ ಸಂಹಿತೆ" ಎಂಬ ಮಹತ್ವದ ಆಯುರ್ವೇದ ಗ್ರಂಥವನ್ನು ಇವನು ಬರೆದನು. ಆಯುರ್ವೇದವು ಪ್ರಾಚೀನ ಭಾರತೀಯ ವೈದ್ಯಕೀಯ ಪದ್ಧತಿಯಾಗಿದೆ.

## ಹೊಸ ಪದಗಳು

**ರಾಯಭಾರಿ–** ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕಳುಹಿಸಲ್ಪಡುವ ರಾಜದೂತ ಅಥವಾ ಪ್ರತಿನಿಧಿ. **ಸಾಮ್ರಾಜ್ಯ–** ಅತಿ ವಿಸ್ತಾರವಾದ ರಾಜ್ಯ. **ಗೂಢಚಾರ–** ಗುಟ್ಟಾಗಿ ಶೋಧನೆ ಮಾಡುವವನು. **ಭ್ರಷ್ಟಾಚಾರ–** ದುರಾಚಾರ, ಲಂಚ ಪಡೆಯುವುದು. **ಶಿಲಾಶಾಸನ–** ಬಂಡೆಗಳ ಮೇಲೆ ಕೊರೆದಿಟ್ಟ ಬರಹ. **ಸ್ತೂಪ–** ಬುದ್ಧನ ಶರೀರದ ಅವಶೇಷಗಳನ್ನು (ಹಲ್ಲು, ಎಲುಬು ಇತ್ಯಾದಿ) ಕಲಶದಲ್ಲಿ ಶೇಖರಿಸಿ, ಆ ಕಲಶದ ಸುತ್ತಲೂ ಕಟ್ಟಿದ ಅರ್ಧಗೋಲಾಕೃತಿಯ ರಚನೆ.

## ನಿಮಗೆ ತಿಳಿದಿರಲಿ

1 ಅಶೋಕನ ಶಾಸನಗಳು ಕರ್ನಾಟಕದಲ್ಲಿ ರಾಯಚೂರು, ಕೊಪ್ಪಳ, ಚಿತ್ರದುರ್ಗ, ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿವೆ. ಮಸ್ಕಿ (ರಾಯಚೂರು ಜಿಲ್ಲೆ) ಎಂಬಲ್ಲಿನ ಶಿಲಾಶಾಸನದಲ್ಲಿ ಅಶೋಕನನ್ನು 'ದೇವಾನಾಂಪ್ರಿಯ' ಮತ್ತು 'ಪ್ರಿಯದರ್ಶಿ' ಎಂದು ಕರೆಯಲಾಗಿದೆ.

2 ಅಶೋಕನು ಬೌದ್ಧ ರಾಯಭಾರಿಗಳನ್ನು ಭಾರತದ ಬೇರೆ ಬೇರೆ ರಾಜ್ಯಗಳಿಗೆ ಮಾತ್ರವಲ್ಲದೆ ಬರ್ಮಾ (ಮಯನ್ಮಾರ್) ಶ್ರೀಲಂಕಾ, ಈಜಿಪ್ಟ್, ಪಶ್ಚಿಮ ಏಷ್ಯ ಹಾಗೂ ಪೂರ್ವ ಯುರೋಪ್ ದೇಶಗಳಿಗೂ ಕಳುಹಿಸಿದನು. ಅಶೋಕನ ಹಿರಿಯ ಮಗ

NOT TO BE REPUBLISHED @KTBS

ಮಹೇಂದ್ರ ಮತ್ತು ಹಿರಿಯ ಪುತ್ರಿ ಸಂಘಮಿತ್ರಾ ಶ್ರೀಲಂಕೆಗೆ ತೆರಳಿದರು. ಕರ್ನಾಟಕದ ಮೈಸೂರಿಗೆ (ಆಗಿನ ಮಹಿಷಮಂಡಲ) ಮಹಾದೇವ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿಗೆ ರಕ್ಷಿತ ಎಂಬ ಧರ್ಮಪ್ರಚಾರಕರು ಬಂದಿದ್ದರು.

3 2300 ವರ್ಷಗಳಿಗೂ ಹಿಂದಿನ ಮೌರ್ಯರ ಆಡಳಿತ ಪದ್ಧತಿಯ ಮೂಲಸ್ವರೂಪವನ್ನು ಭಾರತದ ಈಗಿನ ಆಡಳಿತದಲ್ಲಿ ಕಾಣಬಹುದು. ಈಗಿನ ಆಡಳಿತ ಸ್ತರಗಳು ಹೀಗಿವೆ: ಕೇಂದ್ರ, ರಾಜ್ಯಗಳು, ವಿಭಾಗಗಳು, ಜಿಲ್ಲೆಗಳು, ತಾಲೂಕುಗಳು, ಹೋಬಳಿ ಮತ್ತು ಗ್ರಾಮಗಳು.

4 ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ: ವಾಸ್ತುಶಿಲ್ಪ ಎಂದರೆ ಕಟ್ಟಡ ನಿರ್ಮಾಣದ ಕಲೆ. ಮೂರ್ತಿಶಿಲ್ಪ ಎಂದರೆ ವಿಗ್ರಹಗಳನ್ನು ನಿರ್ಮಿಸುವ ಕಲೆ. ಅಶೋಕನ ಕಾಲದಲ್ಲಿ ವಾಸ್ತುಶಿಲ್ಪ ನಿರ್ಮಾಣಕ್ಕಾಗಿ ಕಟ್ಟಿಗೆ ಮತ್ತು ಇಟ್ಟಿಗೆಗಳ ಬದಲು ಕಲ್ಲುಗಳ ಬಳಕೆ ಆರಂಭವಾಯಿತು. ಇದರಿಂದಾಗಿಯೇ ಮೌರ್ಯರ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಇಂದಿಗೂ ಉಳಿದುಬಂದಿವೆ.

5 ಭಾರತದಲ್ಲಿ ಆಯುರ್ವೇದವು ಇಂದಿಗೂ ಅತ್ಯಂತ ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿದೆ. ವಿಶ್ವಸಂಸ್ಥೆ ಇದಕ್ಕೆ ಮಾನ್ಯತೆ ನೀಡಿದೆ. ಇತರ ದೇಶಗಳಲ್ಲಿಯೂ ಈ ಪದ್ಧತಿಯ ಬಳಕೆ ಹೆಚ್ಚುತ್ತಿದೆ.

NOT TO BE REPUBLISHED ©KTBS

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಮೌರ್ಯ ಸಾಮ್ರಾಜ್ಯದ ಸ್ಥಾಪಕನು ಯಾರು?
2 ಮೌರ್ಯರ ರಾಜಧಾನಿಯನ್ನು ಹೆಸರಿಸಿ.
3 ಕೌಟಿಲ್ಯ ಬರೆದ ಗ್ರಂಥ ಯಾವುದು?
4 ಮೆಗಸ್ತಾನೀಸ್ ಬರೆದ ಗ್ರಂಥದ ಹೆಸರೇನು?
5 "ಪ್ರಜೆಗಳೆಲ್ಲರು ತನ್ನ ಮಕ್ಕಳಿದ್ದಂತೆ." ಹೀಗೆಂದು ನುಡಿದ ಸಾಮ್ರಾಟನು ಯಾರು?
6 "ಧರ್ಮಮಹಾಮಾತ್ರರು" ಮಾಡುತ್ತಿದ್ದ ಕಾರ್ಯಗಳು ಯಾವುವು?
7 ಕನಿಷ್ಕನು ಬೌದ್ಧ ಮಹಾಸಭೆಯನ್ನು ಎಲ್ಲಿ ನಡೆಸಿದನು?
8 ಅಶ್ವಘೋಷನ ಕೃತಿ ಯಾವುದು?
9 ಭಾರತದ ಪ್ರಾಚೀನ ವೈದ್ಯಕೀಯ ಪದ್ಧತಿ ಯಾವುದು?

### ಚರ್ಚಿಸಿ

"ರಾಜನು ಹೇಗಿರುವನೋ ಹಾಗೆಯೇ ಪ್ರಜೆಗಳಿರುತ್ತಾರೆ". ಕೌಟಿಲ್ಯನ ಈ ಮಾತು ಎಷ್ಟರ ಮಟ್ಟಿಗೆ ಇಂದು ಪ್ರಸ್ತುತ?

### ಚಟುವಟಿಕೆ

ಮೌರ್ಯರ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ. ಒಂದು ಆಲ್ಬಂ ತಯಾರಿಸಿರಿ.

ಅಧ್ಯಾಯ 4

# ಗುಪ್ತರು ಮತ್ತು ವರ್ಧನರು

Y1T1M2

**ಪಾಠದ ಪರಿಚಯ**

ಭಾರತದ ಸುವರ್ಣಯುಗವೆಂದೇ ಕರೆಯಲಾಗುವ ಗುಪ್ತರ ಕಾಲದ ಶ್ರೇಷ್ಠ ಸಾಮ್ರಾಟರೆಂದರೆ, ದಕ್ಷಿಣೋತ್ತರ ಭಾರತದಲ್ಲಿ ದಿಗ್ವಿಜಯಗೈದ ಸಮುದ್ರಗುಪ್ತ ಮತ್ತು ದೇಶದ ಸರ್ವತೋಮುಖ ಉನ್ನತಿಗೆ ಅಪೂರ್ವ ಕೊಡುಗೆಯನ್ನಿತ್ತ ಎರಡನೇ ಚಂದ್ರಗುಪ್ತ ವಿಕ್ರಮಾದಿತ್ಯ. ಇವರ ಸಾಧನೆಯ ನಿರೂಪಣೆಯೊಂದಿಗೆ ಆ ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕಲೆ, ಆಯುರ್ವೇದ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಾದ ಅದ್ಭುತ ಮುನ್ನಡೆಯನ್ನು ಈ ಪಾಠದಲ್ಲಿ ವಿವರಿಸಲಾಗಿದೆ. ಇದರೊಂದಿಗೆ ಹರ್ಷವರ್ಧನ, ಬಾದಾಮಿಯ ಚಾಳುಕ್ಯರು ಹಾಗೂ ಕಾಂಚಿಯ ಪಲ್ಲವರ ಸಾಧನೆ, ಕೊಡುಗೆಗಳನ್ನು ಪ್ರಸ್ತುತಪಡಿಸಲಾಗಿದೆ.

**ಸಾಮರ್ಥ್ಯಗಳು**

1 ಗುಪ್ತ ವಂಶದ ಶ್ರೇಷ್ಠ ಸಾಮ್ರಾಟರಾದ ಸಮುದ್ರಗುಪ್ತ ಮತ್ತು ಎರಡನೇ ಚಂದ್ರಗುಪ್ತರ ಬಗ್ಗೆ ತಿಳಿದು ಕೊಳ್ಳುವುದು.

2 ಗುಪ್ತರ ಕಾಲವನ್ನು ಸುವರ್ಣಯುಗ ಎಂದು ಕರೆಯಲು ಕಾರಣವಾದ ಅಂಶಗಳನ್ನು ಅರಿಯುವುದು.

3 ಸಾಹಿತ್ಯ, ಕಲೆ, ಗಣಿತ, ವಿಜ್ಞಾನ, ಲೋಹ ವಿಜ್ಞಾನ ಮತ್ತು ಆಯುರ್ವೇದಕ್ಕೆ ಗುಪ್ತರು ನೀಡಿದ ವಿಶಿಷ್ಟ ಕೊಡುಗೆಗಳನ್ನು ಮೆಚ್ಚಿಕೊಳ್ಳುವುದು.

4 ಫಾಹಿಯಾನ್ ಮತ್ತು ಹ್ಯುಯೆನ್‌ತ್ಸಾಂಗ್ ಕಂಡ ಭಾರತದ ಚಿತ್ರಣವನ್ನು ತಿಳಿದುಕೊಳ್ಳುವುದು.

5 ಬಾದಾಮಿಯ ಚಾಳುಕ್ಯರು ಮತ್ತು ಕಾಂಚಿಯ ಪಲ್ಲವರ ಮುಖ್ಯ ಕೊಡುಗೆಗಳನ್ನು ಅರಿತುಕೊಳ್ಳುವುದು.

@KTBS NOT TO BE REPUBLISHED

**ಪಾಠಪ್ರವೇಶ**



ಉತ್ಸಾಹಿ ವಿದ್ಯಾರ್ಥಿ ಶಿವಮೂರ್ತಿ ಕೇಳಿದ ಪ್ರಶ್ನೆಯಿದು: "ಮೇಡಂ, ನಮ್ಮ ಕುಟುಂಬದ ಸದಸ್ಯರು ಪ್ರಯಾಗಕ್ಕೆ ತೀರ್ಥಯಾತ್ರೆಗಾಗಿ ಹೋಗುವವರಿದ್ದೇವೆ. ಪ್ರಯಾಗದ ಮಹತ್ವವೇನು?" ಶಿಕ್ಷಕರು: ಉತ್ತರ ಪ್ರದೇಶದಲ್ಲಿರುವ ಪ್ರಯಾಗವು ಗಂಗಾ, ಯಮುನಾ, ಸರಸ್ವತಿ ನದಿಗಳು ಸಂಗಮಗೊಳ್ಳುವಲ್ಲಿದೆ. ಅದನ್ನು 'ತೀರ್ಥರಾಜ' ಎನ್ನುವರು. ಅಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಕುಂಭಮೇಳ ನಡೆಯುತ್ತದೆ. ಅಲ್ಲೊಂದು ಪ್ರಸಿದ್ಧ ಶಾಸನವಿದೆ.

ಪ್ರಯಾಗದಲ್ಲಿ ಪ್ರಾಚೀನ ಏಕಶಿಲಾ ಸ್ತಂಭವೊಂದಿದೆ. ಅದು ಅಶೋಕನ ಕಾಲದ್ದು.

ಅದರ ಮೇಲೆ ಪ್ರಸಿದ್ಧ ಶಾಸನವೊಂದಿದೆ. ಅದನ್ನು ರಚನೆ ಮಾಡಿದವನು ಹರಿಷೇಣ ಸಮುದ್ರಗುಪ್ತನ ಸೇನಾನಿ. ಶಾಸನದಲ್ಲಿ ಸಮುದ್ರಗುಪ್ತನ ಸಾಧನೆಗಳನ್ನು ನಿರೂಪಿಸಲಾಗಿದೆ.

ಗುಪ್ತ ವಂಶದಲ್ಲಿ ಅನೇಕ ಸಮರ್ಥ ಸಾಮ್ರಾಟರಿದ್ದರು. ಅವರು ಕಲಾಪೋಷಕರು ಆಗಿದ್ದರು. ಅವರಲ್ಲಿ ಪ್ರಸಿದ್ಧರೆಂದರೆ ಸಮುದ್ರಗುಪ್ತ ಮತ್ತು ಎರಡನೆಯ ಚಂದ್ರಗುಪ್ತ.



Sketch map not to scale

## ಸಮುದ್ರಗುಪ್ತ



ಸಮುದ್ರಗುಪ್ತನ ಚಿನ್ನದ ನಾಣ್ಯಗಳು

**ದಿಗ್ವಿಜಯಗಳು:** ಮಹಾಪರಾಕ್ರಮಿಯಾಗಿದ್ದ ಸಮುದ್ರಗುಪ್ತನು ಪ್ರಾರಂಭದಲ್ಲಿ ಉತ್ತರ ಭಾರತದ ಅನೇಕ ರಾಜರನ್ನು ಸೋಲಿಸಿದನು. ಅವನ ಪ್ರಚಂಡ ಸೈನ್ಯ ಶಕ್ತಿಯನ್ನು ಅರಿತೇ ಅಲ್ಲಿಯ ಇನ್ನಿತರ ರಾಜರು ತಾವಾಗಿ ಶರಣಾದರು. ದೂರದ ಅಫ್‌ಘಾನಿಸ್ತಾನದ ಕುಷಾಣ ದೊರೆಗಳೂ ಗುಜರಾತಿನ ಸತ್ರಪರೂ (ಶಕರು) ಸಮುದ್ರಗುಪ್ತನ ಪರಮಾಧಿಕಾರವನ್ನು ಒಪ್ಪಿಕೊಂಡರು.

ಸಮುದ್ರಗುಪ್ತನ ಗಣನೀಯ ಸೈನಿಕ ಸಾಧನೆಯೆಂದರೆ ಆತನ ದಕ್ಷಿಣ ಭಾರತದ ದಂಡಯಾತ್ರೆ. ಈ ದಂಡಯಾತ್ರೆಯಲ್ಲಿ ಅವನು ಅನೇಕ ರಾಜರನ್ನು ಸೋಲಿಸಿದನಲ್ಲದೆ, ಕಾಂಚಿಯ ರಾಜನನ್ನು ಸದೆಬಡಿದನು. ದಂಡಯಾತ್ರೆಯ ನೆನಪಿಗಾಗಿ ರಾಜಧಾನಿಯಾದ ಪಾಟಲೀಪುತ್ರದಲ್ಲಿ ಅತ್ಯಂತ ವಿಜೃಂಭಣೆಯಿಂದ ಅಶ್ವಮೇಧಯಾಗವನ್ನು ಮಾಡಿದನು.

© KTBS NOT TO BE REPUBLISHED

ಸಮುದ್ರಗುಪ್ತನು ವಿದ್ಯಾಪೋಷಕನಾಗಿದ್ದನು. ಸ್ವತಃ ಮಹಾಕವಿ ಹಾಗೂ ಸಂಗೀತಗಾರನಾಗಿದ್ದ ಈತನು 'ಕವಿರಾಜ' ಎಂಬ ಬಿರುದನ್ನು ಧರಿಸಿದ್ದನು. ಅವನು ವೀಣೆ ನುಡಿಸುವ ಚಿತ್ರವಿರುವ ನಾಣ್ಯಗಳಿವೆ. ವಸುಬಂಧು ಎಂಬ ಹಿರಿಯ ಬೌದ್ಧ ವಿದ್ವಾಂಸ ಅವನ ಮಂತ್ರಿಯಾಗಿದ್ದನು. ಸಮುದ್ರಗುಪ್ತನ ಚಿನ್ನದ ನಾಣ್ಯಗಳು ಗುಪ್ತ ಸಾಮ್ರಾಜ್ಯದ ಶಕ್ತಿ, ಸಂಪತ್ತು ಹಾಗೂ ವೈಭವವನ್ನು ಪ್ರತಿಬಿಂಬಿಸುತ್ತವೆ.

## ಎರಡನೆಯ ಚಂದ್ರಗುಪ್ತ



ಎರಡನೇ ಚಂದ್ರಗುಪ್ತನ ಚಿನ್ನದ ನಾಣ್ಯಗಳು

ಸಮುದ್ರಗುಪ್ತನ ಪುತ್ರ ಹಾಗೂ ಉತ್ತರಾಧಿಕಾರಿಯಾದ ಎರಡನೆಯ ಚಂದ್ರಗುಪ್ತನು ಯುದ್ಧ ಕಲೆಯಲ್ಲಿ ನಿಪುಣನಾಗಿದ್ದನು. ಗುಜರಾತಿನಲ್ಲಿ ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲ

ಆಳ್ವಿಕೆ ನಡೆಸುತ್ತಿದ್ದ ಸತ್ರಪರನ್ನು ಚಂದ್ರಗುಪ್ತನು ಸೋಲಿಸಿದನು. ಇದರಿಂದಾಗಿ ಗುಜರಾತಿನಲ್ಲಿ ಪರಕೀಯರ ಆಳ್ವಿಕೆ ಅಂತ್ಯಗೊಂಡಿತು. ಇದು ಅವನ ಮುಖ್ಯ ಸೈನಿಕ ಸಾಧನೆಯಾಗಿತ್ತು. ಆತನಿಗೆ ಶಕಾರಿ ಮತ್ತು ವಿಕ್ರಮಾದಿತ್ಯ ಎಂಬ ಬಿರುದುಗಳಿದ್ದವು. ಚಂದ್ರಗುಪ್ತನು ಹೊಸ ಬಗೆಯ ಚಿನ್ನದ ನಾಣ್ಯಗಳನ್ನು ಹೊರಡಿಸಿದನು. ಆತನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸನೂ ಸೇರಿದಂತೆ ಒಂಬತ್ತು ಮಂದಿ ಪ್ರಖ್ಯಾತ ವಿದ್ವಾಂಸರಿದ್ದರು.

ಗುಪ್ತರ ಆಳ್ವಿಕೆಯ ಕಾಲದಲ್ಲಿ ಜನರು ಸುಖಶಾಂತಿಯಿಂದ ಜೀವನ ನಡೆಸಿದರು. ಸಾಮ್ರಾಜ್ಯವು ಆರ್ಥಿಕ ಕ್ಷೇತ್ರದಲ್ಲಿ ಭಾರಿ ಅಭಿವೃದ್ಧಿ ಸಾಧಿಸಿತು. ಸಾಹಿತ್ಯ, ಮೂರ್ತಿಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ, ವಿಜ್ಞಾನ ಹಾಗೂ ಗಣಿತ ಕ್ಷೇತ್ರಗಳಲ್ಲಿ ಹಿಂದೆಂದೂ ಕಾಣದ ಸಾಧನೆಗಳಾದವು. ಆದುದರಿಂದ ಇತಿಹಾಸಕಾರರು ಗುಪ್ತರ ಯುಗವನ್ನು 'ಸುವರ್ಣಯುಗ'ವೆಂದು ಕರೆದಿದ್ದಾರೆ.

**ಫಾಹಿಯಾನ್:** ಫಾಹಿಯಾನ್ ಚೀನಾ ದೇಶದ ಬೌದ್ಧ ಭಿಕ್ಷು. ಬೌದ್ಧಮತದ ತವರನ್ನು ನೋಡಬೇಕೆಂದು ಅವನು ಆತುರಪಡುತ್ತಿದ್ದನು. ಅವನು ಇನ್ನಿತರ ಬೌದ್ಧ ಭಿಕ್ಷುಗಳ ಜೊತೆಯಲ್ಲಿ ಕಾಲ್ನಡಿಗೆಯಲ್ಲೇ ಸಂಚಾರ ಮಾಡಿ ಪ್ರಯಾಸಪಟ್ಟು ಭಾರತವನ್ನು ತಲಪಿದನು. ಅದು ಎರಡನೇ ಚಂದ್ರಗುಪ್ತನ ಆಳ್ವಿಕೆ ಕಾಲವಾಗಿತ್ತು.

ಫಾಹಿಯಾನ್ ಗುಪ್ತರ ಸಾಮ್ರಾಜ್ಯದಲ್ಲಿ ಶಾಂತಿ, ಸಮೃದ್ಧಿ ನೆಲೆಸಿತ್ತು ಎಂಬುದಾಗಿ ಬರೆದಿಟ್ಟಿದ್ದಾನೆ. ಅಪರಾಧಗಳು ಅಪರೂಪವಾಗಿದ್ದವು. ಆಡಳಿತ ಜನಪರವಾಗಿತ್ತು. ದೇಶ ಸಂಚಾರ ಸುಗಮವಾಗಿತ್ತು ಎಂಬುದಾಗಿ ಅವನು ಹೇಳಿರುತ್ತಾನೆ.

ಫಾಹಿಯಾನ್ ಭಾರತದಲ್ಲಿ ಅನೇಕ ವರ್ಷ ಪ್ರವಾಸ ಮಾಡಿ ಬೌದ್ಧ ಕ್ಷೇತ್ರಗಳನ್ನು ಸಂದರ್ಶಿಸಿ, ಧರ್ಮಗ್ರಂಥ, ವಿಗ್ರಹ ಮತ್ತು ಸ್ಮಾರಕ ವಸ್ತುಗಳನ್ನು ಸಂಗ್ರಹಿಸಿ ತಾಯ್ನಾಡಿಗೆ ತೆರಳಿದನು. ಇಲ್ಲಿಂದ ಒಯ್ದ ಧರ್ಮಗ್ರಂಥಗಳನ್ನು ಚೀನಿ ಭಾಷೆಗೆ ಅನುವಾದ ಮಾಡಿದನು. ಭಾರತದಲ್ಲಿಯೇ ಮರುಜನ್ಮ ಪಡೆಯಬೇಕೆಂಬುದು ಅವನ ಹೆಬ್ಬಯಕೆಯಾಗಿತ್ತು.

## ಗುಪ್ತ ಯುಗದ ಸಾಧನೆಗಳು

**ಸಂಸ್ಕೃತ ಸಾಹಿತ್ಯ:** ಗುಪ್ತರ ಕಾಲದಲ್ಲಿ ಸಂಸ್ಕೃತವು ಪ್ರಧಾನ ಭಾಷೆಯಾಗಿತ್ತಲ್ಲದೆ ರಾಜ್ಯಭಾಷೆ ಕೂಡ ಆಗಿತ್ತು. ರಾಜಾಶ್ರಯ ಪಡೆದು ಸಂಸ್ಕೃತ ಸಾಹಿತ್ಯವು ವಿಶೇಷವಾಗಿ ಅರಳಿತು. ಕಾಳಿದಾಸನು ಗುಪ್ತಕಾಲದ ಮಹಾಕವಿ. ಈತನು ಜಗತ್ತಿನ ಶ್ರೇಷ್ಠ ನಾಟಕಕಾರರಲ್ಲಿ ಓರ್ವನೂ ಹೌದು. ಚಂದ್ರಗುಪ್ತ ವಿಕ್ರಮಾದಿತ್ಯನ ಆಸ್ಥಾನವನ್ನು ಅಲಂಕರಿಸಿದ್ದ ಒಂಬತ್ತು ಜನ ಶ್ರೇಷ್ಠ 'ನವರತ್ನ'ರಲ್ಲಿ ಈತನು ಒಬ್ಬನಾಗಿದ್ದನು. ಕಾಳಿದಾಸನು ನಾಲ್ಕು ಕಾವ್ಯಗಳು ಮತ್ತು ಮೂರು ನಾಟಕಗಳನ್ನು ರಚಿಸಿದನು. 'ಅಭಿಜ್ಞಾನ ಶಾಕುಂತಲಾ' ಆತನ ಶ್ರೇಷ್ಠ ನಾಟಕ. ಭಾರತೀಯ

©KTBS NOT TO BE REPUBLISHED

ಸಾಹಿತ್ಯದಲ್ಲಿ ಕಾಳಿದಾಸನ ಕೃತಿಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಅವನನ್ನು 'ಕವಿಕುಲ ಗುರು' ಎಂಬುದಾಗಿ ಪ್ರಶಂಸೆ ಮಾಡಲಾಗಿದೆ.

ಶೂದ್ರಕ ('ಮೃಚ್ಛಕಟಿಕ' ಇವನ ಕೃತಿ) ಮತ್ತು ವಿಶಾಖದತ್ತ ('ಮುದ್ರಾರಾಕ್ಷಸ') ಆ ಕಾಲದ ಇತರ ನಾಟಕಕಾರರು. ವಿಷ್ಣುಶರ್ಮನ 'ಪಂಚತಂತ್ರ' ಎಂಬ ಕಥಾಸಂಗ್ರಹವು ಇದೇ ಕಾಲಕ್ಕೆ ಸೇರಿದ್ದು. ಪಂಚತಂತ್ರವು ಭಾರತೀಯರು ಕಥಾಕ್ಷೇತ್ರಕ್ಕೆ ನೀಡಿದ ಒಂದು ಅಮೋಘ ಕೊಡುಗೆಯಾಗಿದೆ. ಅಮರಸಿಂಹನ 'ಅಮರಕೋಶ' ಎಂಬ ಶಬ್ದಕೋಶವು ಒಂದು ಅಪರೂಪದ ಕೃತಿ. ಅದು ಇಂದೂ ಬಳಕೆಯಲ್ಲಿದೆ.

**ದೇವಾಲಯ ವಾಸ್ತುಶಿಲ್ಪ:** ವಾಸ್ತುಶಿಲ್ಪ ನಿರ್ಮಾಣದ ಇತಿಹಾಸದಲ್ಲಿ ಗುಪ್ತರ ಕಾಲವನ್ನು ಸುವರ್ಣಯುಗವೆನ್ನಬಹುದು. ನಮ್ಮ ದೇಶದಲ್ಲಿ ದೇವಾಲಯ ನಿರ್ಮಾಣ ವಾಸ್ತು ಆರಂಭಗೊಂಡದ್ದು ಗುಪ್ತರ ಕಾಲದಲ್ಲಿ. ಮಧ್ಯಪ್ರದೇಶದ ಸಾಂಚಿಯ ದೇವಾಲಯವು ಭಾರತದಲ್ಲೇ ಅತಿ ಪ್ರಾಚೀನವಾದದು.

©KTBS NOT TO BE REPUBLISHED



*ಪ್ರಾರಂಭದ ಹಿಂದೂ ದೇವಾಲಯ, ಸಾಂಚಿ – ಗುಪ್ತರ ಕಾಲ*

ಗುಪ್ತರ ಶ್ರೇಷ್ಠ ದೇವಾಲಯಗಳು ಮಧ್ಯಪ್ರದೇಶದ ಭಿತರ್‌ಗಾಂವ್ ಮತ್ತು ದೇವಗಢದಲ್ಲಿವೆ. ದೇವಗಢದ ದಶಾವತಾರ ದೇವಾಲಯದಲ್ಲಿರುವ ವಿಷ್ಣುವಿನ ಮೂರ್ತಿಶಿಲ್ಪ ಸುಂದರವಾಗಿದೆ.



*ದಶಾವತಾರ ದೇವಾಲಯದ ವಿಷ್ಣು (ದೇವಗಢ, ಮಧ್ಯಪ್ರದೇಶ)*

**ಸ್ತೂಪ ಮತ್ತು ಚೈತ್ಯಾಲಯ:** ವಾರಾಣಸಿಯ ಸಮೀಪದ ಸಾರನಾಥ ಎಂಬಲ್ಲಿ ಇರುವ 128 ಅಡಿ ಎತ್ತರದ ಧಮೇಖ್ ಸ್ತೂಪವು ಗುಪ್ತರ ಕಾಲದ ಅನುಪಮ ನಿರ್ಮಾಣವಾಗಿದೆ.

NOT TO BE REPUBLISHED @KTBS



**ಧಮೇಖ್ ಸ್ತೂಪ, ಸಾರನಾಥ**

**ಚಿತ್ರಕಲೆ:** ಗುಪ್ತರ ಕಾಲದಲ್ಲಿ ಬಂಡೆಯನ್ನು ಕೊರೆದು ಮಾಡಿದ ಬೌದ್ಧ ವಿಹಾರ ಮತ್ತು ಗುಹಾಲಯಗಳು ಅಜಂತಾ ಮತ್ತು ಎಲ್ಲೋರಾ ಎಂಬಲ್ಲಿವೆ.



*ಅಜಂತಾ ಗುಹಾಲಯ, ಮಹಾರಾಷ್ಟ್ರ*

ಅಜಂತಾದ ಗುಹಾಲಯಗಳಲ್ಲಿ ಗೋಡೆ ಮತ್ತು ಛಾವಣಿಗಳ ಮೇಲಿನ ಭಿತ್ತಿಚಿತ್ರಗಳು ಜಗದ್ವಿಖ್ಯಾತವಾಗಿವೆ. ಭಿತ್ತಿಚಿತ್ರಗಳಲ್ಲಿ ಜನಜೀವನದ ವಿವಿಧ ಮುಖಗಳು, ಬುದ್ಧನ ಜೀವನ ಕಥನ ಮತ್ತು ಜಾತಕ ಕಥೆಗಳು ಮೂಡಿಬಂದಿವೆ.




*ಅಜಂತಾ ಭಿತ್ತಿಚಿತ್ರಗಳು*

© KTBS NOT TO BE REPUBLISHED

**ವಿಜ್ಞಾನ ಗಣಿತ, ಖಗೋಳಶಾಸ್ತ್ರ:** ಗುಪ್ತರ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಅಪಾರ ಪ್ರಗತಿ ಸಾಧಿಸಿತು. ಪಾಟಲೀಪುತ್ರದ ಆರ್ಯಭಟನು ಗುಪ್ತ ಯುಗದ ಮಹಾನ್ ಗಣಿತಶಾಸ್ತ್ರಜ್ಞ, ಈತನ ಗ್ರಂಥ 'ಆರ್ಯಭಟೀಯ'. ಆರ್ಯಭಟನು ಗ್ರಹಣಗಳ ಕಾರಣವನ್ನು ಕಂಡುಹಿಡಿದನಲ್ಲದೆ ಬೀಜಗಣಿತ ಮತ್ತು ತ್ರಿಕೋನಮಿತಿಗೆ ಮಹತ್ತರವಾದ ಕೊಡುಗೆ ನೀಡಿದನು. ಅವನು ಇಷ್ಟೊಂದು ಸಾಧನೆ ಮಾಡಿದ್ದು ಕೇವಲ ಇಪ್ಪತ್ತಮೂರು ವರ್ಷದವನಾಗಿದ್ದಾಗಲೇ. ಬ್ರಹ್ಮಗುಪ್ತ ಆ ಕಾಲದ ಇನ್ನೊಬ್ಬ ಗಣಿತ ವಿದ್ವಾಂಸ. ಶ್ರೇಷ್ಠ ಖಗೋಳಶಾಸ್ತ್ರಜ್ಞ ವರಾಹಮಿಹಿರನು ಇದೇ ಕಾಲದವನು.



*ಆರ್ಯಭಟ*



*ಮೆಹರೌಲಿ ಕಬ್ಬಿಣದ ಕಂಬ*

**ಲೋಹ ವಿಜ್ಞಾನ:** ಗುಪ್ತರ ಕಾಲದಲ್ಲಿ ಲೋಹ ವಿಜ್ಞಾನವು ಗಣನೀಯ ಮುನ್ನಡೆ ಸಾಧಿಸಿತು. ದೆಹಲಿಯ ಸಮೀಪ ಮೆಹರೌಲಿ ಎಂಬಲ್ಲಿನ ಕಬ್ಬಿಣದ ಕಂಬವು ಇದಕ್ಕೊಂದು ಉದಾಹರಣೆ. ಈ ಕಂಬವು 1500 ವರ್ಷಗಳಷ್ಟು ಹಳೆಯದಾದರೂ ಅದಕ್ಕೆ ತುಕ್ಕು ಹಿಡಿದಿಲ್ಲ ಮತ್ತು ಸವೆದಿಲ್ಲ. ಇದೇ ಕಾಲದ ಎಂಟು ಅಡಿ ಎತ್ತರವಿರುವ ತಾಮ್ರದ ಬುದ್ಧ ವಿಗ್ರಹವು ನಲಂದಾದಲ್ಲಿದೆ.

**ಆಯುರ್ವೇದ:** ಗುಪ್ತರ ಕಾಲದ ವಾಗ್ಭಟನು ಚರಕ ಸಂಹಿತೆಯ ಸಾರವನ್ನು ಸಿದ್ಧಪಡಿಸಿದನು. ಅದುವೇ 'ಅಷ್ಟಾಂಗ ಸಂಗ್ರಹ'. ಇದು ಆಯುರ್ವೇದದ ಪ್ರಮುಖ ಶಾಸ್ತ್ರಗ್ರಂಥವಾಗಿದ್ದು ಇಂದಿಗೂ ರೂಢಿಯಲ್ಲಿದೆ. ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸೆಯೂ ಸಾಕಷ್ಟು ಪ್ರಗತಿ ಹೊಂದಿತ್ತು. ಶಸ್ತ್ರಚಿಕಿತ್ಸಕರು 127 ಬಗೆಯ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸುತ್ತಿದ್ದರು. ದೇಹದೊಳಗೆ ಸೇರಿಕೊಂಡ ಕಬ್ಬಿಣ, ಕಲ್ಲುಗಳನ್ನು ಹೊರತೆಗೆಯುತ್ತಿದ್ದರು. ಪಾದರಸವನ್ನು ಔಷಧಿಯಾಗಿ ಮೊದಲ ಬಾರಿಗೆ ಬಳಕೆಗೆ ತಂದ ಕೀರ್ತಿ ಭಾರತೀಯ ವೈದ್ಯರಿಗೆ ಸಲ್ಲುತ್ತದೆ.



*ಪ್ರಾಚೀನ ಭಾರತದ ಶಸ್ತ್ರಚಿಕಿತ್ಸೆ*

**ಹೊಸ ಪದ :** **ತ್ರಿಕೋನಮಿತಿ** – ಗಣಿತದ ಒಂದು ಶಾಖೆ (ಟ್ರಿಗೊನೊಮೆಟ್ರಿ).

© KTBS NOT TO BE REPUBLISHED

## ನಿಮಗೆ ತಿಳಿದಿರಲಿ

1 ಗುಪ್ತ ವಂಶವು ಸುಮಾರು 1600 ವರ್ಷಗಳಷ್ಟು ಹಿಂದೆ ಸ್ಥಾಪನೆಗೊಂಡು ಎರಡು ಶತಮಾನಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸಿತು.

2 ಕಾಳಿದಾಸನ ನಾಟಕಗಳು ಅಭಿಜ್ಞಾನ ಶಾಕುಂತಲಾ, ಮಾಲವಿಕಾಗ್ನಿಮಿತ್ರ ಮತ್ತು ವಿಕ್ರಮೋರ್ವಶೀಯ; ಕಾವ್ಯಗಳು ರಘುವಂಶ, ಕುಮಾರಸಂಭವ, ಋತುಸಂಹಾರ ಮತ್ತು ಮೇಘದೂತ.

3 ಗುಪ್ತರ ಕಾಲದ ದೇವಾಲಯವನ್ನು ಆರಂಭದಲ್ಲಿ ಚೌಕಾಕಾರದ ತಳಪಾಯದ ಮೇಲೆ ಕಟ್ಟಲಾಗುತ್ತಿದ್ದು, ಗರ್ಭಗೃಹ ಮತ್ತು ಮುಖಮಂಟಪಗಳು ಮಾತ್ರವೇ ಇದ್ದವು.

4 ಭಿತ್ತಿ ಎಂದರೆ ಗೋಡೆ. ಗೋಡೆಯ ಮೇಲೆ ಬರೆದ ಚಿತ್ರಗಳೇ ಭಿತ್ತಿಚಿತ್ರಗಳು. ಭಿತ್ತಿಚಿತ್ರಗಳು ಅಜಂತಾದ ಬೌದ್ಧ ಗುಹಾಲಯಗಳಲ್ಲಿವೆ. ಸಾಮಾನ್ಯ ಕುಂಚಗಳಿಂದ ಸ್ಥಳೀಯವಾಗಿ ಸಿಗುತ್ತಿದ್ದ ಬಣ್ಣಗಳಿಂದ ಚಿತ್ರಗಳನ್ನು ಬರೆಯಲಾಗಿದೆ. ಅನೇಕ ಶತಮಾನಗಳವರೆಗೆ ಈ ಗುಹೆಗಳು ಕಣ್ಣಿಗೆ ಮರೆಯಾಗಿದ್ದವು. 1819 ರಲ್ಲಿ ಅವನ್ನು ಪತ್ತೆಹಚ್ಚಲಾಯಿತು.

5 ಮೆಹರೌಲಿಯ ಕಬ್ಬಿಣದ ಕಂಬದ ತೂಕ ಆರು ಟನ್, ಎತ್ತರ 23 ಅಡಿ. 19 ನೇ ಶತಮಾನದ ಆರಂಭದವರೆಗೂ ಯೂರೋಪಿನ ಯಾವ ನಿಪುಣ ಕಮ್ಮಾರನಿಗೂ ಅಂಥ ಕಂಬವನ್ನು ಎರಕ ಹೊಯ್ಯಲು ಸಾಧ್ಯವಾಗುತ್ತಿರಲಿಲ್ಲ.

© KTBS NOT TO BE REPUBLISHED

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಪ್ರಯಾಗದ ಸ್ತಂಭಶಾಸನದಲ್ಲಿ ಯಾವ ಚಕ್ರವರ್ತಿಯ ವಿವರಗಳಿವೆ?
2 'ವಿಕ್ರಮಾದಿತ್ಯ' ಎಂಬುದು ಯಾವ ಗುಪ್ತ ಸಾಮ್ರಾಟನ ಬಿರುದಾಗಿತ್ತು?
3 ಗುಪ್ತರ ಯುಗವನ್ನು ಸುವರ್ಣಯುಗವೆಂದು ಕರೆಯಲು ಕಾರಣವೇನು?
4 ಗುಪ್ತರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಚೀನಿ ಯಾತ್ರಿಕ ಯಾರು?
5 ಕಾಳಿದಾಸನು ರಚಿಸಿದ ಯಾವುದಾದರೂ ಒಂದು ನಾಟಕವನ್ನು ಹೆಸರಿಸಿ.
6 'ಮೃಚ್ಛಕಟಿಕ' ಯಾರು ರಚಿಸಿದ ಕೃತಿಯಾಗಿದೆ?
7 ಅಮರಸಿಂಹನು ರಚಿಸಿದ ಶಬ್ದಕೋಶ ಯಾವುದು?
8 ಧಮೇಖ್ ಸ್ತೂಪ ಎಲ್ಲಿದೆ?
9 ಗುಪ್ತರ ಕಾಲದ ಪ್ರಸಿದ್ಧ ಗಣಿತಶಾಸ್ತ್ರಜ್ಞನ ಹೆಸರೇನು?
10 'ಅಷ್ಟಾಂಗ ಸಂಗ್ರಹ'ವನ್ನು ಸಿದ್ಧಪಡಿಸಿದವರು ಯಾರು?

### ಚಟುವಟಿಕೆಗಳು

1 ಭಾರತದ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

2 ಸಮುದ್ರಗುಪ್ತ, ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯ, ಕಾಳಿದಾಸ, ಆರ್ಯಭಟ, ವರಾಹಮಿಹಿರ ಮತ್ತು ವಾಗ್ಭಟ ಇವರ ಜೀವನ ಚರಿತ್ರೆಯನ್ನು ಓದಿ. (ಆಕರ: ಭಾರತ ಭಾರತಿ ಪುಸ್ತಕ ಸಂಪದ, ರಾಷ್ಟ್ರೋತ್ಥಾನ ಸಾಹಿತ್ಯ). ಇವು ನಿಮ್ಮ ಶಾಲಾ ಗ್ರಂಥಾಲಯದಲ್ಲಿರಬಹುದು.

## ವರ್ಧನರು

ಗುಪ್ತ ಸಾಮ್ರಾಜ್ಯದ ಅವನತಿಯ ಅನಂತರ ಉತ್ತರ ಭಾರತದಲ್ಲಿ ಅನೇಕ ಸ್ವತಂತ್ರ ರಾಜವಂಶಗಳು ಹುಟ್ಟಿಕೊಂಡವು. ಪುಷ್ಯಭೂತಿ ವಂಶವು ಅವುಗಳಲ್ಲಿ ಪ್ರಮುಖವಾಗಿತ್ತು. ಈ ವಂಶವನ್ನು ಆಳಿದ ರಾಜರುಗಳಲ್ಲಿ ಪ್ರಭಾಕರ ವರ್ಧನ, ರಾಜ್ಯವರ್ಧನ ಮತ್ತು ಹರ್ಷವರ್ಧನ ಪ್ರಖ್ಯಾತರಾಗಿದ್ದರು. ಹರ್ಷವರ್ಧನನ ಬಗ್ಗೆ ಕೆಲವು ವಿಷಯಗಳನ್ನು ತಿಳಿಯೋಣ.

**ಹರ್ಷವರ್ಧನನ ಸಾಧನೆಗಳು:** ಹರ್ಷವರ್ಧನನು ಪಟ್ಟವನ್ನೇರಿದಾಗ ಆತ ಇನ್ನೂ ಹದಿನಾರು ವರ್ಷದ ಯುವಕನಾಗಿದ್ದನು. ಆ ವೇಳೆ ರಾಜ್ಯವು ಬಿಕ್ಕಟ್ಟಿನಲ್ಲಿ ಸಿಲುಕಿತ್ತು. ಆಡಳಿತದ ಅನುಭವ ಹರ್ಷವರ್ಧನಿಗಿರಲಿಲ್ಲ. ವೈರಿಗಳು ಇದರ ಲಾಭವನ್ನು ಪಡೆಯಲು ಮುಂದಾದರು. ಆದರೂ ಹರ್ಷವರ್ಧನನು ಸಂಚು ನಡೆಸುತ್ತಿದ್ದ ತನ್ನ ವೈರಿಗಳನ್ನು ಮಿಂಚಿನ ವೇಗದಲ್ಲಿ ಸದೆಬಡಿದನು. ರಾಜ್ಯವನ್ನು ಅಪಾಯದಿಂದ ಪಾರುಮಾಡಿ ಉತ್ತರ ಭಾಗದಲ್ಲಿ ಪ್ರಬಲ ಸಾಮ್ರಾಜ್ಯವೊಂದನ್ನು ಕಟ್ಟಿದನು.




© KTBS NOT TO BE REPUBLISHED

**ಸಾಹಿತ್ಯ:** ಹರ್ಷವರ್ಧನನು ಪಂಡಿತರಿಗೆ ಆಶ್ರಯ ನೀಡಿದನು. ಅವರಲ್ಲಿ ಬಾಣಭಟ್ಟ ಪ್ರಮುಖನು. ಈತನ 'ಹರ್ಷಚರಿತ' ಎಂಬ ಕೃತಿಯು ಹರ್ಷವರ್ಧನನ ಕುರಿತಾಗಿದೆ. 'ಕಾದಂಬರಿ' ಬಾಣಭಟ್ಟನ ಇನ್ನೊಂದು ಕೃತಿ. ಹರ್ಷವರ್ಧನನೇ ಸ್ವತಃ 'ಪ್ರಿಯದರ್ಶಿಕಾ', 'ರತ್ನಾವಳಿ' ಮತ್ತು 'ನಾಗಾನಂದ' ಎಂಬ ಮೂರು ನಾಟಕಗಳನ್ನು ರಚಿಸಿದನು. ಹರ್ಷವರ್ಧನನು ನಾಲಂದಾ ವಿಶ್ವವಿದ್ಯಾಲಯಕ್ಕೆ ಉದಾರ ದತ್ತಿಗಳನ್ನು ನೀಡಿದನು.

**ಧರ್ಮ:** ಹರ್ಷವರ್ಧನನು ಧಾರ್ಮಿಕ ಹಾಗೂ ಉದಾರ ಸ್ವಭಾವದ ವ್ಯಕ್ತಿಯಾಗಿದ್ದ. ಪ್ರಜೆಗಳ ಕಲ್ಯಾಣಕ್ಕಾಗಿ ಅಪಾರ ಶ್ರಮವಹಿಸಿದ. ಬಡವರಿಗಾಗಿ ಆಹಾರ ಮತ್ತು ಔಷಧ ಒದಗಿಸುವ ಕೇಂದ್ರಗಳನ್ನು ಸ್ಥಾಪಿಸಿದ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಅಲ್ಲಲ್ಲಿ ವಿಶ್ರಾಂತಿ ಗೃಹಗಳನ್ನು ಕೂಡ ಕಟ್ಟಿಸಿದ.

**ಧರ್ಮ ಸಮ್ಮೇಳನಗಳು:** ಹರ್ಷವರ್ಧನನು ತನ್ನ ರಾಜಧಾನಿಯಾದ ಕನೌಜ್ ಮತ್ತು ಪ್ರಯಾಗದಲ್ಲಿ ಧರ್ಮಸಮ್ಮೇಳನಗಳನ್ನು ಐದು ವರ್ಷಗಳಿಗೊಮ್ಮೆ ನಡೆಸುತ್ತಿದ್ದನು.

© KTBS NOT TO BE REPUBLISHED

**ಹ್ಯುಯೆನ್‌ತ್ಸಾಂಗ್:** ಹರ್ಷವರ್ಧನನ ಆಸ್ಥಾನಕ್ಕೆ ಹ್ಯುಯೆನ್‌ತ್ಸಾಂಗ್ ಎಂಬ ಚೀನಿ ಬೌದ್ಧ ಭಿಕ್ಷು ಬಂದಿದ್ದನು. ಅವನು ಭಾರತ ದೇಶ ಸಂಚಾರ ಮಾಡಿ ಬೌದ್ಧ ಸಾಹಿತ್ಯದ ಅಧ್ಯಯನ ನಡೆಸಿದ. 'ಸಿಯುಕಿ' ('ಪಶ್ಚಿಮದ ಭೂಮಿಯ ಕಥನ') ಎಂಬ ತನ್ನ ಗ್ರಂಥದಲ್ಲಿ ಆತನು ಭಾರತ ಪ್ರವಾಸದ ವಿವರವನ್ನು ನೀಡಿದ್ದಾನೆ. ಹ್ಯುಯೆನ್‌ತ್ಸಾಂಗನನ್ನು ಭೇಟಿಯಾಗುವ ಮೊದಲೇ ಹರ್ಷವರ್ಧನನು ತನ್ನ ರಾಯಭಾರಿಯನ್ನು ಚೀನಾ ಚಕ್ರವರ್ತಿಯ ಆಸ್ಥಾನಕ್ಕೆ ಕಳುಹಿಸಿದ್ದನು. ಇದಕ್ಕೆ ಪ್ರತಿಯಾಗಿ ಚೀನಿ ರಾಯಭಾರಿಯನ್ನು ಇಲ್ಲಿಗೆ ಕಳುಹಿಸಲಾಗಿತ್ತು.



ಹ್ಯುಯೆನ್‌ತ್ಸಾಂಗ್

**ನಲಂದಾ ವಿಹಾರ :** ಬಿಹಾರ ರಾಜ್ಯದಲ್ಲಿರುವ ನಲಂದಾ ವಿಹಾರವು ಆರು ಶತಮಾನಗಳಿಗೂ ಹೆಚ್ಚು ಕಾಲ ಜಗತ್ಪ್ರಸಿದ್ಧಿ ಪಡೆದಿತ್ತು. ಅಧ್ಯಯನಕ್ಕಾಗಿ ಜಪಾನ್, ಚೀನಾ ಮುಂತಾದ ವಿದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಇವರೆಲ್ಲರಿಗೆ ಭಾರತೀಯ ಹೆಸರುಗಳನ್ನಿಡುತ್ತಿದ್ದರು. ಇಲ್ಲಿ ಎಂಟು ಮಹಾಪಾಠಶಾಲೆಗಳೂ ಮೂರು ಬೃಹತ್ ಗ್ರಂಥಭಂಡಾರಗಳೂ ಇದ್ದವು. ಬೌದ್ಧಮತ ಇಲ್ಲಿನ ಮುಖ್ಯ ಅಧ್ಯಯನ ವಿಷಯವಾಗಿದ್ದರೂ

ವೇದ, ಯೋಗ, ವೈದ್ಯ ಮತ್ತಿತರ ವಿಷಯಗಳ ಬಗೆಗೂ ಶಿಕ್ಷಣವಿತ್ತು. ಹ್ಯೂಯೆನ್‌ತ್ಸಾಂಗ್ ಈ ಮಹಾವಿದ್ಯಾಲಯದಲ್ಲಿ ಹಲವಾರು ವರ್ಷಗಳನ್ನು ಕಳೆದಿದ್ದನು.



*ನಲಂದಾ ವಿಶ್ವವಿದ್ಯಾಲಯ*

ಮುಂದೆ, ವಿದೇಶಿ ಆಕ್ರಮಣಕಾರರು ಹಿಂಸಾಚಾರ ನಡೆಸಿ ವಿದ್ಯಾಲಯವನ್ನು ಧ್ವಂಸಗೈದರು. ಇದರಿಂದ ಗ್ರಂಥಾಲಯಗಳು ಬೆಂಕಿಗೆ ಆಹುತಿಯಾದವು. ಮಹಾಪಂಡಿತರು ಅಸು ನೀಗಿದರು. ನಲಂದಾ ನಿರ್ನಾಮವಾಯಿತು.

@KTBS NOT TO BE REPUBLISHED

### ನಿಮಗೆ ತಿಳಿದಿರಲಿ

ನಲಂದಾ ವಿದ್ಯಾಕೇಂದ್ರದಲ್ಲಿ ಶಿಕ್ಷಣಕ್ಕಾಗಲಿ, ಊಟ ವಸತಿಗಳಿಗಾಗಲಿ ಶುಲ್ಕವಿರಲಿಲ್ಲ. ಈ ಎಲ್ಲ ಖರ್ಚನ್ನು ನಿರ್ವಹಿಸಲು ನೂರು ಗ್ರಾಮಗಳ ಆದಾಯವು ಮೀಸಲಾಗಿದ್ದಿತು. ಸಾಮ್ರಾಟ ಹರ್ಷವರ್ಧನ ಈ ವಿಶ್ವವಿದ್ಯಾಲಯದ ಪೋಷಕರಲ್ಲೊಬ್ಬ. ವಿದ್ಯಾರ್ಥಿ ಜೀವನ ಕಟ್ಟುನಿಟ್ಟಾಗಿತ್ತು. ಶ್ರೇಷ್ಠಪಂಡಿತರು, ಅಧ್ಯಾಪಕ ವರ್ಗದಲ್ಲಿದ್ದರು.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 'ಹರ್ಷಚರಿತ' ಎಂಬ ಗ್ರಂಥವನ್ನು ಯಾರು ರಚಿಸಿದರು?

2 ಹರ್ಷವರ್ಧನನ ಎರಡು ನಾಟಕಗಳನ್ನು ಹೆಸರಿಸಿ.

3 ಹರ್ಷವರ್ಧನನ ಆಸ್ಥಾನಕ್ಕೆ ಚೀನಾ ದೇಶದಿಂದ ಬಂದಿದ್ದ ಬೌದ್ಧ ಭಿಕ್ಷು ಯಾರು?

4 ಭಾರತದ ಪ್ರಾಚೀನ ಕಾಲದ ಖ್ಯಾತ ವಿಶ್ವವಿದ್ಯಾಲಯ ಹೆಸರಿಸಿ?

| ಅಧ್ಯಾಯ 5 | ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳು |
|---|---|

T8M5K3

**ಪಾಠದ ಪರಿಚಯ**

ಈ ಪಾಠದಲ್ಲಿ ಸಂಗಂ ಯುಗದ ವಿಶಿಷ್ಟ ಸಾಹಿತ್ಯಿಕ ಕೊಡುಗೆಗಳನ್ನು ವಿವರಿಸಲಾಗಿದೆ. ಆಮೇಲೆ ದಕ್ಷಿಣ ಭಾರತದ ಪ್ರಾಚೀನ ಅರಸುಮನೆತನಗಳಾದ ಸಾತವಾಹನ, ಕದಂಬ, ಗಂಗ, ಬಾದಾಮಿಯ ಚಾಳುಕ್ಯ, ಕಾಂಚಿಯ ಪಲ್ಲವ, ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಳುಕ್ಯರ ಸಾಂಸ್ಕೃತಿಕ ಸಾಧನೆಗಳನ್ನು ನಿರೂಪಿಸಲಾಗಿದೆ. ಹೊಯ್ಸಳ ಮತ್ತು ಚೋಳ ರಾಜಮನೆತನಗಳ ಗಣ್ಯ ಸಾಮ್ರಾಟರು ಮತ್ತು ಅವರು ಶಿಲ್ಪಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿರುವ ವಿಶೇಷ ಕೊಡುಗೆಗಳನ್ನು ಪರಿಚಯಿಸಲಾಗಿದೆ. ಜೊತೆಗೆ ಚೋಳರ ಗ್ರಾಮಾಡಳಿತ ಪದ್ಧತಿಯನ್ನು ವಿವರಿಸಲಾಗಿದೆ. ಹೊಯ್ಸಳ ಮತ್ತು ಚೋಳ ರಾಜಮನೆತನಗಳ ಗಣ್ಯ ಸಾಮ್ರಾಟರು ಮತ್ತು ಅವರು ಶಿಲ್ಪಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿರುವ ವಿಶೇಷ ಕೊಡುಗೆಗಳನ್ನು ಪರಿಚಯಿಸಲಾಗಿದೆ. ಜೊತೆಗೆ ಚೋಳರ ಗ್ರಾಮಾಡಳಿತ ಪದ್ಧತಿಯನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1 ಸಂಗಂ ಸಾಹಿತ್ಯ ಮತ್ತು ಮಹಾಕವಿ ತಿರುವಳ್ಳುವರ್ ಬಗ್ಗೆ ತಿಳಿದುಕೊಳ್ಳುವುದು.

2 ಸಾತವಾಹನರು, ಕದಂಬರು ಮತ್ತು ಗಂಗರು ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಪ್ರಶಂಸಿಸುವುದು.

3 ಸಾತವಾಹನರ ಕಾಲದ ವ್ಯಾಪಾರ ಮತ್ತು ನಗರ ಜೀವನವನ್ನು ಅರ್ಥೈಸಿಕೊಳ್ಳುವುದು.

4 ಕದಂಬರ ಕಾಲದ ಸಂಸ್ಕೃತಿಯ ಬಗ್ಗೆ ತಿಳಿಯುವುದು.

5 ಚಾಳುಕ್ಯರ ವಾಸ್ತುಶಿಲ್ಪದ ಬಗ್ಗೆ ಅರಿಯುವುದು.

6 ಕಂಚಿಯ ಪಲ್ಲವರು ಶಿಲ್ಪಕಲೆಗೆ ನೀಡಿದ ಕೊಡುಗೆಯನ್ನು ತಿಳಿಯುವುದು.

7 ಗಂಗರ ವಾಸ್ತುಶಿಲ್ಪದ ಬಗ್ಗೆ ತಿಳಿಯುವುದು.

8 ರಾಷ್ಟ್ರಕೂಟರು ಕನ್ನಡಕ್ಕೆ ನೀಡಿದ ಕೊಡುಗೆಯನ್ನು ತಿಳಿಯುವುದು.

9 ಕಲ್ಯಾಣದ ಚಾಳುಕ್ಯರ ಕಾಲದ ಸಾಹಿತ್ಯ, ವಾಸ್ತುಶಿಲ್ಪದ ಬಗ್ಗೆ ತಿಳಿಯುವುದು.

10 ಪ್ರಾಚೀನ ಕೋಟೆ, ಕೊತ್ತಲಗಳು ಮತ್ತು ಸ್ಮಾರಕಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು ಅರಿವಿನೊಂದಿಗೆ ಅವುಗಳ ರಕ್ಷಣೆಗೆ ಮುಂದಾಗುವುದು.

© KTBS NOT TO BE REPUBLISHED

11 ಹೊಯ್ಸಳರು ಮತ್ತು ಚೋಳರು ಶಿಲ್ಪಕಲೆ ಮತ್ತು ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳನ್ನು ಅರಿತುಕೊಂಡು ಅವುಗಳ ಮಹತ್ವವನ್ನು ಪ್ರಶಂಸಿಸುವುದು.

12 ಹೊಯ್ಸಳ ವಿಷ್ಣುವರ್ಧನ ಹಾಗೂ ಮೂರನೆಯ ಬಲ್ಲಾಳ ಮತ್ತು ರಾಜರಾಜ ಚೋಳ ಹಾಗೂ ರಾಜೇಂದ್ರ ಚೋಳ ಇವರ ಸಾಧನೆಗಳನ್ನು ಅರ್ಥೈಸಿಕೊಳ್ಳುವುದು. ಭೂಪಟದಲ್ಲಿ ಹೊಯ್ಸಳ ಮತ್ತು ಚೋಳರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು



**ಪಾಠಪ್ರವೇಶ**

ಮೇರಿ ಮತ್ತು ಮಮತಾ ಐದನೇ ತರಗತಿಯ ಆಪ್ತ ಗೆಳತಿಯರು. ಅವರ ಜೋಡಿ ಜಡೆಗಳು ನೋಡಲು ಬಲು ಸುಂದರ. ಪರಸ್ಪರ ತಮಾಷೆ ಮಾಡುತ್ತ, ಕತೆ ಹೇಳುತ್ತ ಆನಂದಿಸುವರು. 'ನಿನ್ನ ಊರಿನ ಕತೆಯೊಂದ ಹೇಳೆ ಮೇರಿ', ಎಂದು ಗೆಳತಿ ಕೇಳಿದಾಗ ಅವಳಿಗೆ ತಕ್ಷಣ ಹೊಳೆದದ್ದು ಕಣ್ಣಿಗಿಯ ಕತೆ.

**ಕಣ್ಣಗಿಯ ಕತೆ:** ಕಾವೇರಿಪಟ್ಟಣದ ಕೋವಲನ್ ಒಬ್ಬ ಶ್ರೀಮಂತ ವ್ಯಾಪಾರಿ. ಕಣ್ಣಗಿ ಅವನ ಧರ್ಮಪತ್ನಿ. ಆತನು ತನ್ನ ದಾಸಿಯಾದ ಮಾಧವಿಯ ಮೋಹಕ್ಕೊಳಗಾಗಿ ತನ್ನೆಲ್ಲ ಸಂಪತ್ತನ್ನು ಕಳೆದುಕೊಳ್ಳುತ್ತಾನೆ. ಆದರೆ ಪತಿಭಕ್ತಿಯುಳ್ಳವಳಾದ ಕಣ್ಣಗಿ ಗಂಡನ ಮೇಲೆ ಸ್ವಲ್ಪವೂ ಕೋಪಗೊಳ್ಳುವುದಿಲ್ಲ. ಇಬ್ಬರೂ ಮಧುರೆಗೆ ಹೋಗಿ ಹೊಸ ಬಾಳನ್ನು ಆರಂಭಿಸುವ ನಿರ್ಧಾರ ಮಾಡುತ್ತಾರೆ. ಜೀವನ ನಿರ್ವಹಣೆಗಾಗಿ ಕಣ್ಣಗಿ ತನ್ನ ರತ್ನಖಚಿತ ಕಾಲಂದುಗೆಯನ್ನು ತೆಗೆದು ಪತಿಗೆ ನೀಡುತ್ತಾಳೆ. ಕೋವಲನ್ ಅದನ್ನು ಮಾರುವುದಕ್ಕಾಗಿ ಚಿನ್ನಾಭರಣ ಅಂಗಡಿಗೆ ಹೋಗುತ್ತಾನೆ. ಮಧುರೆಯ ಪಾಂಡ್ಯರಾಜನ ರಾಣಿ, ಕಳೆದುಕೊಂಡಿದ್ದ ಕಾಲಂದುಗೆಯೇ ಅದಾಗಿದೆ ಎಂಬ ಅನುಮಾನದ ಮೇಲೆ ಕೋವಲನನ್ನು ಬಂಧಿಸಿ, ಅನಂತರ ಕೊಲ್ಲಲಾಗುತ್ತದೆ. ಕಣ್ಣಗಿಯ ದುಃಖ, ಕೋಪ ಉಕ್ಕೇರುತ್ತದೆ. ಅವಳು ತನ್ನ ಇನ್ನೊಂದು ಕಾಲಂದುಗೆಯನ್ನು ಹಿಡಿದು ಕೋವಲನ್ ನಿರ್ದೋಷಿ ಎಂದು ಮಧುರೆಯ ಬೀದಿಬೀದಿಗಳಲ್ಲಿ ಸಾರುತ್ತ, ರಾಜನನ್ನು ಎದುರಿಸುತ್ತಾಳೆ, ನಿರಪರಾಧಿ ಗಂಡನನ್ನು ಕೊಲ್ಲಿಸಿದ ರಾಜನಿಗೆ ಶಾಪ ಕೊಡುತ್ತಾಳೆ. ಶಾಪದ ಫಲವಾಗಿ ರಾಜ ರಾಣಿಯರು ನಾಶವಾಗುತ್ತಾರೆ; ಮಧುರೆಗೆ ಬೆಂಕಿ ಆವರಿಸುತ್ತದೆ. ಕಡೆಗೆ ಪಟ್ಟಣದ ಅಧಿದೇವತೆಯ ಸೂಚನೆಯಂತೆ, ಕಣ್ಣಗಿ ತನ್ನ ಶಾಪವನ್ನು ಹಿಂದಕ್ಕೆ ಪಡೆಯುತ್ತಾಳೆ.



ಕಾಲಂದುಗೆ

NOT TO BE REPUBLISHED © KTBS

**ಸಂಗಂ ಸಾಹಿತ್ಯ, ಸಂಗಂ ಯುಗ:** ಕಣ್ಣಗಿ 'ಶಿಲಪ್ಪದಿಗಾರಂ' ಎಂಬ ಪ್ರಾಚೀನ ತಮಿಳ್ ಮಹಾಕಾವ್ಯದ ಕಥಾನಾಯಕಿ. ಈ ಮಹಾಕಾವ್ಯವು ಭಾರತದ ಅತ್ಯುತ್ತಮ ಸಾಹಿತ್ಯ ಕೃತಿಗಳಲ್ಲೊಂದು.

'ಮಣಿಮೇಗಿಲೈ' ತಮಿಳರ ಇನ್ನೊಂದು ಮಹಾಕಾವ್ಯ. ಇದರ ಕಥಾನಾಯಕಿ ಮಣಿಮೇಗಲೆ. ಅವಳು ಕೋವಲನ್ ಮತ್ತು ಅವನ ದಾಸಿಯಾದ ಮಾಧವಿಯ ಮಗಳು. ಅವಳೇ ಮುಂದೆ ಬೌದ್ಧ ಸನ್ಯಾಸಿನಿಯಾಗಿ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ, ಬಡವರ ಹಸಿವು ಹಾಗೂ ರೋಗರುಜಿನಗಳನ್ನು ನಿವಾರಿಸುತ್ತಾಳೆ.



*ಮಹಾಕವಿ ತಿರುವಳ್ಳುವರ್*

ಶಿಲಪ್ಪದಿಗಾರಂ ಮತ್ತು ಮಣಿಮೇಗಿಲೈ ಈ ಎರಡು ಮಹಾಕಾವ್ಯಗಳಲ್ಲದೆ, ತಮಿಳರ ಜನಪ್ರಿಯ ನೀತಿ ಗ್ರಂಥವೊಂದಿದೆ: ಅದೇ 'ತಿರುಕ್ಕುರಳ್, ಅದರ ರಚನಕಾರ ತಿರುವಳ್ಳುವರ್. ಅವನು ಸಂಗಂ ಯುಗದ ಅತ್ಯಂತ ಮಹತ್ವದ ಕವಿ. 'ತಿರು' ಎಂದರೆ 'ಶ್ರೀ. "ಕುರಳ್" ಎಂಬುದರ ಅರ್ಥ 'ಚಿಕ್ಕದು'. ಕುರಳ್ ಕೇವಲ ಒಂದೂವರೆ ಸಾಲಿನ ಪದ್ಯ. ಆದರೂ ಅದರಲ್ಲಿ ಅರ್ಥ ಹಿರಿದಾದದ್ದು.

ಕುರಳ್ ಕುರಿತು, "ಸಾಸಿವೆಯನ್ನು ಕೊರೆದು ಟೊಳ್ಳು ಮಾಡಿ ಅದರೊಳಗೆ ಸಪ್ತಸಾಗರಗಳನ್ನು ಅಡಗಿಸಿದಂತೆ", ಎಂದು ಹೇಳಲಾಗಿದೆ.

ಶಿಲಪ್ಪದಿಗಾರಂ, ಮಣಿಮೇಗಿಲೈ ಮತ್ತು 'ತಿರುಕ್ಕುರಳ್" ಇವುಗಳಲ್ಲದೆ ಪ್ರಾಚೀನ ಕಾಲಕ್ಕೆ ಸೇರಿದ ಇನ್ನೂ ಕೆಲವು ಸಾಹಿತ್ಯ ಕೃತಿಗಳಿವೆ. ಇವನ್ನೆಲ್ಲಾ ಒಟ್ಟಾಗಿ 'ಸಂಗಂ ಸಾಹಿತ್ಯ' ಎನ್ನುವರು. ಮಧುರೆಯ ಪಾಂಡ್ಯ ದೊರೆಗಳು ತಮ್ಮ ರಾಜಧಾನಿ ಮಧುರೆಯಲ್ಲಿ ತಮಿಳ್ ಸಂಗಂ (ತಮಿಳು ಸಾಹಿತ್ಯ ಸಂಘ) ಸ್ಥಾಪಿಸಿ ಕವಿಗಳಿಗೆ ಆಶ್ರಯ ಕೊಟ್ಟಿದ್ದರು, ಕವಿಗಳು ತಮ್ಮ ಕೃತಿಗಳನ್ನು ಪರಿಶೀಲನೆಗಾಗಿ ಸಂಘಕ್ಕೆ ಒಪ್ಪಿಸುವ ಪರಿಪಾಠವಿತ್ತು.

ಸಂಗಂ ಸಾಹಿತ್ಯ ರಚನೆ ಸುಮಾರು ಐದು ಶತಮಾನಗಳ ಕಾಲ ಮುಂದುವರಿಯಿತು. ಈ ಕಾಲಾವಧಿಯನ್ನು 'ಸಂಗಂ ಯುಗ' ಎನ್ನುವರು. ಸಂಗಂ ಸಾಹಿತ್ಯ ಕೃತಿಗಳಲ್ಲಿ ಅಂದಿನ ಅರಸು ಮನೆತನಗಳಾದ ಚೋಳ, ಚೇರ ಮತ್ತು ಪಾಂಡ್ಯ ರಾಜರ ಆಳ್ವಿಕೆ ಮತ್ತು ಆ ಕಾಲದ ಜನಜೀವನದ ವರ್ಣನೆಯಿದೆ.

©KTBS NOT TO BE REPUBLISHED

## ಸಾತವಾಹನರು

ಪ್ರಾಚೀನ ಕಾಲದಲ್ಲಿ ಸಾತವಾಹನ (ಶಾತವಾಹನ) ಎಂಬ ರಾಜವಂಶವು ದಕ್ಷಿಣ ಭಾರತದ ಕೆಲ ಭಾಗಗಳನ್ನು ಆಳುತ್ತಿತ್ತು. ಮಹಾರಾಷ್ಟ್ರದ ಪ್ರತಿಷ್ಠಾನಪುರ (ಈಗಿನ ಪೈಠಾಣ) ಅದರ ರಾಜಧಾನಿ. (ಭೂಪಟ ನೋಡಿ).



©KTBS NOT TO BE REPUBLISHED

Sketch map not to scale

**ಗೌತಮೀಪುತ್ರ ಸಾತಕರ್ಣಿ :** ಸಾತವಾಹನ ವಂಶದ ಪ್ರಮುಖ ರಾಜನೆಂದರೆ ಗೌತಮೀಪುತ್ರ ಸಾತಕರ್ಣಿ, ಪರಾಕ್ರಮಿಯಾಗಿದ್ದ ಈತನು ವಿದೇಶಿ ಆಳರಸರನ್ನು ಸೋಲಿಸಿ ಅವರ ವಿಸ್ತಾರವಾದ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.

ಕರ್ನಾಟಕದ ಕೆಲ ಭಾಗಗಳು ಕೂಡ ಅವನ ಕೈಕೆಳಗಿದ್ದವು. ನಾಸಿಕ ಎಂಬಲ್ಲಿ ದೊರಕಿದ ಶಾಸನದಲ್ಲಿ ಈತನು ಸುಂದರ ಪುರುಷನು, ಉತ್ತಮ ಗುಣದವನು, ದುರ್ಬಲರ ಬಗ್ಗೆ ವಿಶೇಷ ಕಾಳಜಿಯುಳ್ಳವನೆಂದು ವರ್ಣಿಸಲಾಗಿದೆ. ಗೌತಮೀಪುತ್ರನು ವೈದಿಕಧರ್ಮ ಸಂಪ್ರದಾಯವನ್ನು ಮತ್ತೆ ಬಳಕೆಗೆ ತಂದನು. ಈತನು ಅನ್ಯಮತ ಸಹಿಷ್ಣುವಾಗಿದ್ದನು.

**ಧರ್ಮ ಮತ್ತು ಸಮಾಜ:** ಸಾತವಾಹನರು ವೈದಿಕ ಧರ್ಮದ ಅನುಯಾಯಿಗಳಾಗಿದ್ದರು. ಅಶ್ವಮೇಧ ಮೊದಲಾದ ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಅವರ ಸಾಮ್ರಾಜ್ಯದಲ್ಲಿ ನೆಲೆಸಿದ ವಿದೇಶಿಯರು ಹಿಂದೂಧರ್ಮ ಅಥವಾ ಬೌದ್ಧಮತವನ್ನು ತಾವಾಗಿಯೇ ಸ್ವೀಕರಿಸಿ, ಇಲ್ಲಿನ ದೇವದೇವತೆಗಳ ಹೆಸರುಗಳನ್ನು ಇಟ್ಟುಕೊಂಡರು. ಶಿವ ಮತ್ತು ವಿಷ್ಣುವನ್ನು ಪೂಜಿಸಿದರು. ಸಮಾಜದಲ್ಲಿ ಒಂದಾಗಿ ಬಾಳಿದರು. ಸ್ತ್ರೀಯರಿಗೆ ಗೌರವದ ಸ್ಥಾನಮಾನವಿತ್ತು. ಅವರು ಆಸ್ತಿಪಾಸ್ತಿ ಹೊಂದಿದ್ದು, ಧಾರ್ಮಿಕ ಕೇಂದ್ರಗಳಿಗೆ ಅಪಾರ ದಾನ ನೀಡುತ್ತಿದ್ದರು.

**ವಾಸ್ತುಶಿಲ್ಪಕ್ಕೆ ಕೊಡುಗೆ:** ಸಾತವಾಹನರು ವಾಸ್ತುಶಿಲ್ಪಕ್ಕೆ ಅಪಾರ ಕೊಡುಗೆ ನೀಡಿದರು. ಅವರ ಕಾಲದ ಮೂರು ವಿಧದ ಬೌದ್ಧ ರಚನೆಗಳೆಂದರೆ ಚೈತ್ಯ, ವಿಹಾರ ಮತ್ತು ಸ್ತೂಪಗಳು. ಚೈತ್ಯವೆಂದರೆ ಬೌದ್ಧರ ಪ್ರಾರ್ಥನಾ ಮಂದಿರ, ಬೌದ್ಧ ಭಿಕ್ಷುಗಳ ನಿವಾಸವೇ ವಿಹಾರ.

ಸಾತವಾಹನರ ರಚನೆಗಳು ಭಾರಿ ಬಂಡೆಗಳನ್ನು ಕೊರೆದು ಮಾಡಿರುವ ಚೈತ್ಯ ಮತ್ತು ವಿಹಾರಗಳಾಗಿವೆ. ಮಹಾರಾಷ್ಟ್ರದ ಕಾರ್ಲೆ ಎಂಬಲ್ಲಿನ ಚೈತ್ಯವು ದೊಡ್ಡ ಗಾತ್ರದ್ದಾಗಿದ್ದು ಸುಂದರವಾಗಿದೆ. ಕನ್ಹೇರಿ ಎಂಬಲ್ಲಿರುವ ಚೈತ್ಯವು ಪ್ರಸಿದ್ಧವಾಗಿದೆ. ಚೈತ್ಯಗಳ ಪಕ್ಕದಲ್ಲಿ ಬಂಡೆಗಳನ್ನು ಕೊರೆದು ಮಾಡಿದ ವಿಹಾರಗಳಿವೆ. ಆಂಧ್ರಪ್ರದೇಶದ ಅಮರಾವತಿಯ ಅಮೃತಶಿಲೆಯ ಸ್ತೂಪವು ಕಲಾತ್ಮಕವಾಗಿದೆ. ಕರ್ನಾಟಕದಲ್ಲಿ ಸಾತವಾಹನರ ರಚನೆಗಳ ಅವಶೇಷಗಳನ್ನು ಗುಲ್ಬರ್ಗ ಜಿಲ್ಲೆಯ ಸನ್ನತಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಕಾಣಬಹುದು. ಸಾತವಾಹನರ ಸಾವಿರಾರು ನಾಣ್ಯಗಳು ದೊರಕಿವೆ.

**ವ್ಯಾಪಾರ ಮತ್ತು ಪಟ್ಟಣಗಳು :** ಸಾತವಾಹನರ ಆಳ್ವಿಕೆಯ ಕಾಲವು ಆರ್ಥಿಕ ಸಮೃದ್ಧಿಯ ಕಾಲವಾಗಿತ್ತು. ಇದಕ್ಕೆ ಮುಖ್ಯ ಕಾರಣವೆಂದರೆ ಬಿರುಸಾಗಿ ನಡೆಯುತ್ತಿದ್ದ ಒಳನಾಡಿನ ಮತ್ತು ಹೊರನಾಡಿನ ವ್ಯಾಪಾರ ಚಟುವಟಿಕೆಗಳು.

ಸಾಮ್ರಾಜ್ಯದ ಹಲವು ಪಟ್ಟಣಗಳು ವ್ಯಾಪಾರಿಕೇಂದ್ರಗಳಾಗಿದ್ದವು. ಇಂಥ ಪಟ್ಟಣಗಳನ್ನು "ನಿಗಮಗಳು" ಎನ್ನುತ್ತಿದ್ದರು.

©KTBS NOT TO BE REPUBLISHED



*ಕಾರ್ಲೆಯ ಚೈತ್ಯ (ಮಹಾರಾಷ್ಟ್ರ)*



*ಅಮರಾವತಿಯ ಸ್ತೂಪದ ಮಾದರಿ*

ಮಹಾರಾಷ್ಟ್ರದ ಪೈಠಾಣ, ಕಾರ್ಲೆ, ಕನ್ಹೇರಿ, ಜುನ್ನಾರ್ ಮತ್ತು ನಾಸಿಕ್, ಆಂಧ್ರಪ್ರದೇಶದ ಧಾನ್ಯಕಟಕ (ಧರಣೀಕೋಟೆ) ಮತ್ತು ಉತ್ತರ ಕನ್ನಡ ಜಿಲ್ಲೆಯ ವೈಜಯಂತಿ (ಬನವಾಸಿ) ಮುಂತಾದವು ನಿಗಮಗಳಾಗಿದ್ದವು.

ಪಟ್ಟಣಗಳಲ್ಲಿ 'ಶ್ರೇಣಿ' ಎಂಬ ಸಂಘಗಳಿದ್ದವು. ಶ್ರೇಣಿಗಳೆಂದರೆ ವ್ಯಾಪಾರಿಗಳು ಮತ್ತು ವಿವಿಧ ಕಸಬುದಾರರು ತಮ್ಮ ಹಿತರಕ್ಷಣೆಗಾಗಿ ಕಟ್ಟಿಕೊಂಡ ಸಂಘಗಳು, ಉದಾಹರಣೆಗೆ – 'ಧಾನಿಕ ಶ್ರೇಣಿ' ಎಂಬುದು ಧಾನ್ಯವ್ಯಾಪಾರಿಗಳ ಸಂಘವಾಗಿತ್ತು. ಇದೇ ರೀತಿ ಗಾಣಿಗ, ಕಮ್ಮಾರ, ಕಂಚುಗಾರ, ಕುಂಬಾರ ಮತ್ತಿತರ ಕಸಬುದಾರರು ತಮ್ಮ ತಮ್ಮ ಶ್ರೇಣಿಗಳನ್ನು ಕಟ್ಟಿಕೊಂಡಿದ್ದರು. ಶ್ರೇಣಿಗೊಬ್ಬ ಹಿರಿಯನಿದ್ದು, ಅವನನ್ನು ಶ್ರೇಷ್ಠಿ ಅಥವಾ ಸೆಟ್ಟಿ ಎನ್ನುತ್ತಿದ್ದರು.

NOT TO BE REPUBLISHED



*ಸಾತವಾಹನ ನಾಣ್ಯಗಳು*

ಶ್ರೇಣಿಗಳು ಆಧುನಿಕ ಬ್ಯಾಂಕ್‌ಗಳಂತೆ ಹಣಕಾಸು ವ್ಯವಹಾರ ನಡೆಸುತ್ತಿದ್ದವು. ಅವು ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಕೂಡ ವಿಶೇಷ ಬೆಂಬಲ ನೀಡುತ್ತಿದ್ದವು. ಕಾರ್ಲೆಯ ಖ್ಯಾತ ಚೈತ್ಯವನ್ನು ಕಟ್ಟಿಸಿದವನು ಓರ್ವ ಶ್ರೇಷ್ಠಿಯಾಗಿದ್ದನು.

ಸಾಮ್ರಾಜ್ಯದ ಪೂರ್ವ ಮತ್ತು ಪಶ್ಚಿಮ ಕರಾವಳಿಗಳ ಉದ್ದಕ್ಕೂ ಅನೇಕ ಬಂದರುಗಳಿದ್ದವು. ಪಶ್ಚಿಮ ತೀರದಲ್ಲಿ ಭರುಕಚ್ಛ (ಈಗಿನ ಬ್ರೋಚ್), ಮುಂಬೈ ಸಮೀಪದ ಸೊಪಾರಾ ಮತ್ತು ಕಲ್ಯಾಣ ಮುಖ್ಯ ಬಂದರುಗಳು. ಪೂರ್ವ ತೀರದಲ್ಲಿ ಕೂಡ ಅನೇಕ ಬಂದರುಗಳಿದ್ದವು.

ಸಾತವಾಹನರ ಕಾಲದಲ್ಲಿ ಯುರೋಪಿನ ರೋಮನ್ ಸಾಮ್ರಾಜ್ಯದೊಡನೆ ಭಾರತದ ವಾಣಿಜ್ಯ ಸಂಬಂಧವು ಉತ್ತಮವಾಗಿತ್ತು. ವ್ಯಾಪಾರದಲ್ಲಿ ಭಾರತದ ರಫ್ತು ಅಧಿಕವಾಗಿದ್ದ ಕಾರಣ, ಅಲ್ಲಿಂದ ಪಾವತಿಯ ರೂಪದಲ್ಲಿ ಬಂಗಾರವು ಭಾರಿ ಪ್ರಮಾಣದಲ್ಲಿ ಇಲ್ಲಿಗೆ ಬರುತ್ತಿತ್ತು. ಅಲ್ಲದೆ ಪೂರ್ವ ತೀರದ ಬಂದರುಗಳ ಮೂಲಕ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ವಿದೇಶಿ ವ್ಯಾಪಾರದಿಂದಾಗಿ ಸಾತವಾಹನ ಸಾಮ್ರಾಜ್ಯವು ಭಾರಿ ಆರ್ಥಿಕ ಪ್ರಗತಿಯನ್ನು ಕಂಡಿತು.

## ಬನವಾಸಿಯ ಕದಂಬರು

ಕದಂಬ ವಂಶದ ಸ್ಥಾಪಕ ಮಯೂರಶರ್ಮ. ಅವನ ಮನೆಯ ಬಳಿ ಕದಂಬ ವೃಕ್ಷವಿದ್ದ ಕಾರಣ ಅವನ ವಂಶ 'ಕದಂಬ' ಎಂದಾಯಿತು. ಮಯೂರಶರ್ಮನು ಕದಂಬ ವಂಶದ ಸ್ಥಾಪಕ ಹಾಗೂ ಪ್ರಸಿದ್ಧ ರಾಜ. ಕದಂಬರ ರಾಜಧಾನಿ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಅವರ ಲಾಂಛನ ಸಿಂಹ.

@KTBS NOT TO BE REPUBLISHED




Sketch map not to scale

©KTBS NOT TO BE REPUBLISHED

ಕದಂಬರ ಕಾಲದಲ್ಲಿ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳು ಪ್ರಚಲಿತದಲ್ಲಿದ್ದವು. ಪ್ರಾರಂಭದಲ್ಲಿ ಪ್ರಾಕೃತ ಭಾಷೆ, ಅನಂತರ ಸಂಸ್ಕೃತ ಭಾಷೆಯು ಹೆಚ್ಚಿನ ಮಾನ್ಯತೆ ಪಡೆಯಿತು. ಸಂಸ್ಕೃತವು ಆಸ್ಥಾನದ ಭಾಷೆಯಾಗಿದ್ದು ಶಿಕ್ಷಣದಲ್ಲಿ ಅದರ ಬಳಕೆಯಿತ್ತು. ಮುಂದೆ ಕನ್ನಡ ಭಾಷೆಗೆ ಹೆಚ್ಚಿನ ಮಾನ್ಯತೆ ದೊರಕಿತು.



*ಕದಂಬರ ಲಾಂಛನ – ಸಿಂಹ*

- ಹಾಸನ ಜಿಲ್ಲೆಯ ಹಲ್ಮಿಡಿ ಗ್ರಾಮದಲ್ಲಿ ಕದಂಬರ ಕಾಲದ ಶಾಸನವೊಂದು ಕನ್ನಡ ಭಾಷೆ ಹಾಗೂ ಲಿಪಿಯಲ್ಲಿದೆ. ಇದು ಕನ್ನಡ ಶಾಸನಗಳಲ್ಲೇ ಅತಿ ಪ್ರಾಚೀನ.
- ಶಿವಮೊಗ್ಗ ಜಿಲ್ಲೆಯ ತಾಳಗುಂದ ಎಂಬಲ್ಲಿ ಕದಂಬರ ಕಾಲದ ಸಂಸ್ಕೃತ ಶಾಸನವೊಂದು ದೊರಕಿದೆ. ಇದನ್ನು ಕುಬ್ಬ ಎಂಬ ಕವಿಯು ರಚಿಸಿದನು. ಕರ್ನಾಟಕದ ಸಂಸ್ಕೃತ ಕವಿಗಳಲ್ಲಿ ಈತನೇ ಅತಿ ಪ್ರಾಚೀನನು, ತಾಳಗುಂದ ಶಾಸನವು ಕರ್ನಾಟಕದಲ್ಲಿ ದೊರೆತಿರುವ ಪ್ರಥಮ ಸಂಸ್ಕೃತ ಶಾಸನವಾಗಿದೆ.

ಕದಂಬರು ಕರ್ನಾಟಕದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ವಿಶೇಷ ಕೊಡುಗೆ ನೀಡಿದರು. ಅವರು ಬನವಾಸಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಮಧುಕೇಶ್ವರ ಇಲ್ಲಿಯ ಮುಖ್ಯ ದೇವಾಲಯ, ಮಧುಕೇಶ್ವರ ಕದಂಬ ಅರಸರು ಆರಾಧಿಸುತ್ತಿದ್ದ ದೇವರು. ಬನವಾಸಿಯಲ್ಲಿ ಮನಸೆಳೆಯುವ ಪರಶುರಾಮನ ಮೂರ್ತಿಶಿಲ್ಪವೊಂದಿದೆ.



***ಮಧುಕೇಶ್ವರ ದೇವಾಲಯ, ಬನವಾಸಿ***

© KTBS NOT TO BE REPUBLISHED

## ತಲಕಾಡಿನ ಗಂಗರು



ಗಂಗರ ಲಾಂಛನ–ಆನೆ

ಶ್ರವಣಬೆಳಗೊಳ ಎಂದೊಡನೆ ನೆನಪಾಗುವುದು ಅಲ್ಲಿನ ಬಾಹುಬಲಿ (ಗೊಮ್ಮಟ) ವಿಗ್ರಹ. ಬಾಹುಬಲಿ ತ್ಯಾಗ ಮತ್ತು ವೈರಾಗ್ಯಗಳ ಸಂಕೇತ. ಇವು ಅತಿ ಉನ್ನತ ಭಾರತೀಯ ಮೌಲ್ಯಗಳು.

ಗೊಮ್ಮಟ ಎಂದರೆ ಸುಂದರ ಎಂದರ್ಥ. ಗೊಮ್ಮಟ ಶಿಲ್ಪವು ವಿಶ್ವದಲ್ಲಿಯೇ ಅತ್ಯಂತ ಎತ್ತರದ ಏಕಶಿಲಾ ಶಿಲ್ಪವೆಂದಾಗ ನಾವು ಹೆಮ್ಮೆಪಡುವುದಿಲ್ಲವೆ? ಅಷ್ಟೇ ಅಲ್ಲ, ಅದು ಒಂದು ಸಾವಿರ ವರ್ಷಗಳಷ್ಟು ಪುರಾತನವಾದದ್ದು. ದೊಡ್ಡಬೆಟ್ಟದ ಮೇಲೆ ನಿಂತಿರುವ ವಿಗ್ರಹದ ಎತ್ತರ 17.6 ಮೀ. (58 ಅಡಿ), ಇದನ್ನು ನಿರ್ಮಾಣ ಮಾಡಿಸಿದ ಕೀರ್ತಿ ಚಾವುಂಡರಾಯನಿಗೆ ಸಲ್ಲುತ್ತದೆ. ಈತನು ಗಂಗರಾಜ ನಾಲ್ಕನೇ ರಾಚಮಲ್ಲನ ಮಂತ್ರಿ. ವಿಗ್ರಹ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಸ್ವಾರಸ್ಯವಾದ ಕತೆ ಇಲ್ಲಿದೆ.



ಗೊಮ್ಮಟೇಶ್ವರ ವಿಗ್ರಹ – ತ್ಯಾಗದ ಪ್ರತೀಕ

@KTBS NOT TO BE REPUBLISHED

### ಗುಳ್ಳಕಾಯಜ್ಜಿಯ ಕತೆ

ಚಾವುಂಡರಾಯನಿಗೂ ಗುಳ್ಳಕಾಯಜ್ಜಿಗೂ ಸಂಬಂಧ ಕಲ್ಪಿಸುವ ಕತೆಯೊಂದಿದೆ. ಅದರಂತೆ ಚಾವುಂಡರಾಯನು ಬಾಹುಬಲಿಯ ವಿಗ್ರಹಕ್ಕೆ ಮಸ್ತಕಾಭಿಷೇಕವನ್ನು ಮಾಡಲು ಸಕಲ ಸಿದ್ಧತೆಗಳನ್ನು ಮಾಡಿ, ಹಾಲನ್ನು ವಿಗ್ರಹದ ಮಸ್ತಕದ ಮೇಲೆ ಸುರಿಯಲು ಪ್ರಾರಂಭಿಸಿದ. ಕೊಡಗಟ್ಟಲೆ ಸೇರು ಹಾಲು ಸುರಿದರೂ ಅದು ತೊಡೆಯ ಕೆಳಗೆ ಇಳಿಯಲಿಲ್ಲವಂತೆ. ದುಃಖಿತನಾದ ಚಾವುಂಡರಾಯ ಇದಕ್ಕೆ ಕಾರಣವೇನೆಂದು ತನ್ನ ಗುರುಗಳನ್ನು ಕೇಳಿದ ಗುರುಗಳು ಅಲ್ಲಿಗೆ ಬಂದಿದ್ದ ಮುದುಕಿಯೊಬ್ಬಳು ಗುಳ್ಳದಲ್ಲಿ (ಗುಂಡು ಬದನೆ ಆಕಾರದ ಸಣ್ಣ ಪಾತ್ರೆ) ತಂದ ಹಾಲನ್ನು ಅಭಿಷೇಕ ಮಾಡಬೇಕು ಎಂಬುದಾಗಿ ಆದೇಶ ಮಾಡಿದರು. ಅದರಂತೆ ಅಭಿಷೇಕ ಮಾಡಿದಾಗ ಗುಳ್ಳದ ಹಾಲು ಮಸ್ತಕದಿಂದ ಧಾರಾಕಾರವಾಗಿ ಹರಿದು ವಿಗ್ರಹದ ಪೂರ್ಣ ಮೈ ತೋಯಿಸಿ, ಬೆಟ್ಟದಿಂದ ದಟ್ಟವಾದ ಹಾಲಿನ ತೊರೆಯಾಗಿ ಕೆಳಕ್ಕೆ ಹರಿಯಿತಂತೆ! ಮುದುಕಿಯನ್ನು ಗುಳ್ಳಕಾಯಜ್ಜಿ ಎಂದು ಕರೆಯಲಾಯಿತು. ಅಲ್ಲಿಯ ಪ್ರದೇಶಕ್ಕೆ 'ಬೆಳ್ಗೊಳ (ಬಿಳಿಯ ಕೊಳ, ಹಾಲಿನ ಕೊಳ) ಎಂಬ ಹೆಸರು ಬಂತು. ಅಲ್ಲಿ ಶ್ರವಣರು (ಜೈನ ಯತಿಗಳು) ವಾಸಮಾಡುತ್ತಿದ್ದುದರಿಂದ ಅದು ಶ್ರವಣಬೆಳಗೊಳ ಎಂದಾಯಿತು.

ಗುಳ್ಳಕಾಯಜ್ಜಿಯ ಪ್ರತಿಮೆಯನ್ನು ದೊಡ್ಡ ಬೆಟ್ಟದ ಮೇಲೆ ಈಗಲೂ ಕಾಣಬಹುದು. ಐದು ಅಡಿ ಎತ್ತರದ ಕರಿಯ ಕಲ್ಲಿನ ಈ ಪ್ರತಿಮೆ ಕಲಾತ್ಮಕವಾಗಿದೆ. ಇದನ್ನು ಸಹ ಚಾವುಂಡರಾಯನೇ ನಿರ್ಮಾಣ ಮಾಡಿಸಿದನು.



ಗುಳ್ಳಕಾಯಜ್ಜಿ

ಗಂಗರು ತಲಕಾಡಿನಲ್ಲಿ ಪಾತಾಳೇಶ್ವರ ಮತ್ತು ಮರುಳೇಶ್ವರ, ಕೋಲಾರದಲ್ಲಿ ಕೋಲಾರಮ್ಮ ಮುಂತಾದ ಸುಂದರ ದೇವಸ್ಥಾನಗಳನ್ನು ನಿರ್ಮಾಣ ಮಾಡಿದರು. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಚಾವುಂಡರಾಯ ಬಸದಿಯಿದೆ. ನೂರಾರು ವೀರಗಲ್ಲುಗಳು ಗಂಗರ ಕಾಲದ ವಿಶಿಷ್ಟ ಕೊಡುಗೆ. ಅವು ಯುದ್ಧದಲ್ಲಿ ಮರಣ ಹೊಂದಿದ ವೀರನ ನೆನಪಿಗಾಗಿ ನೆಡುವ ಕಲ್ಲುಗಳು, ವೀರನ ಸಾಹಸಗಳನ್ನು ವರ್ಣಿಸುವ ಬರವಣಿಗೆ ಅಥವಾ ಚಿತ್ರದ ಕೆತ್ತನೆಯನ್ನು ಅಲ್ಲಿ ಕಾಣಬಹುದು.

ಗಂಗವಂಶದ ರಾಜರು ಕನ್ನಡ ನಾಡಿನ ಇತಿಹಾಸದಲ್ಲೇ ಅತೀ ದೀರ್ಘಕಾಲ ಆಳ್ವಿಕೆ ನಡೆಸಿದರು. ಮೈಸೂರು ಜಿಲ್ಲೆಯ ತಲಕಾಡು ಗಂಗರ ರಾಜಧಾನಿ. (ಭೂಪಟ ನೋಡಿ). ತಾವು ಪ್ರಜೆಗಳ ಹಿತರಕ್ಷಣೆಗಾಗಿಯೇ ರಾಜ್ಯಾಡಳಿತವನ್ನು ಮಾಡುತ್ತಿರುವುದಾಗಿ ಶಾಸನಗಳಲ್ಲಿ ರಾಜರು ಸಾರಿ ಹೇಳಿದ್ದಾರೆ. ಗಂಗರ ಲಾಂಛನ ಆನೆ.



*ಚಾವುಂಡರಾಯ ಬಸದಿ, ಶ್ರವಣಬೆಳಗೊಳ*

ದುರ್ವಿನೀತನು ಗಂಗ ರಾಜರಲ್ಲಿ ಶ್ರೇಷ್ಠನು, ಶಾಸನಗಳಲ್ಲಿ ಆತನನ್ನು ಶ್ರೀಕೃಷ್ಣನಿಗೆ ಸಮಾನನೆಂದು ವರ್ಣಿಸಲಾಗಿದೆ. ಆತನು ಓರ್ವ ಮಹಾವಿದ್ವಾಂಸ, ವಿದ್ವಾಂಸರಿಗೆ ಆಶ್ರಯ, ಗೌರವ ನೀಡಿದ. ದಕ್ಷಿಣ ಭಾರತದ ಅತಿ ಶ್ರೇಷ್ಠ ರಾಜರಲ್ಲಿ ಇವನೊಬ್ಬನಾಗಿದ್ದನು.

**ಸಾಹಿತ್ಯ:** ಗಂಗರ ಆಳ್ವಿಕೆಯ ಕಾಲದಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಸಾಕಷ್ಟು ಸಾಹಿತ್ಯ ರಚನೆಯಾಯಿತು. ಗಂಗ ಪ್ರಭುಗಳೇ ಸ್ವತಃ ಗ್ರಂಥ ರಚನೆಯನ್ನು ಮಾಡಿದರು. ಚಾವುಂಡರಾಯನು 'ಚಾವುಂಡರಾಯ ಪುರಾಣ' ಎಂಬ ಕೃತಿಯನ್ನು ರಚಿಸಿದನು. ಇದು ಕನ್ನಡ ಗದ್ಯಸಾಹಿತ್ಯದಲ್ಲಿ ಒಂದು ಪ್ರಮುಖ ಕೃತಿಯಾಗಿದೆ.

@KTBS NOT TO BE REPUBLISHED



ಚಾಳುಕ್ಯರ ಲಾಂಛನ–ವರಾಹ

## ಬಾದಾಮಿಯ ಚಾಳುಕ್ಯರು

ಬಾದಾಮಿಯ ಚಾಳುಕ್ಯರು ಕರ್ನಾಟಕದಲ್ಲಿ ಸುಮಾರು ಎರಡು ಶತಮಾನ ಕಾಲ ವೈಭವದಿಂದ ರಾಜ್ಯಭಾರ ನಡೆಸಿದರು. ಬಾಗಲಕೋಟೆ ಜಿಲ್ಲೆಯ ಬಾದಾಮಿ (ವಾತಾಪಿ) ಚಾಳುಕ್ಯರ ರಾಜಧಾನಿ. ವರಾಹ ಚಾಳುಕ್ಯರ ಲಾಂಛನ.



@KTBS
NOT TO BE REPUBLISHED

**ಇಮ್ಮಡಿ ಪುಲಿಕೇಶಿ:** ಇಮ್ಮಡಿ ಪುಲಿಕೇಶಿಯು ಚಾಳುಕ್ಯ ವಂಶದ ಶ್ರೇಷ್ಠ ಅರಸ. ಪರಾಕ್ರಮಶಾಲಿಯಾಗಿದ್ದ ಈತನು ರಾಜ್ಯ ವಿಸ್ತರಣೆಗಾಗಿ ಅನೇಕ ದಂಡಯಾತ್ರೆಗಳನ್ನು ಕೈಗೊಂಡನು.

ಕದಂಬರು ಮತ್ತು ಗಂಗರು ಪುಲಿಕೇಶಿಗೆ ತಾವಾಗಿಯೇ ಶರಣಾದರು. ಉತ್ತರ ಭಾರತದ ಸಾಮ್ರಾಟ ಹರ್ಷವರ್ಧನನನ್ನು ಪುಲಿಕೇಶಿಯು ನರ್ಮದಾ ತೀರದಲ್ಲಿ ನಡೆದ ಘೋರ ಸಂಗ್ರಾಮದಲ್ಲಿ ಪರಾಜಯಗೊಳಿಸಿದ್ದು ಆತನ ಮಹತ್ಸಾಧನೆಯಾಗಿದೆ. ಈ ನಡುವೆ ಪೂರ್ವ ಪ್ರಾಂತಗಳಾದ ಕೋಸಲ ಮತ್ತು ಕಳಿಂಗ ದೇಶಗಳ ರಾಜರುಗಳು ಯುದ್ಧಗೈಯದೆ ಪುಲಿಕೇಶಿಗೆ ಶರಣಾದರು. ದಕ್ಷಿಣ ಭಾರತದಲ್ಲಿ ಪುಲಿಕೇಶಿಯು ಕಾಂಚಿಯ ಪಲ್ಲವರನ್ನು ಸೋಲಿಸಿದನು. ಅಲ್ಲಿಂದ ಕಾವೇರಿ ನದಿಯನ್ನು ದಾಟಿ ಚೋಳ, ಕೇರಳ ಮತ್ತು ಪಾಂಡ್ಯರನ್ನು ಒಲಿಸಿಕೊಂಡನು. ಹೀಗೆ ನಾಲ್ಕೂ ದಿಕ್ಕುಗಳಲ್ಲಿ ವಿಜಯ ಸಾಧಿಸಿದ ಪುಲಿಕೇಶಿಯು ವಾತಾಪಿಗೆ ಮರಳಿದನು. ಅವನ ಸಾಮ್ರಾಜ್ಯವು ಪಶ್ಚಿಮ ಸಮುದ್ರದಿಂದ ಪೂರ್ವ ಸಮುದ್ರದವರೆಗೂ ಹರಡಿತ್ತು.

ಪುಲಿಕೇಶಿಯ ಕೀರ್ತಿಯು ಭಾರತದ ಹೊರಗೂ ವ್ಯಾಪಿಸಿತ್ತು. ಅವನು ಪರ್ಷಿಯ ದೇಶದ ರಾಜನಾದ ಖುಸ್ರುವಿನಲ್ಲಿಗೆ ನಿಯೋಗವೊಂದನ್ನು ಕಳುಹಿಸಿ ಅಮೂಲ್ಯ ವಸ್ತುಗಳನ್ನೂ ಒಂದು ಉತ್ತಮ ಆನೆಯನ್ನೂ ಉಡುಗೊರೆಯಾಗಿ ನೀಡಿದ್ದನು. ಖುಸ್ರುವು ಒಂದು ಮಿತ್ರ ನಿಯೋಗವನ್ನು ಪುಲಿಕೇಶಿಯ ಆಸ್ಥಾನಕ್ಕೆ ಕಳುಹಿಸಿದನು. ಅಜಂತದ ಗುಹೆಯೊಂದರಲ್ಲಿ ಖುಸ್ರುವೂ ಅವನ ರಾಣಿಯೂ ಪುಲಿಕೇಶಿಯ ರಾಯಭಾರಿಯನ್ನು ಸ್ವಾಗತಿಸುವ ವರ್ಣರಂಜಿತ ಭಿತ್ತಿಚಿತ್ರವಿದೆ.

**ಚಾಳುಕ್ಯರ ವಾಸ್ತುಶಿಲ್ಪ:** ಬಾದಾಮಿ ಚಾಳುಕ್ಯರ ಮುಖ್ಯ ವಾಸ್ತುಶಿಲ್ಪಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ ಮತ್ತು ನಾಗರಾಳ ಎಂಬಲ್ಲಿವೆ. ಐಹೊಳೆ ಮತ್ತು ಬಾದಾಮಿಯಲ್ಲಿ ಚಾಳುಕ್ಯರ ಕಾಲದ ಗುಹಾಲಯಗಳಿವೆ.



*ಬಾದಾಮಿಯ ಗುಹಾಲಯ*

© KTBS NOT TO BE REPUBLISHED



*ನಟರಾಜ, ಬಾದಾಮಿಯ ಗುಹಾಲಯ*

ಐಹೊಳೆಯ ದೇವಾಲಯಗಳಲ್ಲಿ ಸೂರ್ಯ (ಲಾಡ್‌ಖಾನ್), ಮೇಗುತಿ, ಕಾರ್ತಿಕೇಯ (ಹುಚ್ಚಿಮಲ್ಲಿ) ಮತ್ತು ದುರ್ಗ ಮುಖ್ಯವಾದವುಗಳು. ಐಹೊಳೆಯನ್ನು "ದೇವಾಲಯಗಳ ಶಿಲ್ಪದ ತೊಟ್ಟಿಲು" ಎಂಬುದಾಗಿ ಕರೆಯುತ್ತಾರೆ. ಬಾದಾಮಿಯ ಗುಹಾಲಯದಲ್ಲಿರುವ ನಟರಾಜ ಮತ್ತು ವಿಷ್ಣುವಿನ ಉಬ್ಬುಶಿಲ್ಪಗಳು ಅದ್ಭುತವಾಗಿವೆ.

ಪಟ್ಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯವು ಸುಂದರವಾಗಿದ್ದು, ಗಾತ್ರದಲ್ಲಿ ದೊಡ್ಡದಾಗಿದೆ. ಪಟ್ಟದಕಲ್ಲು ವಿಶ್ವಪರಂಪರೆಗೆ ಸೇರಿದ ತಾಣವಾಗಿದೆ.



*ಶೇಷನಾಗನ ಮೇಲೆ ಆಸೀನನಾಗಿರುವ ವಿಷ್ಣು, ಬಾದಾಮಿ ಗುಹಾಲಯ*



*ವಿರೂಪಾಕ್ಷ ದೇವಾಲಯ, ಪಟ್ಟದಕಲ್ಲು*

### ಹೊಸ ಪದ

**ವಿಶ್ವಪರಂಪರೆ ತಾಣ–** ಜಗತ್ತಿನ ಕೆಲವು ಅಪೂರ್ವ, ಅಮೂಲ್ಯ ತಾಣಗಳು ವಿಶ್ವಪರಂಪರೆಗೆ ಸೇರಿದ್ದು ಎಂಬುದಾಗಿ ವಿಶ್ವಸಂಸ್ಥೆ ಘೋಷಣೆ ಮಾಡಿದೆ. ಇವುಗಳಿಗೆ ವಿಶೇಷ ಸಂರಕ್ಷಣೆ ನೀಡಲಾಗುತ್ತದೆ. ಕರ್ನಾಟಕದಲ್ಲಿ ಹಂಪಿ ಮತ್ತು ಪಟ್ಟದಕಲ್ಲು, ವಿಶ್ವಪರಂಪರೆಯ ತಾಣಗಳು.

## ಕಾಂಚಿಯ ಪಲ್ಲವರು

ಪಲ್ಲವ ರಾಜವಂಶವು ದಕ್ಷಿಣ ಭಾರತದ ಒಂದು ಪ್ರಸಿದ್ಧ ರಾಜವಂಶ. ತಮಿಳುನಾಡಿನ ಕಾಂಚಿ ಪಲ್ಲವರ ರಾಜಧಾನಿ. ಅವರು ಸುಮಾರು 300 ವರ್ಷಗಳ ಕಾಲ ಆಳ್ವಿಕೆ ನಡೆಸಿದರು.

**ನರಸಿಂಹವರ್ಮ:** ನರಸಿಂಹವರ್ಮನು ಪಲ್ಲವ ಅರಸರಲ್ಲಿಯೇ ಶ್ರೇಷ್ಠ. ಮಹಾಮಲ್ಲ ಎಂಬುದು ಈತನ ಬಿರುದು. ಪರಾಕ್ರಮಿಯಾಗಿದ್ದ ಈತನು ಚಾಳುಕ್ಯ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ಬಾದಾಮಿಯನ್ನು ಗೆದ್ದುಕೊಂಡನು. ವಿಜಯದ ಸಂಕೇತವಾಗಿ 'ವಾತಾಪಿಕೊಂಡ' ಎಂಬ ಬಿರುದನ್ನು ಧರಿಸಿದನು. ನರಸಿಂಹವರ್ಮನು ಮಾಮಲ್ಲಪುರ (ಈಗಿನ ಮಹಾಬಲಿಪುರಂ) ರೇವುಪಟ್ಟಣವನ್ನು ಸುಂದರ ನಗರವನ್ನಾಗಿ ಅಭಿವೃದ್ಧಿಗೊಳಿಸಿದನು.

**ಶಿಲ್ಪಕಲೆಗೆ ಪಲ್ಲವರ ಕೊಡುಗೆ:** ಶಿಲ್ಪಕಲೆಗೆ ಪಲ್ಲವರು ನೀಡಿದ ಕೊಡುಗೆ ಅಮೂಲ್ಯವಾಗಿದೆ. ಮಹಾಬಲಿಪುರಂ ಎಂಬಲ್ಲಿ ನರಸಿಂಹವರ್ಮನ ಕಾಲದ ಎಂಟು ಏಕಶಿಲಾ ರಥಗಳಿವೆ. ಜಗತ್ಪ್ರಸಿದ್ಧವಾದ ಇವನ್ನು ಒಂದೊಂದೇ ಶಿಲೆಯಲ್ಲಿ ಕೆತ್ತಲಾಗಿದೆ. ಮಹಾಬಲಿಪುರದಲ್ಲಿ 'ಗಂಗಾವತರಣ' ಎಂಬ ಉಬ್ಬುಶಿಲ್ಪ ಇದೆ. ಈ ಕೆತ್ತನೆಯಲ್ಲಿ ಭಗೀರಥನು ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ತರಲು ಪ್ರಯತ್ನಿಸುವ ಚಿತ್ರಣವಿದೆ. ಇದೊಂದು ಪ್ರಸಿದ್ಧ ಉಬ್ಬು ಶಿಲ್ಪವಾಗಿದೆ.

ಪಲ್ಲವರು ಭಾರಿ ಗಾತ್ರದ ದೇವಾಲಯಗಳನ್ನು ಕಟ್ಟಿಸಿದರು. ಅವುಗಳಲ್ಲೊಂದು ಮಹಾಬಲಿಪುರದ ಸಮುದ್ರತೀರದಲ್ಲಿ ನಿರ್ಮಿಸಲಾದ ಶಿವ ದೇವಾಲಯ. ಪಲ್ಲವರು ನಿರ್ಮಾಣ ಮಾಡಿಸಿದ ಇನ್ನೆರಡು ಪ್ರಸಿದ್ಧ ದೇವಾಲಯಗಳೆಂದರೆ ಕಾಂಚಿಯ ಕೈಲಾಸನಾಥ ಹಾಗೂ ವೈಕುಂಠ ಪೆರುಮಾಳ್.



ಮಹಾಬಲಿಪುರಂ ದೇವಾಲಯ

### ಹೊಸ ಪದ

**ಉಬ್ಬುಶಿಲ್ಪ–** ಉಬ್ಬಿ ಮೇಲೆ ಕಾಣುವಂತೆ ಕೆತ್ತಿದ ಶಿಲ್ಪ.

©KTBS NOT TO BE REPUBLISHED

## ರಾಷ್ಟ್ರಕೂಟರು

ಬಾದಾಮಿ ಚಾಳುಕ್ಯರ ಸಾಮ್ರಾಜ್ಯದ ನಂತರ ರಾಷ್ಟ್ರಕೂಟರ ಆಳ್ವಿಕೆ ಪ್ರಾರಂಭವಾಯಿತು. ರಾಷ್ಟ್ರಕೂಟರು ಎಂದಾಕ್ಷಣ ನೆನಪಿಗೆ ಹೊಳೆಯುವುದು – ಕವಿರಾಜಮಾರ್ಗ, ಆದಿಕವಿ ಪಂಪ ಮತ್ತು ಎಲ್ಲೋರದ ಕೈಲಾಸ ದೇವಾಲಯ. ಇಲ್ಲಿಂದಲೇ ಪಾಠ ಪ್ರಾರಂಭಿಸೋಣ.



ರಾಷ್ಟ್ರಕೂಟರ ಲಾಂಛನ

- **'ಕವಿರಾಜಮಾರ್ಗ'** ಎಂಬ ಮಹತ್ವದ ಲಕ್ಷಣಗ್ರಂಥವು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು, ಇದನ್ನು ರಚಿಸಿದವನು **ಶ್ರೀವಿಜಯ**. ಈವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಇದು ಅತ್ಯಂತ ಪ್ರಾಚೀನವಾದುದು. ಇದರ ಕಾಲ 9ನೇ ಶತಮಾನ.

ಲಕ್ಷಣಗ್ರಂಥವೆಂದರೆ ಭಾಷೆ, ಶೈಲಿ, ಛಂದಸ್ಸು ಮುಂತಾದ ಲಕ್ಷಣಗಳನ್ನು ವಿವರಿಸುವ ಗ್ರಂಥ.

• **ಪಂಪ:** ಸಂಸ್ಕೃತಕ್ಕೆ ವಾಲ್ಮೀಕಿಯು ಹೇಗೆ ಆದಿಕವಿಯೋ ಹಾಗೆ ಕನ್ನಡಕ್ಕೆ ಪಂಪನು ಆದಿಕವಿ. ಪಂಪನ ಕಾಲಕ್ಕೆ ಹಿಂದೆ ಕನ್ನಡದಲ್ಲಿ ರಚನೆಯಾಗಿರುವ ಕಾವ್ಯಗಳು ನಮಗೆ ಈವರೆಗೆ ದೊರಕಿಲ್ಲ.

**'ವಿಕ್ರಮಾರ್ಜುನ ವಿಜಯ'** ಪಂಪನ ಮಹಾಕಾವ್ಯ. ಇದು **'ಪಂಪಭಾರತ'**ವೆಂದು ವಿಖ್ಯಾತವಾಗಿದೆ. ಇದರಲ್ಲಿ ಮಹಾಭಾರತದ ಕಥೆಯಿದೆ. ಕನ್ನಡದ ಪ್ರಮುಖ ಕವಿಗಳ ಮೇಲೆ ಪಂಪ ಬೀರಿರುವ ಪ್ರಭಾವ ಅಪಾರವಾಗಿದೆ.

ಪಂಪನು ವೇಮುಲವಾಡದ ಮಾಂಡಲಿಕ ಅರಿಕೇಸರಿಯ ಆಸ್ಥಾನದಲ್ಲಿದ್ದನು.

ಇದೇ ಕಾಲಕ್ಕೆ ಸೇರಿದ **ಪೊನ್ನ** ಕನ್ನಡದ ಮತ್ತೊಬ್ಬ ಮಹಾಕವಿ.

• **ಎಲ್ಲೋರ ಮತ್ತು ಎಲಿಫೆಂಟ**



*ಕೈಲಾಸ ದೇವಾಲಯ, ಎಲ್ಲೋರ*

ಎಲ್ಲೋರದ ಕೈಲಾಸ ದೇವಾಲಯವು ನೂರಡಿ ಎತ್ತರದ ಬಂಡೆಯನ್ನು ಮೇಲಿನಿಂದ ಕೆಳಕ್ಕೆ ಕೊರೆದು ಮಾಡಿರುವ ಏಕಶಿಲಾ ಮಂದಿರವಾಗಿದೆ. ಇದನ್ನು ನಿರ್ಮಿಸಿದ ಕೀರ್ತಿ ರಾಷ್ಟ್ರಕೂಟ ಅರಸ ಒಂದನೇ ಕೃಷ್ಣನಿಗೆ ಸಲ್ಲುತ್ತದೆ. ಪ್ರಪಂಚದಲ್ಲಿ ಇಂಥದ್ದೊಂದು ವಾಸ್ತುಶಿಲ್ಪ ಇನ್ನೆಲ್ಲಿಯೂ ಕಾಣೆವು. ಇಲ್ಲಿನ ಮೂರ್ತಿಶಿಲ್ಪ ವೈಭವವನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಮೂರ್ತಿಶಿಲ್ಪಗಳಲ್ಲಿ ರಾವಣನು ಕೈಲಾಸ ಪರ್ವತವನ್ನೆತ್ತುವ ಕಥಾಪ್ರಸಂಗವು ರಮಣೀಯವಾದುದು.

ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಈಗಿನ ಮಹಾರಾಷ್ಟ್ರದ ಬಹುಭಾಗಗಳು ಸೇರಿದ್ದುವು. ಎಲ್ಲೋರ ಹಾಗೂ ಎಲಿಫೆಂಟಾ ಮಹಾರಾಷ್ಟ್ರದಲ್ಲಿವೆ.

ರಾಷ್ಟ್ರಕೂಟರ ಮೂರ್ತಿಶಿಲ್ಪ ಕಲಾವೈಭವವನ್ನು ಎಲಿಫೆಂಟಾ ಗುಹಾಲಯದಲ್ಲಿ ಕಾಣಬಹುದು. ಎಲಿಫೆಂಟ ಮುಂಬೈ ಬಂದರಿನ ಸಮೀಪವಿರುವ ಒಂದು ಪುಟ್ಟ ದ್ವೀಪ. ಇಲ್ಲಿನ ಭಾರಿ ಗಾತ್ರದ ಮೂರು ಮುಖವುಳ್ಳ ಮಹೇಶಮೂರ್ತಿ ವಿಸ್ಮಯಕರವಾಗಿದೆ.



*ಮಹೇಶಮೂರ್ತಿ, ಎಲಿಫೆಂಟಾ. ಇದನ್ನು 'ತ್ರಿಮೂರ್ತಿ' ಎಂದೂ ಕರೆಯುವುದಿದೆ.*

## ಗಣ್ಯ ಚಕ್ರವರ್ತಿಗಳು

- **ಮೂರನೆಯ ಗೋವಿಂದ:** ಮೂರನೆಯ ಗೋವಿಂದನು ರಾಷ್ಟ್ರಕೂಟ ಸಾಮ್ರಾಟರಲ್ಲಿ ಅತಿ ಗಣ್ಯನು. ಇವನು ದಕ್ಷಿಣ ಭಾರತದ ಎಲ್ಲೆಡೆ ಪ್ರಭುತ್ವ ಸಾಧಿಸಿದನು. ಮುಂದೆ ಹಿಮಾಲಯದ ತಪ್ಪಲಿನವರೆಗೂ ತನ್ನ ಸೈನ್ಯದೊಂದಿಗೆ ಜಯಭೇರಿ ಬಾರಿಸುತ್ತ ಮುನ್ನಡೆದನು. ಈ ಮಹತ್ಸಾಧನೆಯನ್ನು ಅವನ ಆಸ್ಥಾನ ಕವಿಯು "ಗೋವಿಂದನ ಯುದ್ಧದ ಮದ್ದಾನೆಗಳು ಗಂಗಾನದಿಯ ಪುಣ್ಯತೀರ್ಥದ ರುಚಿ ನೋಡಿದವು" ಎಂಬುದಾಗಿ ಮನಮೋಹಕವಾಗಿ ವರ್ಣಿಸಿದ್ದಾನೆ.

- **ಅಮೋಘವರ್ಷ ನೃಪತುಂಗ:** ಅಮೋಘವರ್ಷ ನೃಪತುಂಗನು ಮುಮ್ಮಡಿ ಗೋವಿಂದನ ಮಗ. ಪಟ್ಟಾಭಿಷೇಕವಾದಾಗ ಇವನು ಹದಿನಾಲ್ಕರ ತರುಣ. ಇವನು 60 ವರ್ಷಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸಿದನು. ಸ್ವತಃ ವಿದ್ವಾಂಸನಾಗಿದ್ದ. ಶ್ರೀವಿಜಯ ಅವನ ಆಸ್ಥಾನ ವಿದ್ವಾಂಸ.

NOT TO BE REPUBLISHED

## ರಾಷ್ಟ್ರಕೂಟ ಸಾಮ್ರಾಜ್ಯ




©KTBS NOT TO BE REPUBLISHED

ಅಮೋಘವರ್ಷ ನೃಪತುಂಗನಿಗೆ ಅತ್ಯಂತ ಇಷ್ಟವಾದ ಸಂಗತಿಯೆಂದರೆ ತನ್ನ ಪ್ರಜೆಗಳ ಕ್ಷೇಮ. ಅವನು ಮಾನ್ಯಖೇಟ ಪಟ್ಟಣದ (ಈಗಿನ ಮಳಖೇಡ, ಗುಲ್ಬರ್ಗ ಜಿಲ್ಲೆ) ನಿರ್ಮಾಣ ಮಾಡಿದನು. ಇದು ರಾಷ್ಟ್ರಕೂಟರ ರಾಜಧಾನಿಯಾಯಿತು. ಆ ಕಾಲದ ವಿಶ್ವದ ನಾಲ್ಕು ವಿಶಾಲ ಸಾಮ್ರಾಜ್ಯಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಒಂದಾಗಿತ್ತೆಂದು ವಿದೇಶಿ ಪ್ರವಾಸಿ ಸುಲೈಮಾನ್ ಬರೆದಿದ್ದಾನೆ. (ಉಳಿದವುಗಳೆಂದರೆ ರೋಮನ್, ಅರಬ್ಬ ಮತ್ತು ಚೀನೀ ಸಾಮ್ರಾಜ್ಯಗಳು).

• **ಮೂರನೆಯ ಕೃಷ್ಣ:** ಮೂರನೆಯ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಮತ್ತೊಮ್ಮೆ ಭಾರತದ ರಾಜಕೀಯದಲ್ಲಿ ಅಗ್ರಸ್ಥಾನ ಪಡೆಯಿತು. ಕೃಷ್ಣನು ಚೋಳರನ್ನು ಪರಾಜಯಗೊಳಿಸಿ, ರಾಮೇಶ್ವರದವರೆಗೂ ತನ್ನ ಸೈನ್ಯದೊಂದಿಗೆ ಜಯಭೇರಿ ಬಾರಿಸುತ್ತ ಸಾಗಿ, ಅಲ್ಲೊಂದು ವಿಜಯಸ್ತಂಭವನ್ನೂ ದೇವಾಲಯವನ್ನೂ ಸ್ಥಾಪಿಸಿದನು. ಈತನು ಪಾಂಡ್ಯ, ಚೇರರನ್ನು ಸೋಲಿಸಿದನಲ್ಲದೆ, ಸಿಂಹಳದ ಅರಸನಿಂದ ಕಪ್ಪ ಸಂಗ್ರಹಿಸಿದನು. ಇಷ್ಟೇ ಅಲ್ಲ, ಮೂರನೆಯ ಗೋವಿಂದನಂತೆ ಉತ್ತರ ಭಾರತದಲ್ಲಿಯೂ ಅತ್ಯಂತ ಯಶಸ್ವಿಯಾಗಿ ದಂಡಯಾತ್ರೆ ನಡೆಸಿದನು.

ಕವಿ **ಪೊನ್ನ** ಕೃಷ್ಣನ ಆಶ್ರಯ ಪಡೆದಿದ್ದನು. ಮೂರನೆಯ ಕೃಷ್ಣನ ಅನಂತರ ರಾಷ್ಟ್ರಕೂಟ ಆಳ್ವಿಕೆಯು ಅವನತಿ ಹೊಂದಲಾರಂಭಿಸಿತು.

## ಕಲ್ಯಾಣದ ಚಾಳುಕ್ಯರು

ರಾಷ್ಟ್ರಕೂಟರ ನಂತರ ಚಾಳುಕ್ಯ ವಂಶದವರು ಮತ್ತೊಮ್ಮೆ ಅಧಿಕಾರಕ್ಕೆ ಬಂದರು. ಇವರೇ ಕಲ್ಯಾಣದ ಚಾಳುಕ್ಯರು. ಬೀದರ್ ಜಿಲ್ಲೆಯ ಬಸವಕಲ್ಯಾಣ ಇವರ ರಾಜಧಾನಿ.

**ಆರನೆಯ ವಿಕ್ರಮಾದಿತ್ಯ:** ಆರನೆಯ ವಿಕ್ರಮಾದಿತ್ಯನು ಕಲ್ಯಾಣದ ಚಾಳುಕ್ಯ ವಂಶದ ಅತಿ ಶ್ರೇಷ್ಠ ಚಕ್ರವರ್ತಿ. ಇವರ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಕನ್ನಡನಾಡು ಅಭಿವೃದ್ಧಿ ಕಂಡಿತು. ಇವನು 'ಚಾಳುಕ್ಯ ವಿಕ್ರಮ ಶಕೆ'ಯನ್ನು ಆರಂಭಿಸಿದನು. ವಿಕ್ರಮಾದಿತ್ಯನು ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದನು. ಈತನ ಆಶ್ರಯ ಪಡೆದಿದ್ದ ಪಂಡಿತ **ಬಿಲ್ಹಣನು ವಿಕ್ರಮಾಂಕದೇವಚರಿತ** ಎಂಬ ಮಹಾಕಾವ್ಯವನ್ನು ರಚಿಸಿದನು. ಇದರಲ್ಲಿ ವಿಕ್ರಮಾದಿತ್ಯನ ಜೀವನ ವೃತ್ತಾಂತವಿದೆ. **ವಿಜ್ಞಾನೇಶ್ವರನು** ಆಸ್ಥಾನದ ಇನ್ನೊಬ್ಬ ಶ್ರೇಷ್ಠ ವಿದ್ವಾಂಸ. **ಮಿತಾಕ್ಷರ ಸಂಹಿತೆ** ಈತನ ಕೃತಿ. ಇದು ಹಿಂದೂ ಕಾನೂನು ಪದ್ಧತಿಯ ಪ್ರಮಾಣ ಗ್ರಂಥವೆಂದು ಮನ್ನಣೆ ಪಡೆದಿದೆ.

**ಮುಮ್ಮಡಿ ಸೋಮೇಶ್ವರ:** ವಿಕ್ರಮಾದಿತ್ಯನ ಮಗನಾದ ಮುಮ್ಮಡಿ ಸೋಮೇಶ್ವರನ ಕಾಲದಲ್ಲಿ ಸಾಮ್ರಾಜ್ಯದಲ್ಲಿ ಶಾಂತಿ, ಸಮೃದ್ಧಿ ನೆಲೆಗೊಂಡಿತು. ರಾಜನ ಒಲವು ಸಾಹಿತ್ಯ, ಕಲೆಗಳ ಕಡೆಗಿತ್ತು. ಇವನು **ಮಾನಸೋಲ್ಲಾಸ** ಎಂಬ ಖ್ಯಾತ ಸಂಸ್ಕೃತ ಗ್ರಂಥವನ್ನು ರಚಿಸಿದನು. ಇದರಲ್ಲಿ ಸರ್ವಶಾಸ್ತ್ರಗಳೂ ಅಡಗಿದೆ. ಸೋಮೇಶ್ವರನು ಮಹಾನ್ ವಿದ್ವಾಂಸನಾಗಿದ್ದು, ಸರ್ವಜ್ಞ ಚಕ್ರವರ್ತಿ ಎಂದೇ ಪ್ರಖ್ಯಾತನಾಗಿದ್ದಾನೆ.

©KTBS NOT TO BE REPUBLISHED

**ಸಾಹಿತ್ಯ:** ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು.

• ಕವಿ ಚಕ್ರವರ್ತಿ ಎಂಬ ಬಿರುದು ಗಳಿಸಿದ **ರನ್ನನು** **ಸಾಹಸಭೀಮವಿಜಯ** ಅಥವಾ **ಗದಾಯುದ್ಧ** ಎಂಬ ವೀರಕಾವ್ಯವನ್ನು ರಚಿಸಿದನು. ಪಂಪ, ಪೊನ್ನ ಮತ್ತು ರನ್ನರನ್ನು ಕನ್ನಡ ಸಾಹಿತ್ಯದ ರತ್ನತ್ರಯರೆಂದು ಕರೆಯುತ್ತಾರೆ.

• **ವಚನ ಸಾಹಿತ್ಯ** ಚಾಳುಕ್ಯರ ಕಾಲದ ವಿಶಿಷ್ಟ ಕೊಡುಗೆಯಾಗಿದೆ. ವಚನಕಾರರು ಸರಳ ಕನ್ನಡದಲ್ಲಿ ವಚನಗಳನ್ನು ಬರೆದರು.

ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಇವರು ಈ ಕಾಲದ ಪ್ರಮುಖ ವಚನಕಾರರು.

**ವಾಸ್ತುಶಿಲ್ಪ:** ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದುವು. ಅವು ಲಲಿತಕಲೆಗಳಿಗೂ ಕೇಂದ್ರವಾಗಿದ್ದುವು. ಕೊಪ್ಪಳ ಜಿಲ್ಲೆಯ ಇಟಗಿಯ **ಮಹಾದೇವ ದೇವಾಲಯ** ಈ ಕಾಲದ ಅತ್ಯುತ್ತಮ ವಾಸ್ತುಕೃತಿ. ಇದನ್ನು ಅಲ್ಲಿಯ ಶಾಸನವೊಂದು 'ದೇವಾಲಯಗಳ ಚಕ್ರವರ್ತಿ' ಎಂದು ವರ್ಣಿಸಿದೆ.



*ಮಹಾದೇವ ದೇವಾಲಯ, ಇಟಗಿ*

NOT TO BE REPUBLISHED ©KTBS

**ಕಾಲಗಣನೆ**

| | | |
|---|---|---|
| ರಾಷ್ಟ್ರಕೂಟರ ಆಳ್ವಿಕೆಯ ಕಾಲ | – | ಸುಮಾರು 750ರಿಂದ 950 |
| ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲ | – | ಸುಮಾರು 970ರಿಂದ 1150 |
| ಮೂರನೆಯ ಗೋವಿಂದ | – | 793–814 |
| ಅಮೋಘವರ್ಷ ನೃಪತುಂಗ | – | 814–878 |
| ಮುಮ್ಮಡಿ ಕೃಷ್ಣ | – | 939–967 |
| ಆರನೆಯ ವಿಕ್ರಮಾದಿತ್ಯ | – | 1076–1127 |
| ಚಾಳುಕ್ಯ ವಿಕ್ರಮ ಶಕೆ | – | 1076 |
| ಮುಮ್ಮಡಿ ಸೋಮೇಶ್ವರ | – | 1127–1137 |

# ಹೊಯ್ಸಳರು



ಹೊಯ್ಸಳರ ಲಾಂಛನ

ಮಾವಿನಕೆರೆ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಬೇಲೂರಿನ ಚೆನ್ನಕೇಶವ ದೇವಾಲಯವನ್ನು ನೋಡಲು ನಿರ್ಧರಿಸಿದರು. ಬಸ್ಸನ್ನೇರಿ ದೇವಾಲಯದ ಎದುರು ಬಂದು ನಿಂತಾಗ ಅವರು ಕಂಡದ್ದೇನು? ಹೊಂಬಿಸಿಲಿನಲ್ಲಿ ಕಂಗೊಳಿಸುವ ಶಿಲ್ಪಕಲೆಯ ಮಾಯಾಲೋಕ!

**ಶಿಕ್ಷಕರು :** ಮಕ್ಕಳೇ, ಇದುವೇ ಹೊಯ್ಸಳರ ವಿಶ್ವವಿಖ್ಯಾತ ದೇವಾಲಯ. ಇದರ ಎರಡು ಹೊಸತನವೇನೆಂದರೆ: ಗುಡಿಯನ್ನು ಎತ್ತರದ ಜಗತಿ(ಜಗಲಿ)ಯ ಮೇಲೆ ಕಟ್ಟಿರುವುದು, ಮತ್ತು ಜಗತಿಯು ನಕ್ಷತ್ರಾಕಾರದಲ್ಲಿರುವುದು.

**ವಿದ್ಯಾರ್ಥಿ :** ಜಗತಿಯ ಮೇಲೇಕೆ ಗುಡಿಯನ್ನು ನಿಲ್ಲಿಸಲಾಗಿದೆ?

**ಶಿಕ್ಷಕರು :** ಏಕೆಂದರೆ ಗುಡಿಯ ಭವ್ಯತೆಯು ನೋಡುಗರ ಕಣ್ಣಿಗೆ ಚೆನ್ನಾಗಿ ಕಂಡು ಮನದಟ್ಟಾಗಲಿ ಎಂದು.

**ವಿದ್ಯಾರ್ಥಿ :** ಜಗತಿಯು ನಕ್ಷತ್ರಾಕಾರದಲ್ಲಿದೆಯೇಕೆ?

**ಶಿಕ್ಷಕರು :** ಜಗಲಿ ಮಾತ್ರವಲ್ಲ, ಗುಡಿಯ ಗೋಡೆಗಳು, ಗರ್ಭಗೃಹ ಮತ್ತು ಶಿಖರ ಇವೆಲ್ಲವೂ ನಕ್ಷತ್ರಾಕಾರದಲ್ಲಿವೆ. ಇದರಿಂದ ಅವುಗಳ ಮೈಮೇಲೆ ಬೆಳಕು ನೆರಳು ಚೆಲ್ಲಾಟವಾಡಲು ಅವಕಾಶ ಒದಗಿಸಿದಂತಾಗಿದೆ. ಅಲ್ಲದೆ ಉಬ್ಬು ಶಿಲ್ಪಗಳು ಇನ್ನಷ್ಟು ಹರಿತವಾಗಿ ಎದ್ದುಕಾಣುತ್ತವೆ.

©KTBS NOT TO BE REPUBLISHED



*ಬೇಲೂರಿನ ಚೆನ್ನಕೇಶವ ದೇವಾಲಯ*

ಹೊಯ್ಸಳರು ಅಸಂಖ್ಯ ದೇವಾಲಯಗಳನ್ನು ಬಳಪದ ಮೃದುಕಲ್ಲಿನಿಂದ ರಚಿಸಿದರು. ಶಿಲ್ಪಗಳು ಅಲಂಕರಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಹೊರಗೋಡೆಯ ಕೆಳಗಿನ ಭಾಗದಲ್ಲಿ ಆನೆಗಳು, ಕುದುರೆ ಸವಾರರು, ಲತಾತೋರಣಗಳು, ಸಿಂಹಮುಖ ಮುಂತಾದ ಉಬ್ಬುಶಿಲ್ಪಗಳ ನವಿರಾದ ಪಟ್ಟಿಕೆಗಳಿವೆ. ನಯಗೆಲಸದ ಕೋಮಲ ಶಿಲ್ಪದಲ್ಲಿ ಹೊಯ್ಸಳರನ್ನು ಮೀರಿಸಿದವರಿಲ್ಲ.

**ವಿದ್ಯಾರ್ಥಿ** : ಗುರುಗಳೇ, ಗುಡಿಯೊಳಗೆ ಹೋಗೋಣವೆ?

**ಶಿಕ್ಷಕರು** : ಆಗಬಹುದು. ಒಳಗೆ ಬನ್ನಿ. ಇದು 'ನವರಂಗ'. ಪೂಜಾ ಕಾಲದಲ್ಲಿ ಸಂಗೀತ, ನೃತ್ಯ ಮುಂತಾದ ಕಲಾಸೇವೆಗಾಗಿ ಇರುವ ಸ್ಥಳ. ನವರಂಗದ ನಾಲ್ಕು ಕಂಬಗಳನ್ನು ಗಮನಿಸಿ. ಇವು ಚರಕಿಯಂತ್ರದ (ಕಡೆತಯಂತ್ರ) ಮೂಲಕ ಮಾಡಿರುವ ಕಂಬಗಳು. ಕಂಬಗಳು ಕನ್ನಡಿಯಂತೆ ಹೊಳೆಯುತ್ತಿವೆಯಲ್ಲವೆ? ನವರಂಗದ ಚಾವಣಿಯನ್ನೊಮ್ಮೆ ತಲೆಎತ್ತಿ ನೋಡಿ. ಇದನ್ನು 'ಭುವನೇಶ್ವರಿ' ಎನ್ನುವರು. ಭುವನೇಶ್ವರಿಯ ಶಿಲ್ಪವಿನ್ಯಾಸ ಅದೆಷ್ಟು ಅನುಪಮ!



*ಭುವನೇಶ್ವರಿ, ಬೇಲೂರು*

ಮಕ್ಕಳೇ, ಇನ್ನೂ ಒಳಬನ್ನಿ. ಇದು ಗರ್ಭಗುಡಿ. ಇಲ್ಲಿನ ಸುಂದರವಾದ ವಿಜಯನಾರಾಯಣನ ಮೂರ್ತಿಯನ್ನು ನೋಡಿ. ಬೇಲೂರು ದೇವಾಲಯದ ಮುಖ್ಯವಾದ ಆಕರ್ಷಣೆಯೆಂದರೆ ಮದನಿಕೆ ವಿಗ್ರಹಗಳು ಮತ್ತು ನಾನಾ ಭಂಗಿಗಳಲ್ಲಿರುವ ರಮ್ಯವಾದ ಸ್ತ್ರೀವಿಗ್ರಹಗಳು.



ಮದನಿಕೆ

**ವಿದ್ಯಾರ್ಥಿ** : ಹೊಯ್ಸಳ ಮಂದಿರಗಳನ್ನು ಕಟ್ಟಿದ ಶಿಲ್ಪಿ ಜಕಣಾಚಾರಿ ಎಂದು ಹೇಳುವರಲ್ಲ. ಅವನ ಬಗ್ಗೆ ಹೇಳಿರಿ.

**ಶಿಕ್ಷಕರು** : ಜಕಣಾಚಾರಿಯ ಬಗ್ಗೆ ಖಚಿತವಾಗಿ ಏನೂ ತಿಳಿದು ಬಂದಿಲ್ಲವಾದರೂ ಅವನ ಕುರಿತಾದ ಐತಿಹ್ಯವೊಂದಿದೆ.

**ಜಕಣಾಚಾರಿ:** ಜಕಣಾಚಾರಿ ತನ್ನ ಹೆಂಡತಿ ಮತ್ತು ಗಂಡು ಮಗುವನ್ನು ಬಿಟ್ಟು ಊರೂರು ಅಲೆಯುತ್ತ ಅಲ್ಲಲ್ಲಿ ದೇವಾಲಯಗಳನ್ನು ನಿರ್ಮಿಸುತ್ತ ಹತ್ತಾರು ವರ್ಷಗಳನ್ನು ಕಳೆದನಂತೆ. ಒಮ್ಮೆ ಅವನು ಹೊಯ್ಸಳ ರಾಜಧಾನಿಯಲ್ಲಿ ದೇವಾಲಯವೊಂದನ್ನು ನಿರ್ಮಾಣ ಮಾಡುತ್ತಿದ್ದಾಗ ಅವನ ಮಗ ಡಂಕಣಾಚಾರಿ ತಂದೆಯನ್ನು ಹುಡುಕುತ್ತಾ ಅಲೆದಾಡಿ ಅಲ್ಲಿಗೆ ಬಂದ. ಇವನೂ ಶಿಲ್ಪ ವಿದ್ಯೆಯಲ್ಲಿ ಪ್ರವೀಣನಾಗಿದ್ದ. ಮಂದಿರದಲ್ಲಿ ಪ್ರತಿಷ್ಠೆ ಮಾಡಲು ಜಕಣಾಚಾರಿ ಸಿದ್ಧಪಡಿಸಿಟ್ಟಿದ್ದ ಮೂರ್ತಿಯನ್ನು ಕಂಡ. ಅದರಲ್ಲಿ ದೋಷವಿದೆಯೆಂದು ಡಂಕಣಾಚಾರಿ ಹೇಳಿದಾಗ, ಹಾಗೆಂದು ತೋರಿಸಿಕೊಟ್ಟರೆ ತನ್ನ ಕೈಯನ್ನು ಕತ್ತರಿಸಿಕೊಳ್ಳುವುದಾಗಿ ಜಕಣಾಚಾರಿ ಪಣತೊಟ್ಟ. ಚಂದನವನ್ನು ತೇಯ್ದು ಮೂರ್ತಿಯ ಹೊಟ್ಟೆಯ ಭಾಗಕ್ಕೆ ಬಳಿದಾಗ ಚಂದನ ಹೊಕ್ಕಳಿನ ಭಾಗದಲ್ಲಿ ಮಾತ್ರ ಹಸಿಯಾಗಿ ಉಳಿಯಿತು. ಆ ಭಾಗದಲ್ಲಿ ವಿಗ್ರಹವನ್ನು ಒಡೆದಾಗ ಅದು ಟೊಳ್ಳಾಗಿದ್ದುದನ್ನೂ, ಅದರಲ್ಲಿ ಸ್ವಲ್ಪ ನೀರು, ಮರಳು ಮತ್ತು ಕಪ್ಪೆ ಇದ್ದುದನ್ನೂ ಕಂಡ ಜಕಣಾಚಾರಿ ತನ್ನ ಕೈಯನ್ನು ತತ್‌ಕ್ಷಣ ಕತ್ತರಿಸಿಕೊಂಡ. ಜಕಣಾಚಾರಿ ತನ್ನ ತಂದೆಯೆಂದು ಡಂಕಣಾಚಾರಿಗೂ, ಆ ಹುಡುಗ ತನ್ನ ಮಗನೆಂದು ಜಕಣಾಚಾರಿಗೂ ತಿಳಿದದ್ದು ಆಮೇಲೆಯೇ. ಮುಂದೆ ಜಕಣಾಚಾರಿ ತನ್ನ ಹುಟ್ಟೂರಿನಲ್ಲಿ ಒಂದೇ ಕೈಯಲ್ಲಿ ಕೇಶವ ದೇವಾಲಯವನ್ನು ಕಟ್ಟಿದ. ಅದು ಪೂರೈಸುತ್ತ ಬಂದ ಹಾಗೆ ಅವನ ಕೈ ಮೊದಲಿನಂತೆ ಬೆಳೆಯಿತಂತೆ!

**ಶಿಕ್ಷಕರು** : ಹೊತ್ತು ಏರುತ್ತಿದೆ. ಇನ್ನು ಹೊರಡೋಣ.

**ವಿದ್ಯಾರ್ಥಿ** : ಆಗಬಹುದು, ಗುರುಗಳೆ.

ಹೊಯ್ಸಳ ಶೈಲಿಯ ನೂರಾರು ದೇವಾಲಯಗಳಿವೆ. ಅವುಗಳಲ್ಲಿ ಹಾಸನ ಜಿಲ್ಲೆಯ ಬೇಲೂರು ಮತ್ತು ಹಳೇಬೀಡು ಮತ್ತು ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿರುವ ದೇವಾಲಯಗಳು ಅತ್ಯಂತ ಶ್ರೇಷ್ಠವಾಗಿವೆ. ಹೊಯ್ಸಳರ ಬಹುತೇಕ ದೇವಾಲಯಗಳು ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿವೆ.

©KTBS NOT TO BE REPUBLISHED



*ಕೇಶವ ದೇವಾಲಯ, ಸೋಮನಾಥಪುರ*

ಹಳೇಬೀಡಿನಲ್ಲಿರುವ ವಿಶಾಲವಾದ ಪ್ರಾಚೀನ ಕೆರೆಯಿಂದಲೇ ಇದಕ್ಕೆ 'ದೋರಸಮುದ್ರ' ಎಂಬ ಹೆಸರಾಯಿತು. ದೋರಸಮುದ್ರವನ್ನು ದಿಲ್ಲಿಯ ಸುಲ್ತಾನ್ ಅಲಾವುದ್ದೀನನ ದಂಡನಾಯಕ ಮಲ್ಲಿಕ್ ಕಾಫರ್ ಕೊಳ್ಳೆಹೊಡೆದ (1310). ಬಳಿಕ ಅದು ಮತ್ತೆ ಚೇತರಿಸಿಕೊಳ್ಳಲಿಲ್ಲ. ಅದು 'ಹಳೇಬೀಡು' ಆಯಿತು.

ಹೊಯ್ಸಳರು ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡಿನ ಭೌಗೋಳಿಕ ಪ್ರದೇಶಗಳು ಸೇರಿದಂತೆ ವಿಶಾಲ ಪ್ರದೇಶವನ್ನು ಮೂರು ಶತಮಾನಗಳಿಗೂ ಹೆಚ್ಚುಕಾಲ ವೈಭವಪೂರ್ಣವಾಗಿ ಆಳಿದರು. ಪ್ರಾರಂಭದಲ್ಲಿ ಬೇಲೂರು, ಅನಂತರ ದೋರಸಮುದ್ರ ಅವರ ರಾಜಧಾನಿಯಾಗಿತ್ತು. ಹುಲಿಯನ್ನು ಕೊಲ್ಲುವ ಸಳನ ಚಿತ್ರವೇ ಹೊಯ್ಸಳರ ಲಾಂಛನ.

## ಹೊಯ್ಸಳ ರಾಜವಂಶದ ಪ್ರಮುಖ ಅರಸರು

- **ವಿಷ್ಣುವರ್ಧನ:** ವಿಷ್ಣುವರ್ಧನನು ಹೊಯ್ಸಳ ವಂಶದ ಗಣ್ಯ ರಾಜ. ಅವನು ಚೋಳ ಮತ್ತು ಪಾಂಡ್ಯರನ್ನು ಸೋಲಿಸಿ ಅವರ ವಶದಲ್ಲಿದ್ದ ಕನ್ನಡ ಪ್ರದೇಶಗಳನ್ನು ಗೆದ್ದುಕೊಂಡನು. ಈತನು ಜೈನಮತೀಯನಾಗಿದ್ದು, ಅನಂತರ ಶ್ರೀವೈಷ್ಣವ ಪಂಥವನ್ನು ಸ್ವೀಕರಿಸಿದನು. ಈತನ ರಾಣಿ ಶಾಂತಲೆಯು ಜೈನಮತದಲ್ಲಿಯೇ ಮುಂದುವರಿದಳು. ಧರ್ಮಸಹಿಷ್ಣುವಾಗಿದ್ದ ಈತ ಶೈವ ಮತ್ತು ಜೈನ ಮತಗಳಿಗೆ ಉದಾರ ಪ್ರೋತ್ಸಾಹ ನೀಡಿದನು.

- **ಮೂರನೆಯ ಬಲ್ಲಾಳ:** ಮೂರನೆಯ ಬಲ್ಲಾಳನು ಹೊಯ್ಸಳ ವಂಶದ ಕೊನೆಯ ಪ್ರಮುಖ ಅರಸ. ಇವನು ಐವತ್ತು ವರ್ಷಗಳಷ್ಟು ಕಾಲ ಸುದೀರ್ಘ ಆಳ್ವಿಕೆ ನಡೆಸಿದ. ಇವನ ಕಾಲದಲ್ಲಿ ದಿಲ್ಲಿಯ ಸುಲ್ತಾನರು ಮೇಲಿಂದ ಮೇಲೆ ದಕ್ಷಿಣ ಭಾರತದ ರಾಜ್ಯಗಳ ಮೇಲೆ ದಂಡೆತ್ತಿ ಬಂದರು. ದೇವಾಲಯಗಳು ಭಗ್ನಗೊಂಡವು. ಅಲ್ಲಿನ ಸಂಪತ್ತು ಸೂರೆಯಾಯಿತು.

ಆಕ್ರಮಣಗಳ ಪರಿಣಾಮವಾಗಿ ದಕ್ಷಿಣ ಭಾರತದ ಪ್ರಮುಖ ಅರಸು ಮನೆತನಗಳು ಕಣ್ಮರೆಯಾದವು. ಆದರೆ ಸುಲ್ತಾನರು ಹೊಯ್ಸಳ ರಾಜ್ಯವನ್ನು ಮಾತ್ರವೇ ಹತ್ತಿಕ್ಕದೆ ಹೋದರು. ಈ ಘೋರ ವಿಪತ್ತನ್ನು ಮೂರನೇ ಬಲ್ಲಾಳನೊಬ್ಬನೇ ಎದುರಿಸಬೇಕಾಯಿತು.

ಈ ನಡುವೆ ದಿಲ್ಲಿಯ ಪ್ರತಿನಿಧಿಯಾಗಿದ್ದ ಮಧುರೆಯ ಸುಲ್ತಾನನ ಕ್ರೌರ್ಯ ಹೆಚ್ಚಿತು. ವಯಸ್ಸಾಗಿದ್ದರೂ ಬಲ್ಲಾಳನು ಅವನನ್ನು ದಂಡಿಸಲು ಹೋದನು. ಯುದ್ಧದಲ್ಲಿ ಸುಲ್ತಾನನು ಮೋಸದಿಂದ ಬಲ್ಲಾಳನನ್ನು ಸೆರೆಹಿಡಿದು ಕ್ರೂರತನದಿಂದ ಕೊಲ್ಲಿಸಿದನು. ಪರಕೀಯರ ಆಕ್ರಮಣದ ಸಂಧಿಕಾಲದ ಕತ್ತಲಲ್ಲಿ ಮೂರನೇ ಬಲ್ಲಾಳನು ಏಕಾಂಗಿಯಾಗಿ ಬೆಳಗಿದ ಬೆಳ್ಳಿಯಂತಾಗಿದ್ದಾನೆ. ನಂತರ ಅವನ ಮಗ ನಾಲ್ಕನೇ ಬಲ್ಲಾಳನು ಸಾ.ಶ. 1346ರಲ್ಲಿ ಮಧುರೆಯ ಸುಲ್ತಾನನಿಂದ ಹತನಾದಾಗ ಹೊಯ್ಸಳ ಅರಸೊತ್ತಿಗೆ ಅಳಿಯಿತು. ಆಗಲೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗಿತ್ತು.

©KTBS NOT TO BE REPUBLISHED



ಹೊಯ್ಸಳ ವಿಷ್ಣುವರ್ಧನನ ರಾಜ್ಯ
(12ನೇ ಶತಮಾನ)
ನವಸಾರಿಕಾ
ದೇವಲಾಲಿ
ದೌಲತಾಬಾದ್
ಸಂಗಮನೇರ
ಓರಂಗಲ್ಲು
ಕಲ್ಯಾಣ
ಪಂಢರಾಪುರ
ಮಂಗಳವೇಢೆ
ಬಾಗೇವಾಡಿ
ಕೂಡಲಸಂಗಮ
ಅಣ್ಣಿಗೇರಿ
ಲಕ್ಕುಂಡಿ
ಸೊರಟೂರು
ಇಟಗಿ
ಬಳ್ಳಿಗಾವೆ
ಅರಸೀಕೆರೆ
ಹಳೇಬೀಡು
ಬೇಲೂರು
ಕಾಂಚಿ
ಬಸರಾಳು
ಸೋಮನಾಥಪುರ
ಶ್ರೀರಂಗ
ಅರಬ್ಬೀ ಸಮುದ್ರ
ಬಂಗಾಳ ಕೊಲ್ಲಿ
ಉ
SKETCH MAP NOT TO SCALE
ಹಿಂದೂ ಮಹಾಸಾಗರ

## ಕನ್ನಡ ಸಾಹಿತ್ಯಕ್ಕೆ ಹೊಯ್ಸಳರ ಕೊಡುಗೆ

**ಜನ್ನ, ಹರಿಹರ ಮತ್ತು ರಾಘವಾಂಕ** ಇವರು ಹೊಯ್ಸಳರ ಕಾಲದ ಶ್ರೇಷ್ಠ ಕವಿಗಳು. ಜನ್ನನು ಆ ಕಾಲದ ಅತ್ಯಂತ ಶ್ರೇಷ್ಠ ಕವಿ. ಕವಿಚಕ್ರವರ್ತಿಯೆಂಬ ಬಿರುದು ಇವನಿಗಿತ್ತು. ಹರಿಹರನು ರಗಳೆಗಳನ್ನು ಮತ್ತು ಮಹಾಕಾವ್ಯವನ್ನು ಬರೆದನು. ರಾಘವಾಂಕನು ಅನೇಕ ಕಾವ್ಯಗಳನ್ನು ರಚಿಸಿದನು. ಇವು ಭಾಷೆಯಲ್ಲಿನ ಹೊಸ ಬೆಳವಣಿಗೆಗೆ ದಾರಿಮಾಡಿಕೊಟ್ಟವು.

ಆಂಡಯ್ಯನು ಅಚ್ಚಕನ್ನಡದಲ್ಲಿ ಕೃತಿ ರಚಿಸಿದನು. ಇದೇ ಕಾಲದಲ್ಲಿ ಬಸವೇಶ್ವರ ಮತ್ತಿತರ ಶರಣರ ವಚನಗಳು ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದವು.

ಕವಿ, ಕಾವ್ಯಗಳು: ಜನ್ನ – 'ಯಶೋಧರ ಚರಿತ'. ಹರಿಹರ – 'ಗಿರಿಜಾ ಕಲ್ಯಾಣ'. ರಾಘವಾಂಕ – 'ಹರಿಶ್ಚಂದ್ರ ಕಾವ್ಯ'. ಆಂಡಯ್ಯ – 'ಕಬ್ಬಿಗರ ಕಾವಂ'

## ಚೋಳರು



*ಚಿತ್ರ 1*



*ಚಿತ್ರ 2*

ಚೋಳರ ಕಾಲದ ಮೇಲಿನ ಕಂಚುಶಿಲ್ಪಗಳನ್ನು ಗುರುತಿಸಬಲ್ಲಿರಾ?

ಇವೇ ನಟರಾಜ ಮತ್ತು ಕಾಳಿಂಗನ ಮೇಲೆ ನಲಿದಾಡುವ ಬಾಲಮುರಳೀ ಕೃಷ್ಣ. ಕಂಚುಶಿಲ್ಪ ಚೋಳರು ಭಾರತೀಯ ಮೂರ್ತಿಶಿಲ್ಪಕ್ಕೆ ನೀಡಿದ ಅಪೂರ್ವ ಕೊಡುಗೆಯಾಗಿದೆ.

ತಾಮ್ರ ಮತ್ತು ತವರ ಇವೆರಡರ ಮಿಶ್ರಲೋಹವೇ ಕಂಚು. ಕಂಚು ಗಟ್ಟಿಯಾಗಿದ್ದು ಹೊಳಪು ಹೊಂದಿದೆ. ಅಚ್ಚುಗಳಲ್ಲಿ ಕಂಚನ್ನು ಎರಕಹೊಯ್ದು ಕಂಚಿನ ವಿಗ್ರಹಗಳನ್ನು ತಯಾರಿಸಲಾಗುತ್ತದೆ. ಈ ವಿಧಾನ ಇಂದಿಗೂ ರೂಢಿಯಲ್ಲಿದೆ.

ಚೋಳರು ವಾಸ್ತುಶಿಲ್ಪ ಕ್ಷೇತ್ರಕ್ಕೆ ಕೂಡ ವಿಶೇಷ ಕೊಡುಗೆ ನೀಡಿದರು. ತಂಜಾವೂರಿನ ಬೃಹದೀಶ್ವರ ಮಂದಿರ ಚೋಳರ ವಿಶ್ವವಿಖ್ಯಾತ ವಾಸ್ತುಕೃತಿಯಾಗಿದೆ. ಇದು ಒಂದು ಸಾವಿರ ವರ್ಷಗಳಷ್ಟು ಹಿಂದಿನದು.

©KTBS NOT TO BE REPUBLISHED

ಬೃಹದೀಶ್ವರ ದೇವಾಲಯದ ವಿಮಾನವನ್ನು ಗಮನಿಸಿ. ವಿಮಾನವೆಂದರೆ ಗರ್ಭಗುಡಿಯ ಮೇಲಿರುವ ಗೋಪುರ. ಈ ದೇವಾಲಯದ ವಿಮಾನವು ಹದಿಮೂರು ಅಂತಸ್ತುಗಳಲ್ಲಿ ಮೇಲೆದ್ದು ಗಗನವನ್ನು ಮುಟ್ಟುವಂತಿದೆ. ವಿಮಾನದ ಎತ್ತರ 61 ಮೀ. (200 ಅಡಿ). ಬೃಹದೀಶ್ವರ ಭಾರತದಲ್ಲಿಯೇ ಎತ್ತರದ ಹಾಗೂ ಗಾತ್ರದಲ್ಲಿ ಅತಿ ದೊಡ್ಡದಾದ ದೇವಾಲಯವಾಗಿದೆ. ವಿಶ್ವಪರಂಪರೆಯ ತಾಣವೆಂದು ಇದು ಮನ್ನಣೆ ಪಡೆದಿದೆ.



*ಬೃಹದೀಶ್ವರ ದೇವಾಲಯ, ತಂಜಾವೂರು*

ಎಲ್ಲ ಶಿವಾಲಯಗಳ ಮುಂಭಾಗದಲ್ಲಿ ನಂದಿ ವಿಗ್ರಹ ಇರುವುದು ವಾಸ್ತುಶಿಲ್ಪದ ಒಂದು ಲಕ್ಷಣವಾಗಿದೆ. ಇಲ್ಲಿನ ನಂದಿ ವಿಗ್ರಹವು ದಕ್ಷಿಣ ಭಾರತದಲ್ಲೇ ಗಾತ್ರದಲ್ಲಿ ದೊಡ್ಡದು. ಚೋಳರ ಇನ್ನೊಂದು ಬೃಹತ್ ದೇವಾಲಯವೆಂದರೆ ಗಂಗೈಕೊಂಡ ಚೋಳಪುರಂ ಎಂಬಲ್ಲಿರುವ ಶಿವಮಂದಿರ.

ಭಾರತ ರಿಸರ್ವ್ ಬ್ಯಾಂಕ್ 2010ರಲ್ಲಿ ರೂ. 1000 ಮುಖಬೆಲೆಯ "ಸಹಸ್ರವರ್ಷ ತುಂಬಿರುವ ಬೃಹದೀಶ್ವರ ದೇವಾಲಯ" ಎಂಬ ನಾಣ್ಯವನ್ನು ಹೊರತಂದಿದೆ.

## ಪ್ರಮುಖ ಚೋಳ ಸಾಮ್ರಾಟರು

ಚೋಳರು ದಕ್ಷಿಣ ಭಾರತದ ಪ್ರಬಲ ರಾಜಕೀಯ ಶಕ್ತಿಯಾಗಿ ಸುಮಾರು ನಾಲ್ಕು ಶತಮಾನಗಳ ಕಾಲ ಮೆರೆದರು. ತಂಜಾವೂರು (ತಮಿಳುನಾಡು) ಚೋಳರ ರಾಜಧಾನಿ. ಚೋಳ ಸಾಮ್ರಾಟರಲ್ಲಿ ರಾಜರಾಜ ಮತ್ತು ರಾಜೇಂದ್ರ ಪ್ರಮುಖರು.



@KTBS NOT TO BE REPUBLISHED

• **ರಾಜರಾಜ ಚೋಳ:** ರಾಜರಾಜನು ಪರಾಕ್ರಮಿ ಹಾಗೂ ದಕ್ಷ ಆಡಳಿತಗಾರನಾಗಿದ್ದನು. ವಿಶಾಲವಾಗಿದ್ದ ಇವನ ಸಾಮ್ರಾಜ್ಯವು ತುಂಗಭದ್ರಾ ನದಿಯ ದಕ್ಷಿಣಕ್ಕಿದ್ದ ಎಲ್ಲಾ ಪ್ರದೇಶಗಳು, ಶ್ರೀಲಂಕಾ ಮತ್ತು ಮಾಲ್ದೀವ್ ದ್ವೀಪಗಳನ್ನು ಒಳಗೊಂಡಿತ್ತು. ಸಾಮ್ರಾಜ್ಯದ ರಕ್ಷಣೆಗಾಗಿ ಪ್ರಬಲವಾದ ಭೂಸೇನೆ ಮತ್ತು ನೌಕಾದಳವನ್ನು ಇವನು ಕಟ್ಟಿದನು. ಬೃಹದೀಶ್ವರ ದೇವಾಲಯವು ರಾಜರಾಜನ ಕೊಡುಗೆಯಾಗಿದೆ.

• **ರಾಜೇಂದ್ರ ಚೋಳ:** ರಾಜರಾಜನ ಅನಂತರ ಅವನ ಮಗ ರಾಜೇಂದ್ರನು ಸಾಮ್ರಾಜ್ಯದ ಉತ್ತರಾಧಿಕಾರಿಯಾದನು. ಉತ್ತರ ಭಾರತದ ಯಶಸ್ವೀ ದಂಡಯಾತ್ರೆಯು ಇವನ ಒಂದು ಮುಖ್ಯ ಸಾಧನೆಯಾಗಿದೆ. ಈ ವಿಜಯದ ನೆನಪಿಗಾಗಿ ರಾಜೇಂದ್ರನು 'ಗಂಗೈಕೊಂಡ' ಎಂಬ ಬಿರುದನ್ನು ಧರಿಸಿದ. ಅಲ್ಲದೆ ಗಂಗೈಕೊಂಡ ಚೋಳಪುರಂ ಎಂಬ ಹೊಸ ರಾಜಧಾನಿಯನ್ನೂ ಅಲ್ಲೊಂದು ಬೃಹತ್ ಶಿವದೇವಾಲಯವನ್ನೂ ನಿರ್ಮಿಸಿದನು. ರಾಜಧಾನಿಯ ಸಮೀಪ ನೀರಾವರಿಗೆ ಯೋಗ್ಯವಾದ 'ಚೋಳಗಂಗಂ' ಎಂಬ ಭಾರಿ ಗಾತ್ರದ ಕೆರೆಯನ್ನು ತೋಡಿಸಿದನು. ಉತ್ತರ ಭಾರತದಿಂದ ಸಂಭ್ರಮದಿಂದ ಹೊತ್ತುತಂದ ಪವಿತ್ರ ಗಂಗಾಜಲವನ್ನು ವಿಧಿವತ್ತಾಗಿ ಕೆರೆಗೆ ಸುರಿಯಲಾಯಿತು. ನಮ್ಮ ಪೂರ್ವಜರಿಗೆ ಗಂಗಾಜಲದ ಬಗ್ಗೆ ಎಂತಹ ಪೂಜ್ಯ ಭಾವನೆ!

> ಆಗ್ನೇಯ ಏಷ್ಯದ ಸುಮಾತ್ರಾದಲ್ಲಿನ ಶ್ರೀವಿಜಯ ರಾಜ್ಯವನ್ನು ಗೆದ್ದುಕೊಂಡಿದ್ದು ರಾಜೇಂದ್ರನ ಇನ್ನೊಂದು ಗಣನೀಯ ಸಾಧನೆಯಾಗಿದೆ.

NOT TO BE REPUBLISHED @KTBS

**ಸಾಹಿತ್ಯ:** ಚೋಳರ ಆಳ್ವಿಕೆಯ ಕಾಲವು ತಮಿಳು ಸಾಹಿತ್ಯ ಮತು ಸಂಸ್ಕೃತಿಯ ಸುವರ್ಣ ಯುಗವಾಗಿತ್ತು. ಅವರ ಕಾಲದಲ್ಲಿ ಭಕ್ತಿ ಸಾಹಿತ್ಯವು ಹುಲುಸಾಗಿ ಬೆಳೆಯಿತು. **'ಪೆರಿಯಪುರಾಣಂ'** ಭಕ್ತಿ ಸಾಹಿತ್ಯದಲ್ಲಿ ಪ್ರಮುಖ ಸ್ಥಾನಪಡೆದಿದೆ. ಇದೇ ಕಾಲಕ್ಕೆ ಸೇರಿದ **ಕಂಬನ್** ಬರೆದಿರುವ ರಾಮಾಯಣವು ಇಂದಿಗೂ ಜನಪ್ರಿಯವಾಗಿದೆ.

**ಗ್ರಾಮಾಡಳಿತ:** ಚೋಳರ ಗ್ರಾಮಾಡಳಿತ ಪದ್ಧತಿಯು ಆದರ್ಶಪ್ರಾಯವಾಗಿತ್ತು. ಗ್ರಾಮಾಡಳಿತವನ್ನು ಆಯಾ ಗ್ರಾಮಸಭೆಗಳೇ ನಡೆಸುತ್ತಿದ್ದವು. ಗ್ರಾಮಸಭೆಯ ಸದಸ್ಯರನ್ನು ಚುನಾಯಿಸಲಾಗುತ್ತಿತ್ತು. ಕೆಲವು ಮಂದಿ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸಿ ಅವುಗಳಿಗೆ ನಿರ್ದಿಷ್ಟವಾದ ಕಾರ್ಯಗಳನ್ನು ಗೊತ್ತುಪಡಿಸಲಾಗುತ್ತಿತ್ತು. ಸಮಿತಿಗಳು ಹಣಕಾಸಿನ ಲೆಕ್ಕವನ್ನು ಒಪ್ಪಿಸಬೇಕಿತ್ತು. ಅನರ್ಹ ಸದಸ್ಯರನ್ನು ಗ್ರಾಮಸಭೆಯಿಂದ ದೂರವಿಡುವ ಕ್ರಮವಿತ್ತು. ಚೋಳ ಗ್ರಾಮಾಡಳಿತ ವ್ಯವಸ್ಥೆಯು ಸಾಮಾನ್ಯವಾಗಿ ಇಂದಿನ ಪಂಚಾಯಿತಿ ವ್ಯವಸ್ಥೆಯಂತಿತ್ತು.

> ಭಾರತದಲ್ಲಿ ಆಡಳಿತ ನಡೆಸಿದ ಬ್ರಿಟಿಷ್ ಅಧಿಕಾರಿಗಳು ಚೋಳರ ದಕ್ಷ ಆಡಳಿತವನ್ನು ಮೆಚ್ಚಿಕೊಂಡು, ಚೋಳರ ಕಾಲದ ಗ್ರಾಮಗಳು 'ಪುಟ್ಟ ಗಣರಾಜ್ಯಗಳು' ಎಂಬಂತೆ ಇದ್ದವೆಂದು ಬಣ್ಣಿಸಿದ್ದಾರೆ.

**ಚಟುವಟಿಕೆ:** ಚೋಳರ ಕಾಲದ ಗ್ರಾಮಾಡಳಿತ ಪದ್ಧತಿಗೂ ಇಂದಿನ ಗ್ರಾಮ ಪಂಚಾಯಿತಿಗಳಿಗೂ ಇರುವ ಸಮಾನ ಲಕ್ಷಣಗಳನ್ನು ಕುರಿತು ಬರೆಯಿರಿ.

**ವ್ಯಾಪಾರ:** ಚೋಳ ಸಾಮ್ರಾಜ್ಯವು ಸಂಪದ್ಭರಿತವಾಗಿತ್ತು. ವಿದೇಶಿ ವ್ಯಾಪಾರವು ಬಿರುಸಾಗಿ ನಡೆಯುತ್ತಿತ್ತು. ಚೀನ, ಸುಮಾತ್ರಾ, ಜಾವಾ ಮತ್ತು ಅರೇಬಿಯ ಮುಂತಾದ ಪ್ರದೇಶಗಳೊಡನೆ ಸಾಮ್ರಾಜ್ಯವು ವ್ಯಾಪಾರ ಸಂಬಂಧವನ್ನಿರಿಸಿಕೊಂಡಿತ್ತು. ವ್ಯಾಪಾರಿ ಸಂಘಗಳು ದೇಶವಿದೇಶಗಳಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದವು.

## ಹೊಸ ಪದಗಳು

**ಕಾಲಂದುಗೆ** – ಕಾಲಿನಲ್ಲಿ ಧರಿಸುವ ಕಡಗ; ನೂಪುರ.

## ಕಾಲಗಣನೆ

| | | |
|---|---|---|
| ಹೊಯ್ಸಳರ ಆಳ್ವಿಕೆಯ ಕಾಲ | – | 1006–1346 |
| ಚೋಳರ ಆಳ್ವಿಕೆಯ ಕಾಲ | – | ಸುಮಾರು 850–1200 |
| ವಿಷ್ಣುವರ್ಧನ | – | ಸುಮಾರು 1108–1141 |
| ಮೂರನೆಯ ಬಲ್ಲಾಳ | – | ಸುಮಾರು 1291–1343 |
| ವಿಜಯನಗರದ ಸ್ಥಾಪನೆ | – | 1336 |
| ರಾಜರಾಜ ಚೋಳ | – | 985–1014 |
| ರಾಜೇಂದ್ರ ಚೋಳ | – | 1015–1044 |

@KTBS NOT TO BE REPUBLISHED

## ನಿಮಗೆ ತಿಳಿದಿರಲಿ

1 ತಿರುಕ್ಕುರಳ್‌ನಲ್ಲಿ 1300 ಪದ್ಯಗಳಿವೆ. ಅದರ ಕೆಲವು ನೀತಿವಾಕ್ಯಗಳು ಇಂತಿವೆ: ಮನಸ್ಸಿನಲ್ಲಿ ಕಳಂಕ ಇಲ್ಲದಿರುವುದೇ ಧರ್ಮ. ಎಲ್ಲ ಮಾನವರು ಹುಟ್ಟಿನಿಂದ ಒಂದೇ. ರಾಜನಿಗೆ ಜಯ ತರುವುದು ಈಟಿಯಲ್ಲ, ಅವನ ನಿಷ್ಪಕ್ಷ ಆಡಳಿತ.

2 ಸಂಗಂ ಸಾಹಿತ್ಯ ರಚನೆ ಸುಮಾರು 2300 ವರ್ಷಗಳ ಹಿಂದಿನಿಂದ ಆರಂಭಗೊಂಡು ಸುಮಾರು 500 ವರ್ಷಗಳಷ್ಟು ಕಾಲ ಮುಂದುವರಿಯಿತು.

3 ಬನವಾಸಿಯು ವೈಜಯಂತಿ ಎಂಬ ಹೆಸರಿನಲ್ಲಿ ಸಾತವಾಹನರ ಪ್ರಾಂತೀಯ ರಾಜಧಾನಿಯಾಗಿತ್ತು. ಸಾತವಾಹನರ ಕಾಲದಲ್ಲಿ ಪ್ರಾಕೃತವು ಜನಪ್ರಿಯ ಭಾಷೆಯಾಗಿತ್ತು.

4 ಸಾತವಾಹನರ ಆಳ್ವಿಕೆ ಸುಮಾರು 2300 ವರ್ಷಗಳ ಹಿಂದಿನಿಂದ ಆರಂಭಗೊಂಡು ಸುಮಾರು ನಾಲ್ಕು ಶತಮಾನ ಕಾಲದವರೆಗೆ ಮುಂದುವರಿಯಿತು.

5 ಕದಂಬರ ಆಳ್ವಿಕೆ ಸುಮಾರು 1650 ವರ್ಷಗಳ ಹಿಂದೆ ಆರಂಭಗೊಂಡಿತು. ಅವರು ಸುಮಾರು 190 ವರ್ಷಗಳ ಕಾಲ ಆಳಿದರು. ಹಲ್ಮಿಡಿ ಮತ್ತು ತಾಳಗುಂದ ಶಾಸನಗಳು ಸುಮಾರು 1550 ವರ್ಷಗಳಷ್ಟು ಹಿಂದಿನವು.

6 ಗಂಗರ ಕಾಲದಲ್ಲಿ ಕೃಷಿಭೂಮಿಯು ಗಣನೀಯವಾಗಿ ವಿಸ್ತರಣೆಗೊಂಡಿತು. ಗಂಗರಾಜರು ಕೆರೆಕಟ್ಟೆಗಳನ್ನು ನಿರ್ಮಿಸಿ ವ್ಯವಸಾಯಕ್ಕೆ ನೆರವಿತ್ತರು. ಸಾಮಾನ್ಯವಾಗಿ ಗ್ರಾಮದಲ್ಲೊಂದು ಕೆರೆ ಇರುತ್ತಿತ್ತು. ಭತ್ತ, ರಾಗಿ, ಜೋಳ, ಹತ್ತಿ ಮುಖ್ಯ ಬೆಳೆಗಳು, ಪಶುಸಂಪತ್ತು ಹೇರಳವಾಗಿತ್ತು. ಮಹಿಷಿ, ಗೋವು, ಅಶ್ವ, ಕುಕ್ಕುಟಗಳು (ಎತ್ತು, ಹಸು, ಕುದುರೆ, ಕೋಳಿ) ರಾಜ್ಯದಲ್ಲಿ ಸಮೃದ್ಧವಾಗಿದ್ದವು.

7 ಗಂಗರ ಕಾಲದಲ್ಲಿ ಕೆಲವೆಡೆ ಸ್ತ್ರೀಯರು ಅಧಿಕಾರಿಗಳಾಗಿದ್ದರು. ಸ್ವಂತವಾಗಿ ದಾನಗಳನ್ನು ನೀಡುತ್ತಿದ್ದರು. ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ ಮತ್ತು ತಾಳ್ಮೆ- ಇವು ಆ ಕಾಲದ ಸಾಮಾಜಿಕ ಮೌಲ್ಯಗಳು.

8 ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಚಂದ್ರಗುಪ್ತ ಬಸದಿಯಿದೆ. ಅದನ್ನು ಚಂದ್ರಗುಪ್ತ ಮೌರ್ಯನು ಕಟ್ಟಿಸಿದನು. ಆದ್ದರಿಂದ ಆ ಚಿಕ್ಕಬೆಟ್ಟಕ್ಕೆ 'ಚಂದ್ರಗಿರಿ' ಎಂಬ ಹೆಸರು ಬಂದಿದೆ. ದೊಡ್ಡಬೆಟ್ಟವನ್ನು ಇಂದ್ರಗಿರಿ' ಎಂದು ಕರೆಯುತ್ತಾರೆ.

9 ಗುಳ್ಳಕಾಯಜ್ಜಿಯ ಕಥೆಯು ಒಂದು ಐತಿಹ್ಯವಾಗಿದೆ. ಐತಿಹ್ಯಗಳ ಮುಖ್ಯ ಆಶಯ ಮೌಲ್ಯ ಪ್ರತಿಪಾದನೆ.

10 ಕರ್ನಾಟಕದಲ್ಲಿ ಕಾರ್ಕಳ (ಉಡುಪಿ ಜಿಲ್ಲೆ), ವೇಣೂರು (ದಕ್ಷಿಣ ಕನ್ನಡ), ಗೊಮ್ಮಟಗಿರಿ (ಮೈಸೂರು ಜಿಲ್ಲೆ), ಬಸ್ತಿಹಳ್ಳಿ (ಮಂಡ್ಯ ಜಿಲ್ಲೆ) ಮತ್ತು ಇತರೆಡೆ ಪ್ರಾಚೀನ ಗೊಮ್ಮಟ ವಿಗ್ರಹಗಳಿವೆ. ಧರ್ಮಸ್ಥಳದ ಗೊಮ್ಮಟ ವಿಗ್ರಹದ ಶಿಲ್ಪಿ ಕಾರ್ಕಳದ ರಂಜಾಳ ಗೋಪಾಲ ಶೆಣೈ.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಶಿಲಪ್ಪದಿಗಾರಂ ಮಹಾಕಾವ್ಯದ ಕಥಾನಾಯಕಿ ಯಾರು?

2 ಸಂಗಂ ಯುಗದ ಎರಡು ಮಹಾಕಾವ್ಯಗಳನ್ನು ಹೆಸರಿಸಿ,

3 ತಿರುಕ್ಕುರಳ್ ಇದನ್ನು ರಚಿಸಿದವರು ಯಾರು?

4 ಸಂಗಂ ಯುಗದ ಶ್ರೇಷ್ಠ ಕವಿ ಯಾರು?

5 ಸಾತವಾಹನ ವಂಶದ ಪ್ರಮುಖ ರಾಜನು ಯಾರು?

6 'ಚೈತ್ಯ' ಎಂದರೇನು?

7 ಸಾತವಾಹನರ ಕಾಲದ ಚೈತ್ಯಗಳು ಎಲ್ಲಿವೆ?

8 ಕರ್ನಾಟಕದಲ್ಲಿ ಸಾತವಾಹನರ ರಚನೆಗಳ ಅವಶೇಷಗಳನ್ನು ಎಲ್ಲಿ ಕಾಣಬಹುದು?

9 'ಶ್ರೇಣಿ' ಎಂದರೇನು?

10 ಸಾತವಾಹನ ಕಾಲದ ಬಂದರುಗಳನ್ನು ಹೆಸರಿಸಿ.

©KTBS NOT TO BE REPUBLISHED

11 ಕದಂಬರ ರಾಜಧಾನಿಯ ಹೆಸರೇನು?

12 ಕದಂಬ ವಂಶದ ಪ್ರಸಿದ್ದ ದೊರೆ ಯಾರು?

13 ಕನ್ನಡದ ಅತಿ ಪ್ರಾಚೀನ ಶಾಸನ ಯಾವುದು?

14 ತಾಳಗುಂದ ಶಾಸನವನ್ನು ರಚಿಸಿದವರಾರು?

15 ಕರ್ನಾಟಕದ ಅತಿ ಪ್ರಾಚೀನ ಸಂಸ್ಕೃತ ಕವಿ ಯಾರು?

16 ಚಾಳುಕ್ಯರ ರಾಜಧಾನಿ ಯಾವುದು ಅದು ಯಾವ ಜಿಲ್ಲೆಯಲ್ಲಿದೆ?

17 ಪುಲಿಕೇಶಿಯು ಸೋಲಿಸಿದ ಉತ್ತರ ಭಾರತದ ಸಾಮ್ರಾಟನು ಯಾರು?

18 ಚಾಳುಕ್ಯರ ಮುಖ್ಯ ವಾಸ್ತುಶಿಲ್ಪಗಳು ಇರುವ ಮೂರು ಸ್ಥಳಗಳನ್ನು ಹೆಸರಿಸಿ.

19 ಯಾವ ಸ್ಥಳವನ್ನು 'ದೇವಾಲಯಗಳ ಶಿಲ್ಪದ ತೊಟ್ಟಿಲು' ಎಂದು ಕರೆಯಲಾಗುತ್ತದೆ?

20 ಕಾಂಚಿಯ ಪಲ್ಲವರ ಪ್ರಸಿದ್ಧ ದೊರೆ ಯಾರು? ಆತನ ಬಿರುದು ಯಾವುದು?

21 ಪಲ್ಲವರ ಕಾಲದ ಏಕಶಿಲಾ ರಥಗಳು ಎಲ್ಲಿವೆ?

22 ಪಲ್ಲವರ ಕಾಲದ ಪ್ರಸಿದ್ಧ ದೇವಾಲಯದ ಹೆಸರೇನು?

23 ಶ್ರವಣಬೆಳಗೊಳದ ಗೊಮ್ಮಟ ವಿಗ್ರಹವನ್ನು ನಿರ್ಮಾಣ ಮಾಡಿಸಿದವನು ಯಾರು?

24 ಗಂಗ ವಂಶದ ಪ್ರಸಿದ್ಧ ದೊರೆ ಯಾರು?

25 ಗಂಗರ ರಾಜಧಾನಿ ತಲಕಾಡು ಯಾವ ಜಿಲ್ಲೆಯಲ್ಲಿದೆ?

26 ಚಾವುಂಡರಾಯನು ರಚಿಸಿದ ಕೃತಿ ಯಾವುದು?

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1 "ಎಲ್ಲ ಮಾನವರು ಹುಟ್ಟಿನಿಂದ ಒಂದೇ" ಎಂಬ ತಿರುವಳ್ಳುವರ್ ಅವರ ಮಾತು ನಮಗೇಕೆ ಮುಖ್ಯವಾಗಿದೆ?

2 ಸಾತವಾಹನರ ಕಾಲದಲ್ಲಿ ಆರ್ಥಿಕ ಸಮೃದ್ಧಿಗೆ ಕಾರಣವಾದ ಅಂಶಗಳು.

3 ಪ್ರಾಚೀನ ರಾಜಮನೆತನಗಳು ಸಾಮಾನ್ಯವಾಗಿ ಯಾವ ಕಾರಣಗಳಿಂದಾಗಿ ಅವನತಿ ಹೊಂದಿವೆ?

4 ಪಂಪ, ಪೊನ್ನ ಮತ್ತು ಶ್ರೀವಿಜಯ ಇವರನ್ನು ಕುರಿತು ಟಿಪ್ಪಣಿ ಬರೆಯಿರಿ.

5 ಎಲ್ಲೋರದ ಕೈಲಾಸ ದೇವಾಲಯ ಮತ್ತು ಎಲಿಫೆಂಟಾದ ಗುಹಾಲಯ ಏಕೆ ಪ್ರಸಿದ್ಧಿ ಪಡೆದಿವೆ?

6 ಮೂರನೆಯ ಗೋವಿಂದನ ಸೈನಿಕ ಸಾಧನೆಗಳನ್ನು ಹೇಳಿ.

7 ಅಮೋಘವರ್ಷ ನೃಪತುಂಗನು ಏಕೆ ಓರ್ವ ಗಣ್ಯ ಸಾಮ್ರಾಟನಾಗಿದ್ದಾನೆ?

8 ಆರನೆಯ ವಿಕ್ರಮಾದಿತ್ಯನನ್ನು ಕಲ್ಯಾಣದ ಚಾಳುಕ್ಯ ವಂಶದ ಅತಿ ಶ್ರೇಷ್ಠ ಚಕ್ರವರ್ತಿ ಎಂಬುದಾಗಿ ಏಕೆ ಕರೆಯಲಾಗುತ್ತದೆ?

NOT TO BE REPUBLISHED ©KTBS

9 'ವಿಕ್ರಮಾಂಕದೇವ ಚರಿತ', 'ಮಿತಾಕ್ಷರ ಸಂಹಿತೆ' ಮತ್ತು 'ಮಾನಸೋಲ್ಲಾಸ' ಈ ಕೃತಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

10 'ದೇವಾಲಯಗಳ ಚಕ್ರವರ್ತಿ' ಎಂದು ಯಾವ ದೇವಾಲಯವನ್ನು ಕರೆಯಲಾಗುತ್ತದೆ? ಏಕೆ?

11 ಹೊಯ್ಸಳ ದೇವಾಲಯಗಳ ಎರಡು ಲಕ್ಷಣಗಳನ್ನು ಹೇಳಿರಿ.

12 'ಭುವನೇಶ್ವರಿ' ಎಂದರೇನು?

13 ಹೊಯ್ಸಳರ ಕೆಲವು ಶ್ರೇಷ್ಠ ದೇವಾಲಯಗಳನ್ನು ಹೆಸರಿಸಿ.

14 ಹೊಯ್ಸಳರ ಆಳ್ವಿಕೆಯ ಕಾಲದ ಶ್ರೇಷ್ಠ ಕವಿಗಳನ್ನು ಹಾಗೂ ಅವರ ಕೃತಿಗಳನ್ನು ಹೆಸರಿಸಿ.

15 ಬೃಹದೀಶ್ವರ ದೇವಾಲಯ ಏಕೆ ಪ್ರಸಿದ್ಧವಾಗಿದೆ?

16 ರಾಜರಾಜ ಚೋಳನ ಸಾಧನೆಗಳು ಯಾವುವು?

17 ಚೋಳ ಕಾಲದ ಗ್ರಾಮಾಡಳಿತ ವ್ಯವಸ್ಥೆಯ ವಿಶೇಷತೆಗಳು ಯಾವುವು?

### ಚಟುವಟಿಕೆಗಳು

1 ಚಾಳುಕ್ಯ ಮತ್ತು ಪಲ್ಲವರ ವಾಸ್ತುಶಿಲ್ಪಗಳ ಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ.

2 ಹರ್ಷವರ್ಧನ ಮತ್ತು ಇಮ್ಮಡಿ ಪುಲಿಕೇಶಿಯ ಜೀವನ ಚರಿತ್ರೆಯನ್ನು ಓದಿ. (ಆಕರ: ಭಾರತ ಭಾರತಿ ಪುಸ್ತಕ ಸಂಪದ).

೩ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

4 ಭೂಪಟದಲ್ಲಿ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ರಾಜಧಾನಿ ಮತ್ತು ವಾಸ್ತುಶಿಲ್ಪ ಕೇಂದ್ರಗಳನ್ನು ಗುರುತಿಸಿ.

5 ಗೊಮ್ಮಟ ವಿಗ್ರಹದ ಚಿಕ್ಕದಾದ ಪ್ರತಿರೂಪವನ್ನು ಜೇಡಿ(ಆವ) ಮಣ್ಣಿನಿಂದ ಅಥವಾ ಇನ್ನಾವುದೇ ವಸ್ತುವಿನಿಂದ ನಿರ್ಮಿಸಿ,

6 ಸಂದರ್ಭ ಒದಗಿ ಬಂದಾಗ ಶ್ರವಣಬೆಳಗೊಳಕ್ಕೆ ಹೋಗಿ ಅಲ್ಲಿಯ ಶಿಲ್ಪ ಕಲಾಕೃತಿಗಳ ವೈಭವವನ್ನು ಸವಿಯಿರಿ.

7 ನಿಮ್ಮ ಸುತ್ತಮುತ್ತಲಿನ ವೀರಗಲ್ಲುಗಳನ್ನು ವೀಕ್ಷಿಸಿ ಮಾಹಿತಿಯನ್ನು ಸಂಗ್ರಹಿಸಿ.

೮ ಹೊಯ್ಸಳ ಮತ್ತು ಚೋಳರ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಗಳ ಭಾವಚಿತ್ರವನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

೯ ಭೂಪಟದಲ್ಲಿ ಹೊಯ್ಸಳ ಮತ್ತು ಚೋಳರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

© KTBS NOT TO BE REPUBLISHED

H6T4W7

# ಪೌರನೀತಿ

## ಅಧ್ಯಾಯ 6

# ಪೌರ ಮತ್ತು ಪೌರತ್ವ

**ಪಾಠದ ಪರಿಚಯ**

ಈ ಪಾಠದಲ್ಲಿ ಪೌರ ಮತ್ತು ಪೌರತ್ವದ ಪರಿಕಲ್ಪನೆಯನ್ನು ವಿವರಿಸುವುದರೊಂದಿಗೆ ಪೌರತ್ವ ಪಡೆಯುವ ವಿಧಾನ ಹಾಗೂ ಪೌರತ್ವ ಕಳೆದುಕೊಳ್ಳುವ ಸಂದರ್ಭಗಳನ್ನು ಸೂಚಿಸಲಾಗಿದೆ. ಕೊನೆಯಲ್ಲಿ ಉತ್ತಮ ಪೌರರ ಲಕ್ಷಣಗಳನ್ನು ಹೇಳಲಾಗಿದೆ.

**ಸಾಮರ್ಥ್ಯಗಳು**

1 ಪೌರ ಮತ್ತು ಪೌರತ್ವದ ಅರ್ಥವನ್ನು ತಿಳಿಯುವುದು.

2 ಪೌರತ್ವವನ್ನು ಪಡೆಯುವ ವಿಧಾನ ಮತ್ತು ಕಳೆದುಕೊಳ್ಳುವ ಸನ್ನಿವೇಶಗಳನ್ನು ಅರ್ಥೈಸಿಕೊಳ್ಳುವುದು.

3 ಉತ್ತಮ ಪೌರರ ಲಕ್ಷಣಗಳನ್ನು ಅರಿಯುವುದು.

@KTBS NOT TO BE REPUBLISHED

**ಪಾಠಪ್ರವೇಶ**



'ಎ' ಮೈಸೂರು ಅರಮನೆ 'ಬಿ'

ಮೇಲಿನ ಚಿತ್ರವನ್ನು ಗಮನಿಸಿ.

1 ಮೈಸೂರು ಅರಮನೆಯನ್ನು ನೋಡಲು ಪ್ರವಾಸಿಗರು ಎಲ್ಲೆಲ್ಲಿಂದ ಬರುತ್ತಾರೆ?

2 'ಎ' ಭಾಗದಲ್ಲಿರುವವರೆಲ್ಲರೂ ಭಾರತೀಯರೇ?

3 ವಿದೇಶಿಯರನ್ನು ನೀನು ಹೇಗೆ ಗುರ್ತಿಸುವೆ?

**ಸರಿತಾಳ ಸಂಶಯಗಳು**

ಸರಿತಾ ದಸರಾ ರಜೆಯಲ್ಲಿ ಬೇಲೂರು, ಹಳೇಬೀಡು ಮತ್ತು ಮೈಸೂರು ನೋಡಲು ತನ್ನ ತಾಯ್ತಂದೆಯೊಂದಿಗೆ ಹೋಗಿದ್ದಳು. ಪ್ರತಿಯೊಂದರ ಬಗ್ಗೆ ಹೆಚ್ಚಿಗೆ ತಿಳಿಯುವ ಕುತೂಹಲದಿಂದ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದಳು. ಮೈಸೂರು ಅರಮನೆಯ ವೀಕ್ಷಣೆಗೆ ಬಂದಾಗ ಅವಳ ಗಮನ ಬೇರೆಡೆಗೆ ಹೋಗಿತ್ತು. ಇದನ್ನು ಗಮನಿಸಿದ ಅವಳ ತಂದೆ ಹೀಗೆ ಪ್ರಶ್ನಿಸಿದರು.

**ತಂದೆ** : ಮಗು, ಯಾರನ್ನು ನೋಡುತ್ತಿರುವೆ?

**ಸರಿತಾ** : ಅಲ್ಲಿ ನೋಡಿ, ಮುಖಚಹರೆ, ಮೈಕಟ್ಟು, ಉಡುಗೆ ತೊಡುಗೆ, ಭಾಷೆ ಎಲ್ಲವೂ ವಿಭಿನ್ನವಾಗಿ ಕಾಣುತ್ತದೆ. ಅಪ್ಪ ಅವರು ಯಾರು?

**ತಂದೆ** : ಹೌದು ಅವರು ಬೇರೆ ದೇಶದ ನಿವಾಸಿಗಳು – ವಿದೇಶಿಯರು. ಭಾರತವನ್ನು ಸುತ್ತಾಡಿ ಹೋಗಲು ಇಲ್ಲಿಗೆ ಬಂದವರು. ಅವರು ಬೇರೆ ದೇಶದ ಪೌರರು.

**ಸರಿತಾ** : ಪೌರರು ಎಂದರೆ ಯಾರು?

**ತಂದೆ** : ನಮ್ಮ ದೇಶ ಭಾರತ. ನಾವು ಭಾರತೀಯರು. ನಮ್ಮ ತಾತ, ಮುತ್ತಾತ ಕೂಡ ಇಲ್ಲಿಯೇ ಹುಟ್ಟಿ ನೆಲೆಸಿದ್ದವರು. ನಾವೆಲ್ಲಾ ಇಲ್ಲಿಯ ಶಾಶ್ವತ ನಿವಾಸಿಗಳು, ಪೌರರು ಒಂದು ದೇಶದ ಶಾಶ್ವತ ನಿವಾಸಿಗಳು. ಅಲ್ಲಿಯೇ ಹುಟ್ಟಿ ಬದುಕುವವರು. ಅವರಿಗೆ ತಮ್ಮ ದೇಶದ ಬಗ್ಗೆ ನಿಷ್ಠೆ, ಗೌರವವಿದೆ.

**ಸರಿತಾ** : ನಮಗೂ ವಿದೇಶಿಯರಿಗೂ ಇರುವ ವ್ಯತ್ಯಾಸವೇನು?

**ತಂದೆ** : ಇಲ್ಲಿಯ ಪೌರರಾದ ನಮಗೆ ಕೆಲವು ಹಕ್ಕುಗಳಿವೆ. ವಿದೇಶಿಯರಿಗೆ ಅಂತಹ ಹಕ್ಕುಗಳಿಲ್ಲ.

**ಸರಿತಾ** : ಪೌರತ್ವ ಎಂದರೇನು?

**ತಂದೆ** : ನಾವೆಲ್ಲರೂ ನಮ್ಮ ಕುಟುಂಬದ ಸದಸ್ಯರಿದ್ದಂತೆ. ಈ ದೇಶದ ಸದಸ್ಯರು ಕೂಡ ಆಗಿದ್ದೇವೆ. ಒಂದು ದೇಶದ ಸದಸ್ಯತ್ವವನ್ನು 'ಪೌರತ್ವ' ಎನ್ನುತ್ತೇವೆ.

©KTBS NOT TO BE REPUBLISHED

**ಸರಿತಾ** : ದೇಶವೊಂದರ ಪೌರತ್ವವನ್ನು ಪಡೆಯುವ ವಿಧಾನಗಳು ಯಾವುವು?

**ತಂದೆ** : ಒಂದು ದೇಶದ ಪೌರತ್ವ ಪಡೆಯಲು ಸಾಮಾನ್ಯವಾಗಿ ಎರಡು ವಿಧಾನಗಳಿವೆ. ಒಂದನೆಯದು – ಒಂದು ದೇಶದಲ್ಲಿ ಹುಟ್ಟಿದ ಮಗು ಆ ದೇಶದ ಪೌರತ್ವವನ್ನು ಸಹಜವಾಗಿಯೇ ಪಡೆಯುತ್ತದೆ. ಇದಕ್ಕೆ ಸಹಜ ಪೌರತ್ವ ಎನ್ನುವರು. ಎರಡನೆಯದು– ಒಬ್ಬ ವ್ಯಕ್ತಿ ತನ್ನ ದೇಶದ ಪೌರತ್ವವನ್ನು ಬಿಟ್ಟುಕೊಟ್ಟು, ಇನ್ನೊಂದು ದೇಶದ ಪೌರತ್ವ ಪಡೆಯುವುದು. ಇದಕ್ಕೆ ಸಹಜೀಕೃತ ಪೌರತ್ವ ಎನ್ನುವರು.

**ಸರಿತಾ** : ಯಾವ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ತನ್ನ ದೇಶದ ಪೌರತ್ವವನ್ನು ಕಳೆದುಕೊಳ್ಳುತ್ತಾನೆ?

**ತಂದೆ** : ತನ್ನ ದೇಶದ ಪೌರತ್ವವನ್ನು ಕಳೆದುಕೊಳ್ಳುವ ಕೆಲವು ಸಂದರ್ಭಗಳಿವೆ ಉದಾಹರಣೆಗೆ ಒಬ್ಬ ವ್ಯಕ್ತಿ ಇನ್ನೊಂದು ದೇಶದ ಪೌರತ್ವವನ್ನು ಪಡೆದುಕೊಂಡನೆಂದಾದರೆ ತನ್ನ ಮೂಲ ದೇಶದ ಪೌರತ್ವವನ್ನು ಕಳೆದುಕೊಳ್ಳುತ್ತಾನೆ. ಏಕಕಾಲದಲ್ಲಿ ಎರಡು ದೇಶಗಳ ಪೌರತ್ವವಿರುವುದು ಸಾಧ್ಯವಿಲ್ಲ.

**ಸರಿತಾ** : ಅಪ್ಪ ನಾನು ಭಾರತವನ್ನು ಪ್ರೀತಿಸುತ್ತೇನೆ. ಭಾರತೀಯ ಪೌರಳಾಗಿಯೇ ಇರುತ್ತೇನೆ.

**ತಂದೆ** : ಒಳ್ಳೆಯದು ಮಗಳೇ, ಬಾ ಅರಮನೆಯ ಒಳಗೆ ನೋಡಿಕೊಂಡು ಬರೋಣ.

## ಉತ್ತಮ ಪೌರನ ಲಕ್ಷಣಗಳು



ಪ್ರತಿಯೊಬ್ಬ ಪೌರನಿಗೂ ತನ್ನ ದೇಶದಲ್ಲಿ ಹಕ್ಕುಗಳಿವೆ ಮತ ಚಲಾಯಿಸುವುದು, ಚುನಾವಣೆಗೆ ನಿಲ್ಲುವುದು, ಸರ್ಕಾರಿ ಸೇವೆ ಸಲ್ಲಿಸುವುದು, ರಕ್ಷಣಾ ಪಡೆ ಸೇರುವುದು ಇವೇ ಮುಂತಾದುವು ಅವನ ಹಕ್ಕುಗಳು. ಇದರೊಂದಿಗೆ ಅವನಿಗೆ ಹೊಣೆಗಾರಿಕೆಯೂ ಮಾಡಬೇಕಾದ ಕೆಲವು ಕರ್ತವ್ಯಗಳೂ ಇವೆ. ಅವುಗಳೆಂದರೆ –

@KTBS NOT TO BE REPUBLISHED

- ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸುವುದು.
- ಚುನಾವಣೆಯಲ್ಲಿ ಮತ ಚಲಾಯಿಸುವುದು.
- ಕಾನೂನನ್ನು ಪಾಲಿಸುವುದು.
- ದೇಶಕ್ಕೆ ಆಪತ್ತು ಬಂದಾಗ ರಕ್ಷಣೆಯ ಕಾರ್ಯದಲ್ಲಿ ಪಾಲ್ಗೊಳ್ಳುವುದು.
- ತೆರಿಗೆಗಳನ್ನು ತಪ್ಪದೇ ಪಾವತಿ ಮಾಡುವುದು.
- ಪರಿಸರ ರಕ್ಷಣೆ ಬಗ್ಗೆ ಕಾಳಜಿ ಇರುವುದು.
- ಲಂಚ ನೀಡದಿರುವುದು ಮತ್ತು ಪಡೆಯದಿರುವುದು.
- ಹಿರಿಯ ನಾಗರಿಕರಿಗೆ ಸಹಾಯ ಮಾಡುವುದು.
- ಸಾರ್ವಜನಿಕ ಹಿತಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಿರುವುದು.
- ಕುಟುಂಬ ಯೋಜನೆ ಸೇರಿದಂತೆ ಜನಕಲ್ಯಾಣ ಯೋಜನೆಗಳಿಗೆ ಬೆಂಬಲ ನೀಡುವುದು.

ಇವು ಕೆಲವು ಕರ್ತವ್ಯಗಳಾಗಿರದೆ ಉತ್ತಮ ಪೌರನ ಲಕ್ಷಣಗಳೂ ಆಗಿವೆ.

### ನಿಮಗೆ ತಿಳಿದಿರಲಿ

1 ನಮ್ಮ ದೇಶದಲ್ಲಿ ಏಕ ಪೌರತ್ವವಿದೆ. ಕರ್ನಾಟಕದ ಪೌರತ್ವ ಅಥವಾ ಕೇರಳದ ಪೌರತ್ವ ಎಂದು ಬೇರೆಯಿಲ್ಲ.

2 ಪೌರನೀತಿಯು ಪೌರರ ಹಕ್ಕು, ಕರ್ತವ್ಯ ಮತ್ತು ಸಾರ್ವಜನಿಕ ಜೀವನದಲ್ಲಿ ಪೌರರು ವಹಿಸಬೇಕಾದ ಪಾತ್ರವನ್ನು ವಿವರಿಸುತ್ತದೆ. ಪೌರನೀತಿಯ ಜ್ಞಾನ ಎಲ್ಲರಿಗೂ ಅವಶ್ಯಕ.

© KTBS NOT TO BE REPUBLISHED

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಪೌರ ಎಂದರೆ ಯಾರು?

2 ನೀನು ಭಾರತೀಯ ಪೌರನೇ? ಹೇಗೆ?

3 ಪೌರತ್ವವನ್ನು ಪಡೆಯುವ ಎರಡು ವಿಧಾನಗಳನ್ನು ತಿಳಿಸಿ.

4 ಉತ್ತಮ ಪೌರರಲ್ಲಿ ಇರಬೇಕಾದ ಲಕ್ಷಣಗಳು ಯಾವುವು?

5 ಹಿರಿಯ ನಾಗರಿಕರಿಗೆ ನೀವು ಯಾವ ರೀತಿಯಲ್ಲಿ ಸಹಾಯ ಮಾಡಬಹುದು?

6 ಸರದಿಯ ಸಾಲನ್ನು ನೀನು ಎಲ್ಲೆಲ್ಲಿ ನೋಡಿರುವಿ? ಸರದಿಯ ಪಾಲನೆಯಿಂದ ಆಗುವ ಅನುಕೂಲಗಳೇನು?

| ಅಧ್ಯಾಯ 7 | # ಪ್ರಜಾಪ್ರಭುತ್ವ |
|---|---|

X2K6S2

**ಪಾಠದ ಪರಿಚಯ**

ಹಿಂದೆ ನಮ್ಮ ದೇಶವನ್ನು ರಾಜರು ಆಳುತ್ತಿದ್ದರು. ಕಾಲಕ್ರಮೇಣ ರಾಜಪ್ರಭುತ್ವ ಅವನತಿಯತ್ತ ಸಾಗಿತು. ಪ್ರಜಾಪ್ರಭುತ್ವ ಆಚರಣೆಗೆ ಬಂತು. ಈ ಬದಲಾವಣೆಗೆ ಕಾರಣಗಳನ್ನು ತಿಳಿಯುತ್ತಾ ಪ್ರಜಾಪ್ರಭುತ್ವದ ಮಹತ್ವ, ಚುನಾವಣೆಗಳ ಪಾತ್ರ ಮತ್ತು ಚುನಾವಣಾ ಪ್ರಕ್ರಿಯೆಗಳ ಕುರಿತಾದ ಒಂದು ಪಕ್ಷಿನೋಟ ಈ ಪಾಠದಲ್ಲಿದೆ

**ಸಾಮರ್ಥ್ಯಗಳು**

1 ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವದ ಅರ್ಥ ಮತ್ತು ವ್ಯತ್ಯಾಸ ತಿಳಿಯುವುದು.

2 ಪ್ರಜಾಪ್ರಭುತ್ವದ ಮಹತ್ವವನ್ನು ಗ್ರಹಿಸುವುದು.

3 ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಪಾತ್ರ ಹಾಗೂ ಮತದಾನದ ಪ್ರಾಮುಖ್ಯವನ್ನು ಅರ್ಥೈಸಿಕೊಳ್ಳುವುದು

4 ಚುನಾವಣಾ ಪ್ರಕ್ರಿಯೆಗಳನ್ನು ಅರಿಯುವುದು.

©KTBS NOT TO BE REPUBLISHED

**ಪಾಠಪ್ರವೇಶ**



1 ಎಡಬದಿಯ ಚಿತ್ರವನ್ನು ನೋಡಿ, ಸಿಂಹಾಸನದಲ್ಲಿ ಕುಳಿತಿರುವುದು ಯಾರು?

2 ಅವನ ಅಕ್ಕಪಕ್ಕದಲ್ಲಿ ಕುಳಿತಿರುವವರು ಯಾರು?

3 ಬಲಗಡೆಯ ಚಿತ್ರದಲ್ಲಿರುವ ವ್ಯಕ್ತಿ ಏನು ಮಾಡುತ್ತಿದ್ದಾನೆ?

4 ನೀವು ಎಂದಾದರೂ ಮತದಾನ ಮಾಡಿದ್ದೀರಾ?

ಒಂದಾನೊಂದು ಕಾಲದಲ್ಲಿ ರತ್ನಪುರವೆಂಬ ಪಟ್ಟಣವನ್ನು ಚಂದ್ರಶಯನನೆಂಬ ರಾಜನು ಆಳುತ್ತಿದ್ದನು. ಅವನ ರಾಣಿಯು ಗಂಡು ಮಗುವಿಗೆ ಜನ್ಮವಿತ್ತು ಮಡಿದಳು. ಸ್ವಲ್ಪ ಕಾಲದ ಬಳಿಕ ರಾಜನು ಆಸ್ಥಾನದ ನರ್ತಕಿಯನ್ನು ಮದುವೆಯಾದನು. ಮುಂದೆ ಅವಳಿಗೂ ಒಂದು ಗಂಡು ಮಗು ಜನಿಸಿತು. ಅಣ್ಣತಮ್ಮಂದಿರು ಗುರುಕುಲದಲ್ಲಿ ವಿದ್ಯೆ ಕಲಿತು ಜಾಣ–ರಾದರು. ತನ್ನ ಇಳಿವಯಸ್ಸಿನಲ್ಲಿ ರಾಜನು ಹಿರಿಯ ಮಗನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಇದರಿಂದ ತನ್ನ ಮಗನೇ ಮುಂದೆ ಅರಸನಾಗಬೇಕೆಂಬ ರಾಜನರ್ತಕಿಯ ಬಯಕೆ ಸುಳ್ಳಾಯಿತು. ಅವಳು ಮಗನ ಮನಸ್ಸಿನಲ್ಲಿ ಕೆಟ್ಟ ಯೋಚನೆಗಳನ್ನು ಬಿತ್ತಿದಳು. ಅಧಿಕಾರಕ್ಕಾಗಿ ಅಣ್ಣತಮ್ಮಂದಿರ ನಡುವೆ ಜಗಳ ಆರಂಭವಾಯಿತು. ಚಿಂತೆಯಿಂದ ರಾಜ ಅಸುನೀಗಿದನು.

ಅಣ್ಣತಮ್ಮಂದಿರ ಒಳಜಗಳದಿಂದ ರಾಜ್ಯದ ಆಡಳಿತ ಹದಗೆಟ್ಟಿತು. ಜನರ ಸಮಸ್ಯೆಗಳನ್ನು ಕೇಳುವವರೇ ಇಲ್ಲವಾಯಿತು. ಕೊಲೆ, ಸುಲಿಗೆಗಳು ಹೆಚ್ಚಾದವು. ಪ್ರಜೆಗಳು ಇದರಿಂದ ಬೇಸರಗೊಂಡರು. ಅವರೆಲ್ಲರು ಒಂದೆಡೆ ಸೇರಿ ತಮ್ಮ ರಾಜ್ಯದ ಆಡಳಿತವನ್ನು ತಾವೇ ನಡೆಸುವ ತೀರ್ಮಾನ ಕೈಗೊಂಡರು. ಇದಕ್ಕಾಗಿ ಅಗತ್ಯವಿರುವ ಕಾನೂನುಗಳನ್ನು ರೂಪಿಸಿದರು. ಅವುಗಳನ್ನು ಪಾಲಿಸಲು ಎಲ್ಲರೂ ಬದ್ಧರಾದರು. ಹೀಗೆ ರತ್ನಪುರದಲ್ಲಿ ರಾಜನ ಆಳ್ವಿಕೆ (ರಾಜಪ್ರಭುತ್ವ) ಅಳಿದು ಜನರ ಆಳ್ವಿಕೆ (ಪ್ರಜಾಪ್ರಭುತ್ವ) ಬಂತು.

1 ರಾಜನು ಪಟ್ಟವನ್ನು ಯಾರಿಗೆ ಕಟ್ಟಿದನು?

2 ಅರಸನೊಬ್ಬನ ಮರಣದ ನಂತರ ಸಿಂಹಾಸನದ ಅಧಿಕಾರವನ್ನು ಸಾಮಾನ್ಯವಾಗಿ ಯಾರು ಪಡೆಯುತ್ತಾರೆ?

3 ರಾಜಪ್ರಭುತ್ವದಲ್ಲಿ ಅಧಿಕಾರಕ್ಕಾಗಿ ಒಳಜಗಳ ನಡೆದರೆ ಆಗುವ ಕೆಟ್ಟ ಪರಿಣಾಮಗಳು ಯಾವುವು?

4 ವಂಶಪಾರಂಪರ್ಯ ಆಡಳಿತವನ್ನು ನೀವು ಇಷ್ಟಪಡುತ್ತೀರಾ?

©KTBS NOT TO BE REPUBLISHED

**ರಾಜಪ್ರಭುತ್ವ:** ಮೇಲಿನ ಕಥೆಯಲ್ಲಿ ಎರಡು ಬಗೆಯ ಆಡಳಿತ ವ್ಯವಸ್ಥೆಯನ್ನು ನಾವು ಗುರುತಿಸಬಹುದು. ಅದೇ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವ, ಸರಕಾರದ ಎಲ್ಲಾ ಅಧಿಕಾರಗಳು ಒಬ್ಬ ವ್ಯಕ್ತಿಯ ಕೈಯಲ್ಲೇ ಇದ್ದರೆ ಅದನ್ನು 'ರಾಜಪ್ರಭುತ್ವ' ಎನ್ನುತ್ತಾರೆ. ಇಲ್ಲಿ ಎಲ್ಲವು ರಾಜನ ಇಚ್ಛೆಯಂತೆಯೇ ನಡೆಯುತ್ತದೆ. ಅವನ ಆಳ್ವಿಕೆಗೆ ಅವಧಿಯ ನಿರ್ಬಂಧ ಇರುವುದಿಲ್ಲ. ಚತುರ ಮತ್ತು ಧೈರ್ಯಶಾಲಿ ರಾಜನಿಂದ ರಾಜ್ಯ ಬಲಗೊಳ್ಳುತ್ತದೆ. ಪ್ರಜೆಗಳು ಸುಖವಾಗಿರುತ್ತಾರೆ. ಆದರೆ ಅವಿವೇಕಿ ಮತ್ತು ದುರ್ಬಲ ಅರಸನ ಆಳ್ವಿಕೆಯಿಂದ ರಾಜಪ್ರಭುತ್ವ ಕೊನೆಗೊಳ್ಳುತ್ತದೆ.

**ಪ್ರಜಾಪ್ರಭುತ್ವದ ಅರ್ಥ:** ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡಿ ಅವರಿಂದ ನಡೆಸಲಾಗುವ ರಾಜಕೀಯ ವ್ಯವಸ್ಥೆಯನ್ನು 'ಪ್ರಜಾಪ್ರಭುತ್ವ' ಎಂದು ಕರೆಯಲಾಗುತ್ತದೆ. ಇದು ಪ್ರಜೆಗಳ ಸರ್ಕಾರವಾಗಿದ್ದು ಪ್ರಜೆಗಳ ಹಿತರಕ್ಷಣೆಯೇ ಇದರ ಮುಖ್ಯ ಗುರಿಯಾಗಿದೆ.

**ಮಹತ್ವ:** ಪ್ರಜಾಪ್ರಭುತ್ವವು ಜನಪ್ರಿಯ ರಾಜಕೀಯ ವ್ಯವಸ್ಥೆಯಾಗಿದೆ. ಇದರಲ್ಲಿ ಕೆಲವು ಉತ್ತಮ ಅಂಶಗಳಿವೆ.

- ಆಡಳಿತವು ಪ್ರಜೆಗಳ ಪ್ರತಿನಿಧಿಗಳದ್ದೇ ಆಗಿರುತ್ತದೆ.
- ಎಲ್ಲರ ಸಮಾನತೆಗೆ ಇಲ್ಲಿ ಅವಕಾಶವಿದೆ.
- ಕ್ರಮಬದ್ಧವಾಗಿ ಚುನಾವಣೆಗಳು ನಡೆದು, ಜನಪ್ರತಿನಿಧಿಗಳು ಅಧಿಕಾರವಹಿಸುತ್ತಾರೆ.
- ವಿಷಯಗಳ ಬಗ್ಗೆ ಚರ್ಚೆ ನಡೆದು, ಜನಪರ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ.
- ಪ್ರಜಾಪ್ರಭುತ್ವದಲ್ಲಿ ಜನರು ವಿವೇಕದಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯಿದೆ.

**ಪ್ರಜಾಪ್ರಭುತ್ವದ ಸವಾಲುಗಳು:**

- ಮತಗಳಿಸಲು ಕೆಲವೊಮ್ಮೆ ಹಣದ ಆಮಿಷ ಮತ್ತು ಬಾಹುಬಲಗಳನ್ನು ಬಳಸಲಾಗುತ್ತದೆ.
- ಚುನಾವಣೆಯಲ್ಲಿ ಜಾತಿ, ಮತ, ಭಾಷೆಗಳೂ ತಮ್ಮ ಪ್ರಭಾವ ಬೀರುತ್ತವೆ.
- ಚುನಾಯಿತ ಪ್ರತಿನಿಧಿಗಳು ತಮ್ಮ ಸ್ವಾರ್ಥಕ್ಕಾಗಿ ಪಕ್ಷವನ್ನು ತೊರೆದು ಇನ್ನೊಂದು ಪಕ್ಷವನ್ನು ಸೇರುವುದಿದೆ. ಇಂಥ ಪಕ್ಷಾಂತರದಿಂದ ಸರ್ಕಾರವು ಅಸ್ಥಿರಗೊಳ್ಳುತ್ತದೆ.
- ಈ ವ್ಯವಸ್ಥೆಯಲ್ಲಿ ಪುಂಡರೂ, ಅಪರಾಧಿಗಳೂ ಆಯ್ಕೆಗೊಳ್ಳುವ ಸಂಭವವಿದೆ.

NOT TO BE REPUBLISHED @KTBS

## ಚುನಾವಣೆ




ಮತಚಲಾವಣೆ

©KTBS NOT TO BE REPUBLISHED

1 ಜನರು ಸಾಲಾಗಿ ಏಕೆ ಸಾಗುತ್ತಿದ್ದಾರೆ?

2 ನೀನು ಎಂದಾದರೂ ಈ ರೀತಿಯ ಸನ್ನಿವೇಶವನ್ನು ನೋಡಿರುವೆಯಾ?

3 ಮತಪತ್ರಗಳ ಅಥವಾ ಮತಯಂತ್ರಗಳ ಮೇಲೆ ಚಿಹ್ನೆಗಳನ್ನು ಏಕೆ ನೀಡುತ್ತಾರೆ?

ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಮತದಾನವು ಚುನಾವಣಾ ಪದ್ಧತಿಯ ಮುಖ್ಯ ಅಂಗವಾಗಿದೆ. ಭಾರತದಲ್ಲಿ ಹದಿನೆಂಟು ವರ್ಷ ಅಥವಾ ಮೇಲ್ಪಟ್ಟವರಿಗೆ ಮತದಾನದ ಹಕ್ಕಿದೆ. ಮತದಾರರು ರಹಸ್ಯ ಮತದಾನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆಮಾಡುತ್ತಾರೆ.

ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ನೀಡಲಾಗುತ್ತದೆ. ಈ ಚಿಹ್ನೆಗಳನ್ನು ನೋಡಿ ಅನಕ್ಷರಸ್ಥರೂ ಕೂಡ ಮತವನ್ನು ಚಲಾಯಿಸಬಹುದಾಗಿದೆ.

**ಮತದಾನದ ಮಹತ್ವ :** • ಪ್ರಜೆಗಳು ತಮ್ಮ ಅಭಿಪ್ರಾಯವನ್ನು ತಿಳಿಸಲು ಮತದಾನವು ಸಹಾಯಕವಾಗುತ್ತದೆ. • ಇದು ಎಲ್ಲ ವರ್ಗದ ಜನರ ಪ್ರಾತಿನಿಧ್ಯಕ್ಕೆ ಅವಕಾಶ ನೀಡುತ್ತದೆ.

**ಚುನಾವಣಾ ಪ್ರಕ್ರಿಯೆಗಳು :** ಚುನಾವಣೆಗಳನ್ನು ಒಂದು ವೇಳಾಪಟ್ಟಿಯಂತೆ ನಡೆಸಲಾಗುವುದು. • ಪ್ರಾರಂಭದಲ್ಲಿ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ. • ಸರ್ಕಾರಿ ಅಧಿಕಾರಿಗಳಿಂದ ನಾಮಪತ್ರ ಪರಿಶೀಲನೆ. • ಸ್ಪರ್ಧೆಯಿಂದ ಹಿಂದೆ ಸರಿಯಲು ಬಯಸುವ ಅಭ್ಯರ್ಥಿಗಳಿಂದ ನಾಮಪತ್ರ ಹಿಂತೆಗೆತ. • ಮತಯಾಚನೆಗಾಗಿ ಅಭ್ಯರ್ಥಿಗಳಿಂದ ಮತ್ತು ಪಕ್ಷಗಳ ನಾಯಕರಿಂದ ಚುನಾವಣಾ ಪ್ರಚಾರ. • ನಿಗದಿತ ದಿನದಂದು ಮತದಾನ. •

ಮತಗಳ ಎಣಿಕೆ ಹಾಗೂ ಫಲಿತಾಂಶದ ಘೋಷಣೆ. • ವಿಜೇತ ಅಭ್ಯರ್ಥಿಗಳ ಯಾದಿ ಬಿಡುಗಡೆ.

### ಹೊಸ ಪದಗಳು

**ಮತದಾನ** – ಚುನಾವಣೆಯಲ್ಲಿ ಆಯ್ಕೆಯನ್ನು ವ್ಯಕ್ತಪಡಿಸುವುದು, ವೋಟು ಕೊಡುವುದು.

**ವಂಶಪಾರಂಪರ್ಯ ಆಡಳಿತ** – ಒಂದೇ ಮನೆತನದವರು ಆಡಳಿತ ನಡೆಸುವುದು.

**ಮತಪತ್ರ** – ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆಗಳು ಮುದ್ರಿತವಾದ ಮತದಾನದ ಚೀಟಿ,

**ರಹಸ್ಯ ಮತದಾನ** – ಯಾವ ಪಕ್ಷ ಅಥವಾ ಅಭ್ಯರ್ಥಿಗೆ ಮತ ಹಾಕಿದ್ದೇವೆ ಎಂಬುದನ್ನು ಘೋಷಿಸುವ ಅಗತ್ಯವಿಲ್ಲದೆ ಪೌರನೊಬ್ಬ ಮತ ಹಾಕಬಹುದಾದ ವ್ಯವಸ್ಥೆ

**ಮತಗಟ್ಟೆ** – ಮತ ಚಲಾಯಿಸುವ ಸ್ಥಳ.

### ನಿಮಗೆ ತಿಳಿದಿರಲಿ

1 ಇತ್ತೀಚೆಗೆ ಮತದಾನಕ್ಕಾಗಿ ಎಲೆಕ್ಟ್ರಾನಿಕ್ ಯಂತ್ರಗಳ ಬಳಕೆ ಪ್ರಾರಂಭವಾಗಿದೆ.

2 ಭಾರತದಲ್ಲಿ ಚುನಾವಣಾ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಲಾಗಿದೆ. ಆಯೋಗವು ಸ್ವತಂತ್ರವಾಗಿ ಕಾರ್ಯಮಾಡುತ್ತದೆ.

@KTBS NOT TO BE REPUBLISHED

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಪ್ರಜಾಪ್ರಭುತ್ವ ಎಂದರೇನು?

2 ಪ್ರಜಾಪ್ರಭುತ್ವದ ಮಹತ್ವವೇನು?

3 ಭಾರತದಲ್ಲಿ ಮತ ನೀಡಲು ಪೌರನಿಗೆ ಎಷ್ಟು ವಯಸ್ಸಾಗಿರಬೇಕು?

4 ಮತದಾನದ ಮಹತ್ವವೇನು?

### ಚರ್ಚಿಸಿ

1 ಚುನಾವಣಾ ಪ್ರಚಾರವನ್ನು ನಡೆಸಲು ಅಭ್ಯರ್ಥಿಗಳು ಅನುಸರಿಸುವ ವಿಧಾನಗಳು.

2 ಪ್ರಜಾಪ್ರಭುತ್ವದ ಯಶಸ್ವಿಯಲ್ಲಿ ನಮ್ಮ ಪಾತ್ರ.

### ಚಟುವಟಿಕೆ

ಭಾರತದ ರಾಜಕೀಯ ಪಕ್ಷಗಳ ಚುನಾವಣಾ ಚಿಹ್ನೆಗಳನ್ನು ಸಂಗ್ರಹಿಸಿ,

| ಅಧ್ಯಾಯ 8 | # ಸ್ಥಳೀಯ ಆಡಳಿತ |
|---|---|

U5I1Z9

## ಪಾಠದ ಪರಿಚಯ

ಭಾರತವು ವಿಶಾಲವಾದ ದೇಶ. ಜನ ಸಂಖ್ಯೆಯು ದೊಡ್ಡದು. ಈ ವಿಶಾಲ ದೇಶದ ಆಡಳಿತವನ್ನು ಕೇಂದ್ರ ಸರ್ಕಾರ ಒಂದೇ ನಿರ್ವಹಿಸಲು ಸಾಧ್ಯವಿಲ್ಲ ಹಾಗೂ ಆಡಳಿತ ವಿಕೇಂದ್ರಿಕರಣ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಇದರಿಂದಾಗಿ ಸ್ಥಳೀಯ ಸರ್ಕಾರಗಳು ಜಾರಿಗೊಂಡಿವೆ.

ಕರ್ನಾಟಕ ಸರ್ಕಾರದ ಆಡಳಿತಕ್ಕೆ ಪೂರಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳೆಂಬ ಸ್ಥಳೀಯ ಆಡಳಿತ ಸಂಸ್ಥೆಗಳಿವೆ. ನಗರ ಪ್ರದೇಶಗಳಲ್ಲಿ ಪುರಸಭೆ, ನಗರಸಭೆ ಮತ್ತು ಮಹಾನಗರಪಾಲಿಕೆಗಳಿವೆ. ಗ್ರಾಮಸಭೆಗಳನ್ನು ಬಲಪಡಿಸುವುದರೊಂದಿಗೆ ಗ್ರಾಮಾಭಿವೃದ್ಧಿ ಅಥವಾ ನಗರಾಭಿವೃದ್ಧಿ ಕಾರ್ಯಗಳನ್ನು ಸ್ಥಳೀಯರೇ ಕಾರ್ಯಗತಗೊಳಿಸಬೇಕೆಂಬುದು 1993ರಲ್ಲಿ ಜಾರಿಗೆ ಬಂದ 'ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ'ಯ ಉದ್ದೇಶವಾಗಿದೆ. ಈ ದಿಕ್ಕಿನಲ್ಲಿ ಸರ್ಕಾರವು ಪಂಚಾಯಿತಿಗಳಿಗೆ ಕೆಲವೊಂದು ಅಧಿಕಾರಗಳನ್ನು ನೀಡಿದೆಯಲ್ಲದೆ ಹಣಕಾಸನ್ನು ಒದಗಿಸಿದೆ. ಈ ಪಾಠದಲ್ಲಿ ಸ್ಥಳೀಯ ಸಂಸ್ಥೆಗಳ ಮಹತ್ವ, ರಚನೆ, ಕಾರ್ಯ ಮತ್ತು ಆದಾಯದ ಮೂಲಗಳ ಬಗ್ಗೆ ವಿವರಣೆಯಿದೆ.

© KTBS NOT TO BE REPUBLISHED

## ಸಾಮರ್ಥ್ಯಗಳು

1 ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ರಚನೆ, ಕಾರ್ಯ ಮತ್ತು ಆದಾಯದ ಮೂಲಗಳನ್ನು ಅರಿಯುವುದು.

2 ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ನಾಗರಿಕರ ಪಾತ್ರವನ್ನು ತಿಳಿಯುವುದು.

3 ಪುರಸಭೆ ಮತ್ತು ನಗರಸಭೆಗಳ ರಚನೆ, ಕಾರ್ಯ ಮತ್ತು ಆದಾಯದ ಮೂಲಗಳನ್ನು ಅರ್ಥೈಸಿಕೊಳ್ಳುವುದು.

4 ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಮೆಚ್ಚಿಕೊಳ್ಳುವುದು.

## ಪಾಠ ಪ್ರವೇಶ



1 ಮೇಲಿನ ಚಿತ್ರಗಳಲ್ಲಿ ನೀವು ಏನನ್ನು ಕಾಣುವಿರಿ?

2 ಇಲ್ಲಿ ಚಿತ್ರಿತವಾದ ಸಮಸ್ಯೆಗಳು ನಿಮ್ಮ ಊರಿನಲ್ಲಿ / ನಗರದಲ್ಲಿ ಇವೆಯೆ?

3 ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ನೀವು ನೀಡುವ ಸಲಹೆಗಳು ಯಾವುವು?

**ಸ್ಥಳೀಯ ಸ್ವಯಂ ಆಡಳಿತ :** ಒಂದು ಪ್ರದೇಶದ ಸಮಸ್ಯೆಗಳನ್ನು ಅಲ್ಲಿಯ ಸ್ಥಳೀಯರು ಚೆನ್ನಾಗಿ ಬಲ್ಲರು. ತಮ್ಮ ಪ್ರದೇಶದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿವೆ ಎಂಬುದನ್ನು ಕೂಡ ಅವರು ತಿಳಿದಿದ್ದಾರೆ. ಆದರೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾದರೆ ಸ್ಥಳೀಯರಿಗೆ ಸಾಕಷ್ಟು ಅಧಿಕಾರ ಹಾಗೂ ಹಣಕಾಸಿನ ಬೆಂಬಲ ಬೇಕಲ್ಲವೆ? ಇದಕ್ಕಾಗಿ ನಮ್ಮ ದೇಶದಲ್ಲಿ 'ಪಂಚಾಯತ್ ರಾಜ್' ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅದರಂತೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪಂಚಾಯಿತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದ್ದು, ಅವುಗಳಿಗೆ ಅಧಿಕಾರ ಮತ್ತು ಹಣಕಾಸನ್ನು ಸರ್ಕಾರ ಒದಗಿಸುತ್ತದೆ. ಇಂಥ ಸ್ಥಳೀಯ ಸರ್ಕಾರಗಳು ಹೊಂದಿರುವ ಉದ್ದೇಶಗಳೆಂದರೆ –

- ಗ್ರಾಮಗಳಲ್ಲಿ ಸ್ವಯಂ ಆಡಳಿತವನ್ನು ಸ್ಥಾಪಿಸುವುದು.
- ಪಂಚಾಯಿತಿಗಳಲ್ಲಿ ಮೀಸಲಾತಿ ನೀಡುವ ಮೂಲಕ ಪರಿಶಿಷ್ಟಜಾತಿ – ವರ್ಗ, ಹಿಂದುಳಿದ ಜಾತಿ – ವರ್ಗ ಮತ್ತು ಮಹಿಳೆಯರ ಸಬಲೀಕರಣ.
- ಸ್ಥಳೀಯರಿಂದಲೇ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ.
- ಅಧಿಕಾರವನ್ನು ಹಂಚಿಕೊಳ್ಳುವ ಮೂಲಕ ಆಡಳಿತವನ್ನು ಚುರುಕುಗೊಳಿಸುವುದು.

ಪಂಚಾಯಿತಿ ಪದ್ಧತಿಯಂತೆ, ಗ್ರಾಮ ಮಟ್ಟದಲ್ಲಿ 'ಗ್ರಾಮ ಪಂಚಾಯಿತಿ, ತಾಲ್ಲೂಕು ಮಟ್ಟದಲ್ಲಿ 'ತಾಲ್ಲೂಕು ಪಂಚಾಯಿತಿ', ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳಿವೆ.

©KTBS NOT TO BE REPUBLISHED

## ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿಗಳು

**ರಚನೆ:** ಪಂಚಾಯಿತಿ ಪ್ರದೇಶಗಳಲ್ಲಿ ವಾಸಿಸುವ, 18 ವರ್ಷಕ್ಕೆ ಮೇಲ್ಪಟ್ಟವರು ಪಂಚಾಯಿತಿ ಸದಸ್ಯರನ್ನು ಚುನಾಯಿಸುತ್ತಾರೆ. ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಮೀಸಲಾತಿಯಿದೆ. ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡುತ್ತಾರೆ. ಪಂಚಾಯಿತಿಯ ಅಧಿಕಾರಾವಧಿ ಐದು ವರ್ಷ. ಪಂಚಾಯಿತಿಗೆ ಕಛೇರಿಯಿದೆ ದಿನನಿತ್ಯದ ಆಡಳಿತವನ್ನು ಮಾಡಲು ಅಧಿಕಾರಿಯೊಬ್ಬರು ಇರುತ್ತಾರೆ.

ಪಂಚಾಯಿತಿ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಪಂಚಾಯಿತಿಯ ಮುಖ್ಯ ಕಾರ್ಯವಾಗಿದೆ. ಅದರ ಆದಾಯದ ಮೂಲಗಳೆಂದರೆ ಸರ್ಕಾರ ಮತ್ತು ಜಿಲ್ಲಾ ಪಂಚಾಯಿತಿಯಿಂದ ಬರುವ ಅನುದಾನಗಳು ಹಾಗೂ ಪಂಚಾಯಿತಿಯು ಸಂಗ್ರಹಿಸುವ ತೆರಿಗೆ ಮತ್ತು ಬಾಡಿಗೆ.




**ಗ್ರಾಮಸಭೆ :** ಗ್ರಾಮಸಭೆಯು ಪಂಚಾಯತ್ ರಾಜ್ ವ್ಯವಸ್ಥೆಯ ಅತ್ಯಂತ ಕೆಳಸ್ತರದ ಸಭೆಯಾಗಿದ್ದು, ಅದನ್ನು ಬಲಪಡಿಸುವುದು ಈ ವ್ಯವಸ್ಥೆಯ ಮುಖ್ಯ ಗುರಿಯಾಗಿದೆ. 18 ವರ್ಷಕ್ಕೆ ಮೇಲ್ಪಟ್ಟ ಎಲ್ಲರೂ ಗ್ರಾಮಸಭೆಯ ಸದಸ್ಯರು. ಅದು ವರ್ಷಕ್ಕೆ ಕನಿಷ್ಠ ಎರಡು ಬಾರಿ ಸಭೆ ಸೇರುತ್ತದೆ. ಆ ವೇಳೆ ಸದಸ್ಯರು ತಮ್ಮ ತಮ್ಮ ಸಮಸ್ಯೆಗಳನ್ನು ನೇರವಾಗಿ ಪಂಚಾಯಿತಿಯ ಮುಂದೆ ಇಡಬಹುದು.

ಗ್ರಾಮಸಭೆಯು ತನ್ನ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಫಲಾನುಭವಿಗಳನ್ನು ಗುರುತಿಸುವ ಕಾರ್ಯವನ್ನು ಮಾಡುತ್ತದೆ. ಅದು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಗ್ರಾಮಪಂಚಾಯಿತಿಗೆ ನೆರವನ್ನೂ ನೀಡುತ್ತದೆ.

## ಜಿಲ್ಲಾ ಪಂಚಾಯಿತಿ

**ರಚನೆ:** ಜಿಲ್ಲಾ ಪಂಚಾಯಿತಿಯಲ್ಲಿ ಪ್ರತಿಯೊಂದು ತಾಲ್ಲೂಕಿನಿಂದ ಚುನಾಯಿತರಾದ ಸದಸ್ಯರಿರುತ್ತಾರೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರೂ ಇರುತ್ತಾರೆ. ಜೊತೆಯಲ್ಲಿ ಜಿಲ್ಲೆಯ ತಾಲೂಕು ಪಂಚಾಯಿತಿಗಳ ಅಧ್ಯಕ್ಷರೂ ಇದರ ಸದಸ್ಯರಾಗಿರುತ್ತಾರೆ. ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಇರುವಂತೆ ಇಲ್ಲಿಯೂ ಮೀಸಲಾತಿಯಿದೆ. ಸದಸ್ಯರ ಅಧಿಕಾರಾವಧಿ ಐದು ವರ್ಷಗಳು.

ಜಿಲ್ಲಾ ಪಂಚಾಯಿತಿಯ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆರಿಸುತ್ತಾರೆ. ಅನೇಕ ಸ್ಥಾಯಿ ಸಮಿತಿಗಳನ್ನು ರಚಿಸಲಾಗುತ್ತದೆ. ಪ್ರತಿಯೊಂದಕ್ಕೂ ಒಬ್ಬ ಸದಸ್ಯನು ಮುಖ್ಯಸ್ಥನಾಗಿರುತ್ತಾನೆ. ಉದಾಹರಣೆಗೆ ಶಿಕ್ಷಣ ಸ್ಥಾಯಿ ಸಮಿತಿ, ಆರೋಗ್ಯ ಸ್ಥಾಯಿ ಸಮಿತಿ, ಇತ್ಯಾದಿ. 'ಮುಖ್ಯ ಕಾರ್ಯನಿರ್ವಹಣಾಧಿಕಾರಿ'ಯು (ಸಿ.ಇ.ಓ.) ಜಿಲ್ಲಾ ಪಂಚಾಯಿತಿಯ ಅಧಿಕಾರಿಯಾಗಿರುತ್ತಾರೆ.

**ಪ್ರಮುಖ ಕಾರ್ಯಗಳು:** ● ಜಿಲ್ಲಾ ಪಂಚಾಯಿತಿ ಪ್ರದೇಶದ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು. ● ನೈಸರ್ಗಿಕ ಪ್ರಕೋಪಗಳಿಗೆ ತುತ್ತಾದವರಿಗೆ ಪರಿಹಾರ ಒದಗಿಸುವುದು. ● ಜಿಲ್ಲೆಯ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳ ಮೇಲ್ವಿಚಾರಣೆ ನೋಡಿಕೊಳ್ಳುವುದು. ● ಸರ್ಕಾರಿ ಶಾಲೆಗಳ ನಿರ್ವಹಣೆ,

**ಆದಾಯದ ಮೂಲಗಳು:** ● ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರವು ನೀಡುವ ಅನುದಾನ ಮತ್ತು ಸಾಲವನ್ನೆತ್ತಿ ಪಡೆದ ಹಣ. ● ತೆರಿಗೆ, ಬಾಡಿಗೆ ಮತ್ತು ಸೇವಾ ಶುಲ್ಕಗಳ ಮೂಲಕ ಸಂಗ್ರಹಿಸಿದ ಆದಾಯ.

## ನಗರಾಡಳಿತ

**ಪುರಸಭೆ ಮತ್ತು ನಗರಪಾಲಿಕೆಗಳು – ರಚನೆ:** ನಗರ ಪ್ರದೇಶಗಳಲ್ಲಿ ಪುರಸಭೆ, ನಗರಪಾಲಿಕೆ ಮತ್ತು ಮಹಾನಗರಪಾಲಿಕೆಗಳೆಂಬ ಪೌರಸಂಸ್ಥೆಗಳಿವೆ. ಪುರಸಭೆ ಮತ್ತು ನಗರಸಭೆಗಳ ಸದಸ್ಯರನ್ನು ಸ್ಥಳೀಯ ಜನರೇ ಚುನಾಯಿಸುತ್ತಾರೆ. ಸದಸ್ಯರನ್ನು 'ಕೌನ್ಸಿಲರ್' ಎಂದು ಕರೆಯುತ್ತಾರೆ.

ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಈ ಪೌರ ಸಂಸ್ಥೆಗಳಲ್ಲಿ ಮೀಸಲಾತಿಯಿದೆ. ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಶಾಸಕರು ಪೌರಸಂಸ್ಥೆಗಳ ಸದಸ್ಯರಾಗಿರುತ್ತಾರೆ. ಪೌರಸಂಸ್ಥೆಗಳ ಅಧಿಕಾರಾವಧಿ ಐದು ವರ್ಷ.

©KTBS NOT TO BE REPUBLISHED

ಸದಸ್ಯರು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿಯೂ ಆಯ್ಕೆ ಮಾಡುತ್ತಾರೆ. ಪುರಸಭೆಯ ಆಡಳಿತವನ್ನು ಮುಖ್ಯ ಅಧಿಕಾರಿ ನಿರ್ವಹಿಸುವರು. 'ಕಮಿಷನರು' ಅಥವಾ 'ಆಯುಕ್ತರು' ನಗರಸಭೆಯ ಮುಖ್ಯ ಅಧಿಕಾರಿ. ಈ ಅಧಿಕಾರಿಗಳು ಸರ್ಕಾರದಿಂದ ನೇಮಕಗೊಂಡವರು.

**ಮಹಾನಗರ ಪಾಲಿಕೆಗಳು:** ನಮ್ಮ ರಾಜ್ಯದಲ್ಲಿ ಹನ್ನೊಂದು ಮಹಾನಗರ ಪಾಲಿಕೆಗಳು ಇವೆ.

**ರಚನೆ:** ಪುರಸಭೆ ಮತ್ತು ನಗರಪಾಲಿಕೆಗಳಲ್ಲಿರುವಂತೆ ಇಲ್ಲಿಯೂ ಮೀಸಲಾತಿಯಿದೆ. ಆಯಾ ಕ್ಷೇತ್ರದ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು ಆಯಾ ಮಹಾನಗರಪಾಲಿಕೆಯ ಸದಸ್ಯರಾಗಿರುತ್ತಾರೆ. ಸದಸ್ಯರನ್ನು 'ಕಾರ್ಪೊರೇಟರ್" ಎಂದು ಕರೆಯುತ್ತಾರೆ. ಸದಸ್ಯರ ಅಧಿಕಾರಾವಧಿ ಐದು ವರ್ಷ.

ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು 'ಮೇಯರ್' (ಮಹಾಪೌರ) ಆಗಿಯೂ ಇನ್ನೊಬ್ಬರನ್ನು "ಉಪಮೇಯರ್" (ಉಪಮಹಾಪೌರ) ಆಗಿಯೂ ಆಯ್ಕೆ ಮಾಡುತ್ತಾರೆ.

**ಪೌರಸಂಸ್ಥೆಗಳ ಕಾರ್ಯಗಳು:** ಪುರಸಭೆ, ನಗರಸಭೆ ಮತ್ತು ಮಹಾನಗರಪಾಲಿಕೆಗಳು ಅನೇಕ ಅಭಿವೃದ್ಧಿ ಕೆಲಸಗಳನ್ನು ಕಾರ್ಯಗತ ಮಾಡುತ್ತವೆ. ಇವುಗಳಲ್ಲಿ ಸಾರ್ವಜನಿಕ ಆರೋಗ್ಯ, ಬೀದಿ ದೀಪ, ನಗರ ನೈರ್ಮಲ್ಯ, ಒಳಚರಂಡಿ ವ್ಯವಸ್ಥೆ, ನಲ್ಲಿ ನೀರಿನ ಪೂರೈಕೆ, ರಸ್ತೆ, ಕಟ್ಟಡ ಮತ್ತು ಉದ್ಯಾನವನ ನಿರ್ಮಾಣ ಮುಖ್ಯವಾದುವುಗಳು, ನಗರ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು 'ನಗರಾಭಿವೃದ್ಧಿ ಪ್ರಾಧಿಕಾರ'ವಿದೆ.

**ಆದಾಯ ಮೂಲಗಳು:** ರಾಜ್ಯಸರ್ಕಾರವು ನೀಡುವ ಅನುದಾನವು ಪುರಸಭೆ, ನಗರಸಭೆ ಮತ್ತು ಮಹಾನಗರಪಾಲಿಕೆಗಳ ಆದಾಯದ ಮುಖ್ಯ ಮೂಲವಾಗಿದೆ. ಸೊತ್ತಿನ ತೆರಿಗೆ, ನೀರು ಸರಬರಾಜು ಕರ, ಆರೋಗ್ಯ ಕರ, ವಿದ್ಯಾಕರ, ವಾಚನಾಲಯ ಕರ, ಭಿಕ್ಷುಕರ ಕರ, ಅಗ್ನಿಕರ ಹಾಗೂ ಇನ್ನಿತರ ಕರ ಮತ್ತು ಬಾಡಿಗೆಗಳು ಅವುಗಳ ಆದಾಯದ ಮೂಲಗಳಾಗಿವೆ.

©KTBS NOT TO BE REPUBLISHED

### ಹೊಸ ಪದಗಳು

**ಸಬಲೀಕರಣ** – ದುರ್ಬಲರನ್ನು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಬಲಪಡಿಸುವುದು. **ಮೀಸಲಾತಿ** – ಕೆಲವು ವರ್ಗದವರಿಗೆ ಸ್ಥಾನಗಳನ್ನು ಕಾಯ್ದಿರಿಸುವುದು. **ಅನುದಾನ** – ಅಭಿವೃದ್ಧಿ ಕಾರ್ಯಕ್ರಮ ಮತ್ತು ಇತರ ಉದ್ದೇಶಕ್ಕೆ ಸರ್ಕಾರ ಒದಗಿಸುವ ಹಣಕಾಸು. **ನೈಸರ್ಗಿಕ ಪ್ರಕೋಪ** – ನೆರೆ, ಚಂಡಮಾರುತ ಮುಂತಾದ ಭೀಕರ ಅನಾಹುತಗಳು.

## ಅಭ್ಯಾಸಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1 ಸ್ವಯಂ ಆಡಳಿತ ಪದ್ಧತಿಯ ಮುಖ್ಯ ಉದ್ದೇಶಗಳು ಯಾವುವು?

2 ಗ್ರಾಮಸಭೆಯ ಸದಸ್ಯರು ಯಾರಾಗಿದ್ದಾರೆ?

3 ಪಂಚಾಯಿತಿಗಳಲ್ಲಿ ಯಾವ ಯಾವ ವರ್ಗದವರಿಗೆ ಮೀಸಲಾತಿಯಿದೆ?

4 ಜಿಲ್ಲಾ ಪಂಚಾಯಿತಿಯ ಆದಾಯದ ಮೂಲಗಳು ಯಾವುವು?

5 ನಮ್ಮ ರಾಜ್ಯದಲ್ಲಿ ಮಹಾನಗರಪಾಲಿಕೆಗಳನ್ನು ಹೊಂದಿರುವ ನಗರಗಳು ಯಾವುವು?

6 ಮಹಾನಗರಪಾಲಿಕೆಗಳ ಆದಾಯದ ಮೂಲಗಳನ್ನು ಹೆಸರಿಸಿ.

**ಚರ್ಚಿಸಿ**

ನಿಮ್ಮ ಗ್ರಾಮ ಪಂಚಾಯಿತಿ/ನಗರ ಪ್ರದೇಶದಲ್ಲಿ ಅತ್ಯವಶ್ಯಕವಾಗಿ ನಡೆಯಬೇಕಾದ ಅಭಿವೃದ್ಧಿ ಕಾರ್ಯಗಳು.

**ಚಟುವಟಿಕೆಗಳು**

1 ಹಿರಿಯರೊಂದಿಗೆ ನಿಮ್ಮ ನಗರವನ್ನು ಸುತ್ತಾಡಿ ನಗರಪಾಲಿಕೆಯು ಕಾರ್ಯಗತ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ.

2 ಹಿರಿಯರೊಂದಿಗೆ ನಿಮ್ಮ ಗ್ರಾಮಸಭೆಯ / ನಗರಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿ

3 ವಿದ್ಯಾರ್ಥಿಗಳಿಗಾಗಿಯೇ ನಡೆಸಲಾಗುವ ವಿಶೇಷ ಗ್ರಾಮಸಭೆಗಳಲ್ಲಿ ಭಾಗವಹಿಸಿ ಪ್ರಶ್ನಿಸುವ ಕೌಶಲ್ಯ ಬೆಳೆಸಿಕೊಳ್ಳಿ.

4 ನಿಮ್ಮ ಗ್ರಾಮ/ತಾಲೂಕು/ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಸಂಪರ್ಕಿಸಿ ವಿವಿಧ ವರ್ಗಗಳಿಗಿರುವ ಮೀಸಲಾತಿ ಪ್ರಮಾಣವನ್ನು ತಿಳಿಯಿರಿ.

NOT TO BE REPUBLISHED ©KTBS

| ಅಧ್ಯಾಯ 9 | ನಮ್ಮ ಸಂವಿಧಾನ |
|---|---|

D3B1K7

**ಪಾಠದ ಪರಿಚಯ**

ಈ ಪಾಠದಲ್ಲಿ ಸಂವಿಧಾನದ ಅರ್ಥ, ಮಹತ್ವ, ರಚನೆ ಹಾಗೂ ಅದರ ಮುಖ್ಯ ಲಕ್ಷಣಗಳನ್ನು ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1 ಸಂವಿಧಾನದ ಅರ್ಥ ಮತ್ತು ಮಹತ್ವವನ್ನು ತಿಳಿಯುವುದು.
2 ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಅರ್ಥೈಸಿಕೊಳ್ಳುವುದು.
3 ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಅರಿಯುವುದು ಮತ್ತು ಮೆಚ್ಚುವುದು.
4 ಸಂವಿಧಾನದ ರಚನಾ ಕಾರ್ಯದಲ್ಲಿ ಪಾಲ್ಗೊಂಡ ಗಣ್ಯ ವ್ಯಕ್ತಿಗಳ ವಿವರ ತಿಳಿಯುವುದು.
5 'ಗಣರಾಜ್ಯ'ದ ಕಲ್ಪನೆಯನ್ನು ತಿಳಿಯುವುದು.
6 'ಸರ್ವಧರ್ಮಸಮಭಾವ' ಎಂಬ ತತ್ವದ ಆಶಯವನ್ನು ಅರಿತು ನಿತ್ಯಜೀವನದಲ್ಲಿ ಈ ಮೌಲ್ಯವನ್ನು ರೂಢಿಸಿಕೊಳ್ಳಲು ಶಕ್ತರಾಗುವುದು.
7 ಸಂವಿಧಾನವನ್ನು ಗೌರವಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು.

© KTBS NOT TO BE REPUBLISHED

**ಸರ್ಕಾರ ಎಂದರೇನು?** ಪ್ರಜೆಗಳ ಬದುಕು ಚೆನ್ನಾಗಿರಬೇಕಾದರೆ ದೇಶದಲ್ಲಿ ಶಿಸ್ತುಪಾಲನೆ, ಶಾಂತಿ, ವ್ಯವಸ್ಥಿತ ಆಡಳಿತ, ಭದ್ರತೆ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮುಂತಾದವುಗಳನ್ನು ಸ್ಥಾಪಿಸುವ ಹಾಗೂ ನಿರ್ವಹಿಸುವ ಸಂಘಟನೆಯೊಂದು ಬೇಕಾಗುತ್ತದೆ. ಇಂಥ ಸಂಘಟನೆಯನ್ನು ಸರ್ಕಾರ ಎನ್ನುತ್ತಾರೆ.

## ಸಂವಿಧಾನದ ಅರ್ಥ ಮತ್ತು ಮಹತ್ವ

ಸಂವಿಧಾನವೆಂದರೆ ಒಂದು ದೇಶವು ಅನುಸರಿಸುವ **ಮೂಲಭೂತ ಕಾನೂನು**. ಅದು ಸರ್ಕಾರದ ಅಂಗಗಳು, ಅವುಗಳ ಅಧಿಕಾರ ಹಾಗೂ ಕಾರ್ಯಗಳನ್ನು ನಿರೂಪಿಸುತ್ತದೆ. ಸಂವಿಧಾನದಲ್ಲಿ ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳ ಉಲ್ಲೇಖವೂ ಇರುತ್ತದೆ. ಸಂವಿಧಾನವು ಸರಕಾರಕ್ಕೆ ಮಾರ್ಗಸೂಚಿಯಂತಿದೆ.

**ಸಂವಿಧಾನದ ಮಹತ್ವ:** ಸಂವಿಧಾನವು ದೇಶದ ಮೂಲಭೂತ ಕಾನೂನು ಆಗಿರುವುದರಿಂದ ಅದು ಮಹತ್ವದ್ದಾಗಿದೆ. ಅದಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ರಾಷ್ಟ್ರಪತಿ, ಪ್ರಧಾನಮಂತ್ರಿ, ಸಂಸತ್ ಸದಸ್ಯರು, ನ್ಯಾಯಾಧೀಶರು, ಅಧಿಕಾರಿ ವರ್ಗ ಎಲ್ಲರೂ ಸಂವಿಧಾನದ ಪಾಲನೆ ಮಾಡಲು ಕಟಿಬದ್ಧರು.

- ಸಂವಿಧಾನವು ಜನತೆಯ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ.
- ಅದು ಸರ್ಕಾರದ ನೀತಿ ಮತ್ತು ಕಾರ್ಯವಿಧಾನಗಳನ್ನು ನಿಯಂತ್ರಿಸುತ್ತದೆ.
- ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಸೂತ್ರವನ್ನು ಎತ್ತಿಹಿಡಿದು ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ.

**ಚಟುವಟಿಕೆ:** ಡಾ. ಅಂಬೇಡ್ಕರ್‌ರವರು ಯಾರು? ಅವರನ್ನು ನಾವಿಂದು ಕೃತಜ್ಞತೆಯಿಂದ ಏಕೆ ನೆನೆಯುತ್ತೇವೆ? ಗುಂಪಿನಲ್ಲಿ ಚರ್ಚಿಸಿ.

## ಭಾರತ ಸಂವಿಧಾನದ ರಚನೆ

ಭಾರತದ ಸಂವಿಧಾನವನ್ನು **'ಸಂವಿಧಾನ ಸಭೆ'** ಎಂಬ ವಿಶೇಷ ಸಭೆಯು ಸಿದ್ಧಪಡಿಸಿತು. ಸಭೆಯ ಸದಸ್ಯರು ಪ್ರಥಮ ಅಧಿವೇಶನದಲ್ಲಿ ಡಾ. ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

ಸಂವಿಧಾನ ಸಭೆಯಲ್ಲಿ 299 ಮಂದಿ ಸದಸ್ಯರಿದ್ದರು. 1946ರಲ್ಲಿ ಅದರ ಪ್ರಥಮ ಅಧಿವೇಶನ ನಡೆಯಿತು.

ಸಂವಿಧಾನ ಸಭೆಯು ತನ್ನ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಕೆಲವು ಸಮಿತಿಗಳನ್ನು ರಚಿಸಿತು. ಅಲ್ಲದೆ ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸಲು **'ಸಂವಿಧಾನ ಕರಡು ಸಮಿತಿ'**ಯನ್ನು ನೇಮಿಸಿತು. ಈ ಸಮಿತಿಯ ಅಧ್ಯಕ್ಷರು ಡಾ. ಬಿ.ಆರ್. ಅಂಬೇಡ್ಕರ್.

- ಸದಸ್ಯರು ಸಂವಿಧಾನದ ಕರಡು ಪ್ರತಿಯನ್ನು ಪರಿಶೀಲಿಸಿ 2473 ತಿದ್ದುಪಡಿಗಳನ್ನು ಸೂಚಿಸಿದ್ದರು. ಕರಡು ಸಂವಿಧಾನ ಮತ್ತು ತಿದ್ದುಪಡಿಗಳನ್ನು ಸಂವಿಧಾನ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಹೀಗೆ ಸಂವಿಧಾನಕ್ಕೆ ಅಂತಿಮ ರೂಪ ನೀಡಲು ಸುಮಾರು ಮೂರು ವರ್ಷಗಳು ಬೇಕಾದವು.
- ಡಾ. ಅಂಬೇಡ್ಕರ್ 15-8-1947ರಿಂದ 6-10-1951ರವರೆಗಿನ ಅವಧಿಯಲ್ಲಿ ಕಾನೂನು ಮಂತ್ರಿಗಳಾಗಿದ್ದರು.

26 ಜನವರಿ 1950ರಂದು ಸಂವಿಧಾನವನ್ನು ಜಾರಿಗೊಳಿಸಲಾಯಿತು. ಸಂವಿಧಾನವು ಭಾರತವನ್ನು **ಗಣರಾಜ್ಯ**ವೆಂದು ಘೋಷಣೆ ಮಾಡಿತು. ನಾವು ಪ್ರತಿ ವರ್ಷವೂ ಈ ದಿನದಂದು ಗಣರಾಜ್ಯೋತ್ಸವವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸುತ್ತೇವೆ.




*ಗಣರಾಜ್ಯೋತ್ಸವದ ಪರೇಡ್, ಹೊಸದಿಲ್ಲಿ*

©KTBS NOT TO BE REPUBLISHED

ಸಂವಿಧಾನದಲ್ಲಿ ಉಲ್ಲೇಖಿಸಿದಂತೆ 1951–52ರಲ್ಲಿ ಪ್ರಥಮ ಮಹಾಚುನಾವಣೆಗಳು ನಡೆದವು. 'ರಾಜ್ಯಸಭೆ' ಮತ್ತು 'ಲೋಕಸಭೆ' ಎಂಬ ಎರಡು ಸದನಗಳನ್ನೊಳಗೊಂಡ ಮೊದಲ ಚುನಾಯಿತ ಸಂಸತ್ತು (ಪಾರ್ಲಿಮೆಂಟ್) 1952ರಲ್ಲಿ ಅಸ್ತಿತ್ವಕ್ಕೆ ಬಂದಿತು.

**ನಮ್ಮ ಸಂವಿಧಾನದ ಗಾತ್ರ:** ಭಾರತ ಸಂವಿಧಾನವು 444 ವಿಧಿಗಳನ್ನು ಒಳಗೊಂಡಿದೆ. ಸಂವಿಧಾನದಲ್ಲಿ 12 ಪರಿಚ್ಛೇದಗಳಿವೆ. ಜನವರಿ 12, 2022ರವರೆಗೆ ಸಂವಿಧಾನವನ್ನು 105 ಬಾರಿ ತಿದ್ದುಪಡಿಮಾಡಲಾಗಿದೆ.

## ಪ್ರಸ್ತಾವನೆ

ಸಂವಿಧಾನದ ಆರಂಭದಲ್ಲಿ ಪೀಠಿಕೆಯ ರೂಪದಲ್ಲಿ 'ಪ್ರಸ್ತಾವನೆ' ಎಂಬುದಿದೆ. ಸಂವಿಧಾನದ ಹೃದಯದಂತಿರುವ ಈ ಪ್ರಸ್ತಾವನೆಯು ಜನತೆಯ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಗೌರವ, ಭ್ರಾತೃತ್ವ ಹಾಗೂ ರಾಷ್ಟ್ರೀಯ ಏಕತೆ ಮುಂತಾದವುಗಳು ಅಂತಹ ತತ್ವಾದರ್ಶಗಳು.

सत्यमेव जयते

### ಭಾರತದ ಸಂವಿಧಾನ
### ಪ್ರಸ್ತಾವನೆ

**"ಭಾರತದ ಜನಗಳಾದ** ನಾವು ಭಾರತವನ್ನು ಒಂದು [**ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ**] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,
[ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು]
ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃ ಭಾವನೆಯನ್ನು
ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ **ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ."**

@KTBS
NOT TO BE REPUBLISHED

## ಸಂವಿಧಾನದ ಮುಖ್ಯ ಲಕ್ಷಣಗಳು

ನಮ್ಮ ಸಂವಿಧಾನಕ್ಕೆ ತನ್ನದೇ ಆದ ಕೆಲವು ಲಕ್ಷಣಗಳಿವೆ.

• **ಲಿಖಿತ ಸಂವಿಧಾನ:** ಭಾರತ ಸಂವಿಧಾನವು ಲಿಖಿತ ರೂಪದಲ್ಲಿದೆ. ಇದು ಪ್ರಪಂಚದಲ್ಲಿಯೇ ಅತಿ ವಿಸ್ತಾರವಾದ ಸಂವಿಧಾನವಾಗಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಇದರಲ್ಲಿ ಹೇಳಲಾಗಿದೆ. ಸಂವಿಧಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಒಂದೇ ಇದೆ. ಆದ್ದರಿಂದ ಸಂವಿಧಾನದ ಗಾತ್ರ ವಿಶಾಲವಾಗಿದೆ.

**ಗಣರಾಜ್ಯ:** ಭಾರತವು ಒಂದು ಗಣರಾಜ್ಯವೆಂದು ಸಂವಿಧಾನವು ಸಾರಿದೆ. ಗಣರಾಜ್ಯದಲ್ಲಿ ರಾಜರ ಆಳ್ವಿಕೆಯಿರುವುದಿಲ್ಲ. ಬದಲಾಗಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳ ಆಳ್ವಿಕೆಯಿರುತ್ತದೆ. ಇಂಥ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ಭಾರತವು ಒಂದು 'ಪ್ರಜಾಸತ್ತಾತ್ಮಕ ಗಣರಾಜ್ಯ'ವಾಗಿದೆ.



*ಡಾ. ರಾಜೇಂದ್ರ ಪ್ರಸಾದ್*
*'ಸಂವಿಧಾನ ಸಭೆ'ಯ ಅಧ್ಯಕ್ಷರು,*
*ಭಾರತ ಗಣರಾಜ್ಯದ ಪ್ರಥಮ ಅಧ್ಯಕ್ಷರು*



*ಡಾ.ಬಿ.ಆರ್.ಅಂಬೇಡ್ಕರ್*
*'ಸಂವಿಧಾನ ಕರಡು ಸಮಿತಿ'ಯ*
*ಅಧ್ಯಕ್ಷರು*



*ಜವಾಹರಲಾಲ್ ನೆಹರು*
*ಭಾರತದ*
*ಪ್ರಥಮ ಪ್ರಧಾನಿ*

• **ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಉಲ್ಲೇಖ:** ಸಂವಿಧಾನವು ಪೌರರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವುಗಳನ್ನು ಮೊಟಕುಗೊಳಿಸುವ ಯಾವುದೇ ಶಾಸನವನ್ನಾಗಲಿ, ನಿಯಮಗಳನ್ನಾಗಲಿ, ಉಪಕ್ರಮ ಕೈಗೊಳ್ಳುವುದನ್ನಾಗಲಿ ಯಾವುದೇ ರಾಜ್ಯವು ಮಾಡುವಂತಿಲ್ಲ. ಹಕ್ಕುಗಳು ಉಲ್ಲಂಘನೆಯಾದಾಗ ಅವುಗಳನ್ನು ರಕ್ಷಿಸುವ ಅಧಿಕಾರ ನ್ಯಾಯಾಂಗಕ್ಕಿದೆ. ನಾಗರಿಕರು ಹಕ್ಕುಗಳನ್ನು ತಮಗಿಷ್ಟ ಬಂದಂತೆ ಚಲಾಯಿಸಿ ಸಾಮಾಜಿಕ ಅಶಾಂತಿಗೆ ಕಾರಣವಾಗಬಾರದು ಅಥವಾ ಕಾನೂನು ವ್ಯವಸ್ಥೆಗೆ ಭಂಗವನ್ನುಂಟು ಮಾಡಬಾರದು. ಸಂವಿಧಾನದಲ್ಲಿ ನಾಗರಿಕರು ಮಾಡಬೇಕಾದ ಹನ್ನೊಂದು ಕರ್ತವ್ಯಗಳನ್ನೂ ಉಲ್ಲೇಖಿಸಲಾಗಿದೆ.

© KTBS NOT TO BE REPUBLISHED

• **ಸರ್ವಧರ್ಮಸಮಭಾವ:** ಸಂವಿಧಾನವು **'ಸರ್ವಧರ್ಮಸಮಭಾವ'** (ಸೆಕ್ಯುಲರಿಸಂ) ತತ್ವವನ್ನು ಎತ್ತಿಹಿಡಿದಿದೆ. ಸರ್ಕಾರವು ಪಕ್ಷಪಾತಮಾಡದೆ ಎಲ್ಲ ಮತಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕೆಂಬುದು ಇದರರ್ಥ. ಸರ್ಕಾರವು ಯಾವುದೇ ಮತಧರ್ಮವನ್ನು ದೇಶದ ಧರ್ಮವೆಂದು ಮಾನ್ಯತೆ ನೀಡುವುದಿಲ್ಲ. ಅದು ಪ್ರತಿಯೊಬ್ಬನಿಗೂ ತನ್ನ ಧರ್ಮಾಚರಣೆ ಹಾಗೂ ನಂಬಿಕೆಯ ಸ್ವಾತಂತ್ರ್ಯ ನೀಡಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಸಾಮಾಜಿಕ ಹಿತದೃಷ್ಟಿಯಿಂದ ನಿಯಂತ್ರಿಸುವ ಅಧಿಕಾರ ಸರ್ಕಾರಕ್ಕೆ ಇದೆ. ಸರ್ವಧರ್ಮಸಮಭಾವವು ನಾಸ್ತಿಕ ಅಥವಾ ದೇವರು ಹಾಗೂ ಮತಧರ್ಮಗಳ ವಿರೋಧಿ ಎಂದಲ್ಲ.

• **ಸ್ವತಂತ್ರ ನ್ಯಾಯಾಂಗ:** ನಮ್ಮ ನ್ಯಾಯಾಂಗವು ಸ್ವತಂತ್ರವಾಗಿದ್ದು ಸಾಕಷ್ಟು ಅಧಿಕಾರವನ್ನು ಹೊಂದಿದೆ. ಸರ್ಕಾರವಾಗಲಿ, ಸಂಸತ್ ಆಗಲಿ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಕಾನೂನಿನ ಎದುರು ಎಲ್ಲರೂ ಸಮಾನರು; ನ್ಯಾಯ ಪಡೆಯುವ ಅವಕಾಶ ಎಲ್ಲರಿಗಿದೆ ಎಂಬ ತತ್ವವನ್ನು ನ್ಯಾಯಾಂಗ ಎತ್ತಿ ಹಿಡಿದಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಎಲ್ಲರೂ ಪಾಲಿಸಲೇ ಬೇಕು ಮತ್ತು ಅದು ಅಂತಿಮ ನಿರ್ಧಾರ.

• **ವಯಸ್ಕ ಮತದಾನ ಪದ್ಧತಿ:** ವಯಸ್ಕ ನಾಗರಿಕರು (18 ವರ್ಷಕ್ಕೆ ಮೇಲ್ಪಟ್ಟವರು) ಮತದಾನ ಮಾಡಿ ಪ್ರತಿನಿಧಿಗಳನ್ನು ಚುನಾಯಿಸುವ ಕ್ರಮವನ್ನು 'ವಯಸ್ಕ ಮತದಾನ ಪದ್ಧತಿ' ಎನ್ನುವರು. ನಾಗರಿಕರೆಲ್ಲರು ಯಾವುದೇ ಭೇದಭಾವವಿಲ್ಲದೆ ಮತ ಚಲಾಯಿಸುತ್ತಾರೆ.

• **ಅಸ್ಪೃಶ್ಯತೆಯ ರದ್ಧತಿ:** ಜನ್ಮಾಧಾರಿತ ಅಸ್ಪೃಶ್ಯತೆಯು ಸಮಾಜದ ಒಂದು ಅನಿಷ್ಟ ಪದ್ದತಿಯಾಗಿದೆ. ಇದನ್ನು ಅಳಿಸಿಹಾಕಲು ಅನೇಕ ಮಹನೀಯರು ಶತಮಾನಗಳಿಂದ ಪ್ರಯತ್ನ ಮಾಡಿದರು. ಆದರೆ ಅದು ಇನ್ನೂ ಉಳಿದುಕೊಂಡಿದೆ.

ಭಾರತದ ಸಂವಿಧಾನದ ಆದರ್ಶವು **ಸುಖೀರಾಜ್ಯವನ್ನು** (ವೆಲ್‌ಫೇರ್ ಸ್ಟೇಟ್) ಸ್ಥಾಪಿಸುವುದಾಗಿದೆ.

> ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಎಲ್ಲರಿಗೂ ನೀಡುವ ಗುರಿಯನ್ನು ಇಟ್ಟುಕೊಂಡಿರುವ ರಾಜ್ಯವನ್ನು ಸಾಮಾನ್ಯವಾಗಿ ಸುಖೀರಾಜ್ಯ ಎನ್ನುವರು.

• **ಚುನಾವಣಾ ಪದ್ಧತಿ:** ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಕಳೆದ ಆರು ದಶಕಗಳಿಂದ ಚುನಾವಣೆಗಳು ಸಾಮಾನ್ಯವಾಗಿ ಕಾಲಕಾಲಕ್ಕೆ ನಡೆದಿವೆ. ಈ ಅವಧಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ದೇಶದಲ್ಲಿ ಸಾಕಷ್ಟು ಆಳವಾಗಿ ಬೇರೂರಿದೆ. ಇದರ ಕಾರ್ಯಾಚರಣೆಯಲ್ಲಿ ಕೆಲವು ನ್ಯೂನತೆಗಳು ಕಂಡುಬಂದರೂ ಈ ಪದ್ಧತಿಯು ತೃಪ್ತಿಕರವಾಗಿದೆ.

NOT TO BE REPUBLISHED ©KTBS

### ಹೊಸ ಪದಗಳು

ಸಂವಿಧಾನ ಕರಡು ಸಮಿತಿ – 'ಸಂವಿಧಾನ ಸಭೆ'ಯಲ್ಲಿ ಮಂಡಿಸಲಾದ ಸಂವಿಧಾನದ ಕಚ್ಚಾ ಪ್ರತಿಯನ್ನು (ತಿದ್ದಬೇಕಾದ ಪ್ರತಿ) ಸಿದ್ಧಪಡಿಸಿದ ಸಮಿತಿ.

ಅನುಚ್ಛೇದ – ಸಂವಿಧಾನದ ಒಂದು ಭಾಗ.

ಪ್ರಜಾಸತ್ತೆ – ಪ್ರಜೆಗಳ ಆಳ್ವಿಕೆ, ಪ್ರಜಾಪ್ರಭುತ್ವ.

## ಅಭ್ಯಾಸಗಳು

### ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1 ಸಂವಿಧಾನ ಎಂದರೇನು?

2 ಸಂವಿಧಾನ ಸಭೆಯ ಅಧ್ಯಕ್ಷರು ಯಾರಾಗಿದ್ದರು?

3 ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚನೆಯಲ್ಲಿ ವಹಿಸಿದ ಪಾತ್ರ ಯಾವುದಾಗಿತ್ತು?

4 ಭಾರತವನ್ನು ಯಾವ ದಿನದಂದು ಗಣರಾಜ್ಯವೆಂದು ಘೋಷಣೆ ಮಾಡಲಾಯಿತು?

5 ವಯಸ್ಕ ಮತದಾನ ಪದ್ಧತಿ ಎಂದರೇನು?

6 ಗಣರಾಜ್ಯವೆಂದರೇನು?

7 ಸರ್ವಧರ್ಮಸಮಭಾವ ಎಂದರೇನು?

### ಚರ್ಚಿಸಿ

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ ತತ್ವಗಳು ಮತ್ತು ಆದರ್ಶಗಳ ಬಗ್ಗೆ ಚರ್ಚಿಸಿ.

### ಚಟುವಟಿಕೆಗಳು

1. ನಮ್ಮ ಸಂವಿಧಾನವು ನಮಗೆಲ್ಲರಿಗೂ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಕೊಟ್ಟಿದೆ. ಹಕ್ಕುಗಳು ಹಾಗೂ ಕರ್ತವ್ಯಗಳಲ್ಲಿ ನಿಮ್ಮ ದೃಷ್ಟಿಯಲ್ಲಿ ಯಾವುವು ಮುಖ್ಯ? ಗುಂಪುಗಳಲ್ಲಿ ಚರ್ಚಿಸಿ ನಿಮ್ಮ ಅಭಿಪ್ರಾಯಗಳನ್ನು ಬಿಂದುಗಳ ರೂಪದಲ್ಲಿ ಉಲ್ಲೇಖಿಸಿ.
2. ಸಂವಿಧಾನ ಸಭೆಯಲ್ಲಿನ ಸದಸ್ಯರ ಚಿತ್ರಗಳನ್ನು ಸಂಗ್ರಹಿಸಿ.

NOT TO BE REPUBLISHED @KTBS

R3H4A6

# ಅಧ್ಯಾಯ 10 ಗ್ಲೋಬ್ ಮತ್ತು ನಕಾಶೆಗಳು

**ಪಾಠದ ಪರಿಚಯ**

ಭೂಗೋಳ ವಿಜ್ಞಾನವನ್ನು ಸರಿಯಾಗಿ ಅರಿತುಕೊಳ್ಳಲು ಮಾದರಿ ಗೋಳ (ಗ್ಲೋಬ್) ಮತ್ತು ನಕಾಶೆಗಳು ಉತ್ತಮ ಕಲಿಕಾ ಸಾಧನಗಳಾಗಿವೆ. ಭೂಮಿಯ ಮಾದರಿಯಾದ ಗ್ಲೋಬ್‌ನ ಅರ್ಥ ಮತ್ತು ಉಪಯೋಗಗಳನ್ನು ತಿಳಿಯುವುದು. ನಕಾಶೆಗಳ ಅರ್ಥ, ವಿಧಗಳು ಮತ್ತು ಅವುಗಳ ಉಪಯೋಗಗಳನ್ನು ತಿಳಿಯುವುದು. ನಕಾಶೆಗಳನ್ನು ರಚಿಸಲು ಮತ್ತು ಓದಲು ಬೇಕಾಗುವ ಪ್ರಮುಖ ಚಿಹ್ನೆಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1 ಗ್ಲೋಬ್‌ನ್ನು ಅದರ ಪ್ರಾಮುಖ್ಯತೆ ಮತ್ತು ಉಪಯೋಗಗಳೊಂದಿಗೆ ಅರ್ಥೈಸಿಕೊಳ್ಳುವುದು.

2 ನಕಾಶೆಗಳ ವಿಧಗಳು ಮತ್ತು ಅವುಗಳನ್ನು ರಚಿಸಲು ಬೇಕಾದ ಘಟಕ ಸಂಗತಿಗಳನ್ನು ತಿಳಿಯುವುದು.

3 ನಕಾಶೆಗಳು ಹೊಂದಿರಬಹುದಾದ ಪ್ರಮುಖ ಚಿಹ್ನೆ ಮತ್ತು ಸಂಕೇತಗಳನ್ನು ಮತ್ತು ಅವುಗಳ ಉಪಯೋಗಗಳನ್ನು ಅರಿಯುವುದು.

4 ನಕಾಶೆಗಳಲ್ಲಿರುವ ಭೌಗೋಳಿಕ ಸಂಕೇತ ಮತ್ತು ಚಿಹ್ನೆಗಳನ್ನು ಗ್ರಹಿಸುವುದು.

5 ನಕಾಶೆ ಓದುವ ಕೌಶಲವನ್ನು ಅರಿತುಕೊಳ್ಳುವುದು.

NOT TO BE REPUBLISHED ©KTBS

## 1. ಮಾದರಿ ಗೋಳ (ಗ್ಲೋಬ್)




ಮಾದರಿ ಗೋಳ (ಗ್ಲೋಬ್)

**ಅರ್ಥ:** ವಿಜ್ಞಾನ ತರಗತಿಯಲ್ಲಿ ನೀವು ಭೂಮಿಯ ಆಕಾರ ಮತ್ತು ಗಾತ್ರಗಳನ್ನು ಕುರಿತು ಅಧ್ಯಯನ ಮಾಡಿದ್ದೀರಿ. ಭೂಮಿಯು 'ಜಿಯಾ' (Geoid) ಆಕಾರದಲ್ಲಿದ್ದು ಅದನ್ನು ಮಾದರಿ ಗೋಳಗಳಿಂದ ನಿರೂಪಿಸಬಹುದು. ಕೃತಕ ಉಪ ಗ್ರಹಗಳಿಂದ ಪಡೆದ ಛಾಯಾಚಿತ್ರ ಭೂಮಿಯ ನೈಜ ಚಿತ್ರಣ ಮತ್ತು ಆಕಾರಗಳನ್ನು ತೋರಿಸುತ್ತದೆ. ಆದರೆ ಅದರಲ್ಲಿ ನಾವು ಭೂಮಿಯ ಒಂದು ಭಾಗವನ್ನು ಮಾತ್ರ ನೋಡಬಹುದು. ಭೂಮಿ ಪ್ರತಿರೂಪವಾದ ಮಾದರಿ ಗೋಳವನ್ನು ತಿರುಗಿಸ- ಬಹುದಾದುದರಿಂದ ಭೂಮಿಯ ಪೂರ್ಣ ನೋಟವನ್ನು ಪಡೆಯಲು ಸಾಧ್ಯ.

### ಮಾದರಿ ಗೋಳದ ಲಕ್ಷಣಗಳು

'ಗ್ಲೋಬ್' ಇದು ಭೂಮಿಯ ಒಂದು ಚಿಕ್ಕ ಮಾದರಿಯಾಗಿದೆ. ಇದು ಭೂಮಿಯ ನೈಜ ಗೋಳಾಕಾರವನ್ನು ತೋರಿಸುತ್ತದೆ ಮತ್ತು ಅದು ನಕಾಶೆಯಂತೆ ಸಪಾಟಾದುದಲ್ಲ. ಜೊತೆಗೆ ಹಲವು ಲಕ್ಷಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡುವುದು. ಇದೊಂದು ಸರಳವಾದ ಕಲಿಕಾ ಉಪಕರಣ. ಈ ಮಾದರಿಯನ್ನು ಮೇಜಿನ ಮೇಲೆ ಇಟ್ಟು ತಿರುಗಿಸಿ ಭೂಮಿಯ ವಿವಿಧ ಭೌಗೋಳಿಕ ಪರಿಕಲ್ಪನೆಗಳನ್ನು ತಿಳಿಯಬಹುದು.

### ಉಪಯೋಗಗಳು


ಭೂಮಿಯ ಸ್ಯಾಟಲೈಟ್ ಚಿತ್ರ

ಅ. 'ಗ್ಲೋಬ್' ಭೂಮಿಯ ಆಕಾರವನ್ನು ತಿಳಿಯಲು ಸಹಾಯಕವಾಗುತ್ತದೆ.

ಆ. ಭೂಮಿಯ ಮೇಲಿನ ಖಂಡ, ಸಮುದ್ರ ಮತ್ತು ಸಾಗರಗಳ ಸನ್ನಿವೇಶ, ಗಾತ್ರ ಮತ್ತು ಆಕಾರ ತಿಳಿಯಲು ನೆರವಾಗುತ್ತದೆ.

ಇ. ಇದು ಅಕ್ಷಾಂಶ ಮತ್ತು ರೇಖಾಂಶಗಳಿಂದ ಸ್ಥಳಗಳ ನಿಖರ ಸನ್ನಿವೇಶ ಮತ್ತು ರಾಜಕೀಯ ಗಡಿಗಳನ್ನು ತಿಳಿಯಲು ಸಹಕಾರಿಯಾಗಿದೆ.

ಈ. ಉತ್ತಮ ಮಾದರಿಗೋಳವು ಭೂಅಕ್ಷದ ವಾಲುವಿಕೆ, ಭೂಮಿಯ ಚಲನೆಗಳು, ದೈನಂದಿನ ಮತ್ತು ವಾರ್ಷಿಕ ಚಲನೆ ಹಾಗೂ ಅವುಗಳ ಪರಿಣಾಮ ತಿಳಿಯಲು ಅನುಕೂಲವಾಗಿದೆ. **ಉದಾ:** ಹಗಲು–ರಾತ್ರಿ, ಋತುಗಳು.

ಉ. ಗ್ಲೋಬ್‌ನಿಂದ ಭೂಮಿಯ ಮೇಲಿನ ವಿವಿಧ ಭೌಗೋಳಿಕ, ಸಾಮಾನ್ಯ ಮಾಹಿತಿಗಳನ್ನು ತಿಳಿಯಬಹುದು. ಅವುಗಳೆಂದರೆ: ಪರ್ವತ, ಪ್ರಸ್ಥಭೂಮಿ, ಮೈದಾನ, ಮರುಭೂಮಿ, ದ್ವೀಪಗಳು, ನದಿ, ಹುಲ್ಲುಗಾವಲು ಮತ್ತು ಅರಣ್ಯಗಳು ಇತ್ಯಾದಿ.

## 2. ನಕ್ಷೆಗಳು (ನಕಾಶೆಗಳು)

ಗ್ಲೋಬ್‌ಗಳು ನಮಗೆ ಭೂಮಿಯ ಕುರಿತಾದ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತವೆ. ಆದರೆ ಒಂದು ಸ್ಥಳ, ರಾಜ್ಯ, ದೇಶ ಹಾಗೂ ಇತರ ಭೌಗೋಳಿಕ ಲಕ್ಷಣಗಳ ವಿವರವಾದ ಮಾಹಿತಿ ಪಡೆಯಲು ನಕ್ಷೆಗಳು ಬೇಕಾಗುತ್ತವೆ.

ಭೂಮಿಯ ಪೂರ್ಣ ಅಥವಾ ಭಾಗಶಃ ಭಾಗವನ್ನು ಸಮತಲದ ಮೇಲೆ ಮಾನಕಕ್ಕೆ (Scale) ಅನುಗುಣವಾಗಿ ರೂಪಿಸುವ ಆಕೃತಿಯೇ (ಚಿತ್ರ) ನಕ್ಷೆಯಾಗಿದೆ. ನಕ್ಷೆಯನ್ನು ತಯಾರಿಸುವ ವಿಜ್ಞಾನ ಮತ್ತು ಕಲೆಗೆ **'ನಕ್ಷಾಶಾಸ್ತ್ರ'** (Topography) ಎನ್ನುವರು.

@KTBS NOT TO BE REPUBLISHED

ವಿವಿಧ ಪ್ರಕಾರದ ನಕ್ಷೆಗಳನ್ನು ಸೇರಿಸಿ ತಯಾರಿಸಿದ ಪುಸ್ತಕವನ್ನು **'ಅಟ್ಲಾಸ್'** ಅಥವಾ **'ನಕಾಶೆ ಪುಸ್ತಕ'** ಎನ್ನುವರು.

## ನಕಾಶೆಗಳ ವಿಧಗಳು

ನಕಾಶೆಗಳನ್ನು ಅವುಗಳ ಮಾನಕ ಮತ್ತು ಉದ್ದೇಶಗಳ ಆಧಾರದ ಮೇಲೆ ಅನೇಕ ವಿಧಗಳಾಗಿ ವಿಂಗಡಿಸಲಾಗಿದೆ.

### i) ಮಾನಕ ಆಧಾರಿತ ನಕ್ಷೆಗಳು

ಮಾನಕ ಆಧಾರದ ಮೇಲೆ ನಕ್ಷೆಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ.

**ಅ) ದೊಡ್ಡ ಪ್ರಮಾಣದ ನಕ್ಷೆಗಳು:** ಇವು ಚಿಕ್ಕ ಪ್ರದೇಶವನ್ನು ಪ್ರತಿನಿಧಿಸುತ್ತವೆ. ಇವುಗಳನ್ನು ಕಂದಾಯ ನಕ್ಷೆಗಳು ಮತ್ತು ಸ್ಥಳ ಸ್ವರೂಪ ನಕ್ಷೆಗಳೆಂದು ವಿಂಗಡಿಸಬಹುದು. ಕಂದಾಯ ನಕ್ಷೆಗಳು ವೈಯಕ್ತಿಕ ಆಸ್ತಿ ಬಗ್ಗೆ ಮಾಹಿತಿ ನೀಡುತ್ತವೆ. ಭೂಸ್ವರೂಪ ನಕ್ಷೆಗಳು ಒಂದು ಸ್ಥಳ ಮತ್ತು ಪ್ರದೇಶದ ಹೆಚ್ಚಿನ ಮಾಹಿತಿಯನ್ನು ತೋರಿಸುತ್ತವೆ.

© KTBS
NOT TO BE REPUBLISHED




**ದೊಡ್ಡ ಪ್ರಮಾಣದ ನಕ್ಷೆ** ಮಾಪಕ : 1:25,000

**ಆ) ಚಿಕ್ಕ ಪ್ರಮಾಣದ ನಕ್ಷೆಗಳು :** ಇವು ವಿಶಾಲವಾದ ಪ್ರದೇಶವನ್ನು ನಿರೂಪಿಸುತ್ತವೆ. ಉದಾ : ಪ್ರಪಂಚ, ಖಂಡಗಳು, ದೇಶ ಇತ್ಯಾದಿ. ಇವುಗಳಲ್ಲಿ ಭೂಪಟ ಮತ್ತು ಅಟ್ಲಾಸ್ ಪುಸ್ತಕಗಳೆಂದು ಎರಡು ವಿಧಗಳಿವೆ.




*ಚಿಕ್ಕ ಪ್ರಮಾಣದ ನಕ್ಷೆ*

@KTBS NOT TO BE REPUBLISHED

ಭೂಪಟಗಳು ಅಟ್ಲಾಸ್‌ಗಳಿಗಿಂತ ದೊಡ್ಡವು. ಅವುಗಳನ್ನು ತರಗತಿಗಳಲ್ಲಿ ಬೋಧನ ಸಾಧನವಾಗಿ ಉಪಯೋಗಿಸಲಾಗುವುದು. ಅವು ರಾಜಕೀಯ ವಿಭಾಗಗಳು, ಮೇಲ್ಮೈ ಲಕ್ಷಣಗಳು ಮುಂತಾದ ಸಾಮಾನ್ಯ ಮತ್ತು ಪ್ರಮುಖ ಲಕ್ಷಣಗಳನ್ನು ತೋರಿಸುತ್ತವೆ.

ಅಟ್ಲಾಸ್ ನಕ್ಷೆಗಳು ಚಿಕ್ಕದಾಗಿದ್ದರೂ ಅವು ನಮಗೆ ವಿವರವಾದ ಮಾಹಿತಿಗಳನ್ನು ನೀಡುತ್ತವೆ.

## ii) ಉದ್ದೇಶ ಆಧಾರಿತ ನಕ್ಷೆಗಳು

ಇವು ವಿಷಯಾಧಾರಿತ ನಕ್ಷೆಗಳು, ಅವುಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

**ಅ) ಸ್ವಾಭಾವಿಕ ನಕ್ಷೆಗಳು:** ಇವು ನೈಸರ್ಗಿಕವಾದ ವಿಷಯಗಳಿಗೆ ಸಂಬಂಧಿಸಿದ್ದು ಭೂ ಮೇಲ್ಮೈ ಲಕ್ಷಣಗಳಾದ ಪರ್ವತ, ಪ್ರಸ್ಥಭೂಮಿ, ಬಯಲು ಪ್ರದೇಶ, ನದಿ ಇತ್ಯಾದಿಗಳನ್ನು ತೋರಿಸುತ್ತವೆ.

**ಆ) ರಾಜಕೀಯ ನಕ್ಷೆಗಳು:** ಇವು ರಾಜ್ಯ, ದೇಶ, ಖಂಡ ಮತ್ತು ಅವುಗಳ ಸ್ಥಾನ, ವಿಸ್ತೀರ್ಣ ಇತ್ಯಾದಿಗಳನ್ನು ತೋರಿಸುತ್ತವೆ.

**ಇ) ಹಂಚಿಕೆ ನಕ್ಷೆಗಳು:** ಈ ನಕ್ಷೆಗಳನ್ನು ಭೂಬಳಕೆ, ವಾಯುಗೋಳದ ಉಷ್ಣಾಂಶ, ಮಳೆ, ಜನಸಂಖ್ಯೆ, ಮಣ್ಣು, ಸ್ವಾಭಾವಿಕ ಸಸ್ಯ ವರ್ಗ, ಬೆಳೆಗಳು, ಖನಿಜ, ಕೈಗಾರಿಕೆ, ರೈಲುಮಾರ್ಗ, ರಸ್ತೆ, ಜಲಮಾರ್ಗಗಳು ಇತ್ಯಾದಿ ಹಂಚಿಕೆಯ ಬಗ್ಗೆ ತಿಳಿಯಲು ಉಪಯೋಗಿಸಲಾಗುವುದು.

## ನಕ್ಷೆಯ ಮೂಲಾಂಶಗಳು

ಸಿದ್ಧವಾದ ಉತ್ತಮ ನಕ್ಷೆಯು ಸೂಕ್ತವಾದ ಶೀರ್ಷಿಕೆ, ಮಾನಕ, ಅಕ್ಷಾಂಶ ಮತ್ತು ರೇಖಾಂಶಗಳು, ದಿಕ್ಕು ಮತ್ತು ಸೂಚಿ ಮುಂತಾದ ಅಗತ್ಯವಾದ ಮಾಹಿತಿಗಳನ್ನು ಹೊಂದಿರಬೇಕು.

1. **ಶೀರ್ಷಿಕೆ (ತಲೆಬರಹ):** ಪ್ರತಿಯೊಂದು ನಕ್ಷೆಯು ಅವಶ್ಯಕವಾಗಿ ಶೀರ್ಷಿಕೆಯನ್ನು ಹೊಂದಿರಬೇಕು. ಅದು ನಮಗೆ ಬೇಕಾದ ಒಳವಿಷಯವನ್ನು ತಿಳಿಸುವುದು. ಉದಾ: ಭಾರತದ ಭೌಗೋಳಿಕ ಲಕ್ಷಣಗಳು, ಭಾರತ ರಾಜಕೀಯ ಇತ್ಯಾದಿ.

2. **ಮಾನಕ:** ಮಾನಕವು ಭೂಮಿಯ ಮೇಲಿನ ಎರಡು ಸ್ಥಳಗಳ ಅಂತರವನ್ನು ತಿಳಿಯಲು ನಮಗೆ ಸಹಾಯಕವಾಗಿದೆ. ಭೂಮಿಯ ಮೇಲಿನ ವಾಸ್ತವ ದೂರಕ್ಕೂ (ಅಂತರಕ್ಕೂ) ಮತ್ತು ನಕಾಶೆಯ ಮೇಲಿನ ದೂರಕ್ಕೂ ಇರುವ ಪರಿಮಾಣವೇ ಮಾನಕ, ನಕಾಶೆಯ ಮೇಲಿನ ಎರಡು ಸ್ಥಳಗಳು ತುಂಬಾ ಹತ್ತಿರದಲ್ಲಿವೆ ಎಂದೆನಿಸಿದರೂ ಭೂಮಿಯ ಮೇಲೆ ಅವು ತುಂಬಾ ದೂರದಲ್ಲಿರುತ್ತವೆ.

3. **ಅಕ್ಷಾಂಶ ಮತ್ತು ರೇಖಾಂಶಗಳು:** ಇವು ಕಾಲ್ಪನಿಕ ರೇಖೆಗಳ ಜಾಲವಾಗಿವೆ. ನಕಾಶೆಯ ಮೇಲಿನ ಸ್ಥಳವೊಂದರ ಸ್ಥಾನ, ದೂರ ಮತ್ತು ದಿಕ್ಕುಗಳನ್ನು ಗುರುತಿಸುವುದಕ್ಕೆ ಸಹಾಯವಾಗುತ್ತದೆ.

4. **ದಿಕ್ಕು:** ನಕ್ಷೆಯಲ್ಲಿ 'ಉ' (**N**) ಅಕ್ಷರವುಳ್ಳ ಬಾಣದ ಗುರುತಿನ ಚಿಹ್ನೆಯಿಂದ ಉತ್ತರ ದಿಕ್ಕನ್ನು ಸೂಚಿಸಲಾಗುತ್ತದೆ. ಬಾಣದ ತುದಿ ಉತ್ತರಕ್ಕೆ ನಿರ್ದೇಶಕವಾಗಿರುತ್ತದೆ. ಈ ಚಿಹ್ನೆಯಿಂದ ಒಮ್ಮೆ ಉತ್ತರ ದಿಕ್ಕು ತಿಳಿಯುತ್ತಲೇ ಇತರೆ ದಿಕ್ಕುಗಳನ್ನು ಸರಳವಾಗಿ ಗುರುತಿಸಬಹುದು.

5. **ಸೂಚಿ:** ನಕ್ಷೆಯಲ್ಲಿ ಸೂಚಿಸಲು ಮತ್ತು ಗುರುತಿಸುವುದಕ್ಕಾಗಿ ಬಳಕೆ ಮಾಡುವ ಯಾವುದೇ ಸೂಚಿಗೆ 'ನಕ್ಷಾ ಸೂಚಿ' ಎನ್ನುವರು. ಇದು ನಕಾಶದ ಪ್ರಮುಖ ಮೂಲಾಂಶವಾಗಿದ್ದು, ನಕಾಶೆಯಲ್ಲಿ ತೋರಿಸಿರುವ ಎಲ್ಲ ಲಕ್ಷಣಗಳನ್ನು ಸೂಚಿಸುತ್ತದೆ. ಸೂಚಿಯಲ್ಲಿ ವಿವಿಧ ಬಣ್ಣಗಳು ಮತ್ತು ಭೌಗೋಳಿಕ ಚಿಹ್ನೆಗಳನ್ನು ಬಳಸಲಾಗುತ್ತದೆ. ಉದಾ: ನೀಲಿಬಣ್ಣವು ಜಲರಾಶಿಗಳನ್ನು, ಹಸಿರು ಬಣ್ಣ ಮೈದಾನಗಳನ್ನು ತೋರಿಸುವುದು ಇತ್ಯಾದಿ.

© KTBS NOT TO BE REPUBLISHED




ಉತ್ತರ ದಿಕ್ಕು ನಿರೂಪಣೆ




ನಕ್ಷಾ ಸೂಚಿ

©KTBS NOT TO BE REPUBLISHED

**ನಕಾಶೆಗಳ ಉಪಯೋಗ :** ನಕಾಶೆಗಳು ನಮಗೆ ಹಲವು ರೀತಿಯಲ್ಲಿ ನೆರವಾಗುತ್ತವೆ.

- ನಕಾಶೆಗಳು ನಮಗೆ ನಗರ, ಜಿಲ್ಲೆ, ರಾಜ್ಯ, ದೇಶ, ಖಂಡ ಮುಂತಾದವುಗಳ ಸ್ಥಳ, ನಿರ್ದೇಶನ ತಿಳಿಯಲು ಸಹಾಯವಾಗುತ್ತವೆ.
- ಭೌತಿಕ ಲಕ್ಷಣಗಳಾದ ಪರ್ವತ, ಪ್ರಸ್ಥಭೂಮಿ, ಮರುಭೂಮಿ, ತೀರ ಪ್ರದೇಶ, ದ್ವೀಪ ಮುಂತಾದವುಗಳನ್ನು ಸೂಚಿಸಲು ಸಹಕಾರಿಯಾಗುತ್ತವೆ.
- ಪ್ರದೇಶಗಳ ಸಾರಿಗೆ ಸಂಪರ್ಕ (ರಸ್ತೆ, ರೈಲು, ವಾಯುಮಾರ್ಗಗಳು) ಗಳನ್ನು ಅರಿಯಲು ಅನುಕೂಲವಾಗುತ್ತವೆ.
- ಬೆಳೆಗಳು, ಖನಿಜಗಳು, ಕೈಗಾರಿಕೆಗಳು ಇತ್ಯಾದಿಗಳ ಹಂಚಿಕೆಯನ್ನು ತಿಳಿಯುವುದಕ್ಕೆ ನೆರವಾಗುತ್ತವೆ.
- ಯುದ್ಧ ಹಾಗೂ ರಕ್ಷಣೆಯ ಸಂದರ್ಭಗಳಲ್ಲಿ ಸೈನಿಕರಿಗೆ ಬಹಳ ಉಪಯೋಗವಾಗುತ್ತವೆ.
- ಅವುಗಳು ಪ್ರವಾಸಿಗರಿಗೆ ಮಾರ್ಗದರ್ಶನ ನೀಡುವವು.
- ನಕಾಶೆಗಳು ಒಂದು ಪ್ರಮುಖ ಬೋಧನಾ ಅಥವಾ ಕಲಿಕಾ ಸಾಧನಗಳಾಗಿವೆ ಅವುಗಳನ್ನು ಒಯ್ಯುವುದು ಸುಲಭ.

## 3. ಭೌಗೋಳಿಕ ಸಂಕೇತಗಳು

ಒಂದು ಸಂಕೇತವು ಒಂದು ವಸ್ತುವಿನ ಕಲ್ಪನೆಯ ಚಿಹ್ನೆಯಾಗಿದೆ. ನಕ್ಷೆಯಲ್ಲಿ ಬಳಸುವ ಸಂಕೇತಗಳು ಪ್ರಪಂಚದಾದ್ಯಂತ ಒಂದೇ ರೀತಿಯಾಗಿರುತ್ತವೆ. ಸಂಕೇತಗಳು ವೈವಿಧ್ಯ ಮಾಹಿತಿಗಳನ್ನು ಒದಗಿಸುತ್ತವೆ.

**ಬಣ್ಣಗಳು:** ನೀವು ನಕಾಶೆಯನ್ನು ನೋಡಿದಾಗ ವಿವಿಧ ಬಣ್ಣಗಳನ್ನು ಕಾಣುತ್ತೀರಿ. ಈ ಬಣ್ಣಗಳು ನಕಾಶೆಗಳ ಮೇಲೆ ವಿವಿಧ ಪ್ರಾಕೃತಿಕ ಸಂಗತಿಗಳನ್ನು ತೋರಿಸುತ್ತವೆ. ಪ್ರಾಕೃತಿಕ ನಕಾಶೆಯಲ್ಲಿ ಬಳಸುವ ಮಹತ್ವದ ಬಣ್ಣಗಳೆಂದರೆ,

ಅ) **ನೀಲಿ:** ಜಲಭಾಗಗಳನ್ನು ಸೂಚಿಸುತ್ತದೆ. – ಮಹಾಸಾಗರ, ಸಮುದ್ರ, ಸರೋವರಗಳು ಇತ್ಯಾದಿ.

ಆ) **ಹಸಿರು:** ಮೈದಾನ ಮತ್ತು ತಗ್ಗು ಪ್ರದೇಶಗಳನ್ನು ತೋರಿಸುತ್ತದೆ.

ಇ) **ಹಳದಿ:** ಎತ್ತರವಾದ ಭೂಭಾಗಗಳು ಅಥವಾ ಮೈದಾನಗಳಿಗಿಂತ ಎತ್ತರವಾದ ಭಾಗಗಳನ್ನು ಜಲ ಭಾಗಗಳು ತೋರಿಸುತ್ತದೆ.

ಈ) **ಕಂದು:** ಬೆಟ್ಟಗಳು ಮತ್ತು ಪರ್ವತಗಳಿಗಿಂತ ಕಡಿಮೆ ಭೂಭಾಗಗಳು ಎತ್ತರದ ಭಾಗಗಳನ್ನು ಸೂಚಿಸುತ್ತದೆ.

ಉ) **ಕಡು ಕಂದು ಬಣ್ಣ :** ಅತಿ ಎತ್ತರವಾದ ಪರ್ವತಗಳನ್ನು ನಿರೂಪಿಸುತ್ತದೆ.

ಊ) **ಬಿಳುಪು ಅಥವಾ ನೇರಳೆ ಬಣ್ಣ:** ಹಿಮದಿಂದಾವೃತ ಪ್ರದೇಶಗಳನ್ನು ಸೂಚಿಸುತ್ತವೆ.




*ವರ್ಣ ಸಂಕೇತಗಳು*

ಅಲ್ಲದೆ ರಾಜಕೀಯ ನಕಾಶೆಗಳಲ್ಲಿ ಜಿಲ್ಲೆ ಅಥವಾ ರಾಜ್ಯಗಳಲ್ಲಿ ಕೂಡಲೇ ಗುರುತಿಸುವುದಕ್ಕೆ ವಿವಿಧ ಬಣ್ಣಗಳಿಂದ ಅವುಗಳನ್ನು ಚಿತ್ರಿಸಲಾಗುತ್ತದೆ.




*ಭೌಗೋಳಿಕ ಸಂಕೇತಗಳು*

@KTBS NOT TO BE REPUBLISHED

**ಗೆರೆಗಳು:** ನಕಾಶೆಯ ಮೇಲೆ ರಸ್ತೆ, ರೈಲು, ವಾಯುಮಾರ್ಗ ಇತ್ಯಾದಿ ಜಾಲಗಳನ್ನು ತೋರಿಸಲು ವಿವಿಧ ಬಗೆಯ ಗೆರೆಗಳನ್ನು ವಿವಿಧ ಬಣ್ಣಗಳಿಂದ ಎಳೆಯಲಾಗುವುದು. ಕಪ್ಪು ಬಣ್ಣವನ್ನು ಗಡಿರೇಖೆಗಳು, ಕೆಂಪು ಬಣ್ಣವನ್ನು ರಸ್ತೆಗಳನ್ನು ತೋರಿಸಲು ಇತ್ಯಾದಿಯಾಗಿ ಉಪಯೋಗಿಸಲಾಗುವುದು.

## 4. ನಕಾಶೆಯನ್ನು ಓದುವಿಕೆ

ನಕಾಶೆಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಕೆಲವೊಂದು ಅಂಶಗಳನ್ನು ತಿಳಿದಿರಬೇಕು. ಒಂದು ಅರ್ಥಪೂರ್ಣ ಶಬ್ದ ತಯಾರಿಸಲು ನಿಮಗೆ ಹೇಗೆ ವರ್ಣಮಾಲೆ ತಿಳಿದಿರಬೇಕೋ ಹಾಗೆಯೇ ನಕ್ಷೆ ಓದುವುದರಲ್ಲಿಯೂ ವಿವಿಧ ಬಣ್ಣಗಳು, ರೇಖೆಗಳು ಮತ್ತು ಚಿಹ್ನೆಗಳ ಬಗ್ಗೆಯೂ ತಿಳಿದಿರಬೇಕು.

ನಕಾಶೆ ಓದುವುದು ಒಂದು ಕೌಶಲ, ನಾವೆಲ್ಲರೂ ನಕಾಶೆ ಮೇಲಿನ ಸ್ಥಳ ಮತ್ತು ವಿವಿಧ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಕೆಲವು ಪರಿಣತಿ ಮತ್ತು ಸಾಮಾನ್ಯ ನಿರ್ದೇಶನಗಳನ್ನು ಹೊಂದಿರಬೇಕು. ಅವು ಈ ಕೆಳಕಂಡಂತಿವೆ.




***ನಕ್ಷೆ ಓದುವ ವಿಧಾನದ ನಿರೂಪಣೆ***

*ವಿ.ಸೂ: ಮಾನಕವನ್ನಾಧರಿಸಿ ಗುಲ್ಬರ್ಗ ಮತ್ತು ಬಾಗಲಕೋಟೆ ಜಿಲ್ಲಾ ಕೇಂದ್ರಗಳ ನೇರ ಅಂತರ 222 ಕಿ.ಮೀ.ಗಳಾಗಿರುತ್ತದೆ.*

©KTBS NOT TO BE REPUBLISHED

**1. ಸ್ಥಳ ಗುರುತಿಸುವಿಕೆ:** ಮೇಲಿನ ಸ್ಥಳಗಳನ್ನು ತಿಳಿಯಲು ನಾವು ಅಕ್ಷಾಂಶ ಮತ್ತು ರೇಖಾಂಶಗಳನ್ನು ಅರಿತಿರಬೇಕು.

**2. ದಿಕ್ಕು ಗುರುತಿಸುವಿಕೆ:** ನಕಾಶೆ ಮೇಲಿನ ಸ್ಥಳದ ದಿಕ್ಕನ್ನು ತಿಳಿಯಲು ಉತ್ತರದ ದಿಕ್ಕಿಗೆ ಮುಖ ಮಾಡಿದ ಬಾಣದ ಚಿಹ್ನೆಯನ್ನು ತಿಳಿದರೆ ಉಳಿದ ದಿಕ್ಕುಗಳನ್ನು ಸರಳವಾಗಿ ಗುರುತಿಸಿಕೊಳ್ಳಬಹುದು.

**3. ಸ್ಥಳಗಳ ನಡುವಿನ ಅಂತರ ಗುರುತಿಸುವಿಕೆ:** ಎರಡು ಸ್ಥಳಗಳ ನಡುವಿನ ಅಂತರ ತಿಳಿಯಲು ನಕಾಶೆಯಲ್ಲಿ ಕೊಟ್ಟಿರುವ ಮಾನಕವು ಸಹಕಾರಿಯಾಗುತ್ತದೆ.

### ಹೊಸ ಪದಗಳು

ಮಾದರಿಗೋಳ (ಗ್ಲೋಬ್), ನಕಾಶೆ, ಸನ್ನಿವೇಶ, ಭೌಗೋಳಿಕ ಲಕ್ಷಣ, ಅಟ್ಲಾಸ್, ಮಾನಕ, ನಕ್ಷಾಶಾಸ್ತ್ರ, ಸೂಚಿ, ಶೀರ್ಷಿಕೆ, ಚಿಹ್ನ, ಸಾರಿಗೆ ಸಂಪರ್ಕ.

### ನಿಮಗೆ ತಿಳಿದಿರಲಿ

- ಅತ್ಯಂತ ಪುರಾತನ ನಕಾಶೆಯು ಬಾಬಿಲೋನಿಯದಲ್ಲಿ (ಸಾ.ಶ.ಪೂ. 2300) ಕಂಡುಬಂದರೆ, ಗ್ರೀಕ್‌ನ ಖಗೋಳ ವಿಜ್ಞಾನಿಯಾದ ಕ್ಲಾಡಿಯಸ್ ಟಾಲೆಮಿಯವರ (ಸಾ.ಶ. 90–168) ಅಟ್ಲಾಸ್ ಪ್ರಥಮದ್ದಾಗಿದೆ.
- ವಿಶಾಲ ಪ್ರದೇಶಗಳನ್ನು ತೋರಿಸುವ ನಕಾಶೆಗಳು ಚಿಕ್ಕ ಪ್ರಮಾಣದ ನಕ್ಷೆಗಳಾಗಿದ್ದು, ಚಿಕ್ಕ ಪ್ರದೇಶಗಳನ್ನು ತೋರಿಸುವ ನಕಾಶೆಗಳು ದೊಡ್ಡ ಪ್ರಮಾಣದ ನಕಾಶೆಗಳಾಗಿವೆ.
- ಭೂಗೋಳಶಾಸ್ತ್ರ ಅಧ್ಯಯನದಲ್ಲಿ ನಕಾಶೆಗಳು ನೆರವಾಗುತ್ತವೆ. ಅವು ಬೋಧನ ಸಾಧನಗಳು.
- ಭೂಮಿಯ ಮೇಲಿನ ನಿಖರ ಅಂತರವನ್ನು ತಿಳಿಯಲು ನಾವು ಮಾನಕವನ್ನು ಸೆಂ.ಮೀ.ನಿಂದ ಕಿ.ಮೀ.ಗೆ ಅಥವಾ ಅಂಗುಲದಿಂದ ಮೈಲಿಗೆ ಪರಿವರ್ತಿಸಿಕೊಳ್ಳಬೇಕಾಗುತ್ತದೆ.
- ದಿಕ್ಸೂಚಿಯಲ್ಲಿರುವ ಮುಳ್ಳು ಯಾವಾಗಲೂ ಉತ್ತರ ದಿಕ್ಕನ್ನೇ ತೋರಿಸುತ್ತದೆ.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಮಾದರಿಗೋಳ ಅಥವಾ ಗ್ಲೋಬ್ ಎಂದರೇನು?

2 ಗ್ಲೋಬ್‌ನ ಎರಡು ಉಪಯೋಗಗಳನ್ನು ತಿಳಿಸಿ.

3 ನಕಾಶೆ ಎಂದರೇನು?

4 ನಕಾಶೆಗಳ ವಿವಿಧ ಪ್ರಕಾರಗಳು ಯಾವುವು?

NOT TO BE REPUBLISHED ©KTBS

5 ನಕಾಶೆಗಳ ಎರಡು ಉಪಯೋಗಗಳನ್ನು ತಿಳಿಸಿ.

6 ಅಟ್ಲಾಸ್ ಅಥವಾ ನಕಾಶೆ ಪುಸ್ತಕ ಎಂದರೇನು?

7 ಮಾನಕ ಎಂದರೇನು?

8 ಭೌಗೋಳಿಕ ಸಂಕೇತಗಳು ಎಂದರೇನು?

9 ನಕ್ಷೆಯ ಪ್ರಮುಖ ಮೂಲಾಂಶಗಳಾವುವು?

10 ನಕ್ಷೆಯಲ್ಲಿ ಜಲರಾಶಿಗಳನ್ನು ತೋರಿಸಲು ಯಾವ ಬಣ್ಣವನ್ನು ಉಪಯೋಗಿಸಲಾಗುವುದು.

## ಚಟುವಟಿಕೆಗಳು

1 ಕಾಗದ, ರಬ್ಬರ್ ಚಂಡು ಅಥವಾ ಇನ್ನಿತರ ವಸ್ತುಗಳಿಂದ ಯಥಾವತ್ತಾಗಿ ಭೂಗೋಳದ ಮಾದರಿ ತಯಾರಿಸುವುದು.

2 ವಿವಿಧ ಪ್ರಕಾರದ ನಕ್ಷೆಗಳನ್ನು ಇಟ್ಟುಕೊಂಡು ಅವುಗಳ ಪ್ರಮುಖ ವ್ಯತ್ಯಾಸಗಳನ್ನು ಗುರುತಿಸುವುದು.

3 ಭಾರತದ ಬಾಹ್ಯಾನಕ್ಷೆಯಲ್ಲಿ ಸೂಕ್ತ ಬಣ್ಣಗಳನ್ನು ಉಪಯೋಗಿಸಿ:

ಅ) ಭಾರತದ ಪ್ರಾಕೃತಿಕ ಲಕ್ಷಣಗಳನ್ನು ಗುರುತಿಸುವುದು.

ಆ) ಭಾರತವನ್ನಾವರಿಸಿರುವ ಸಾಗರ ಮತ್ತು ಸಮುದ್ರಗಳಿಗೆ ಬಣ್ಣ ಹಾಕುವುದು ಮತ್ತು ಹೆಸರಿಸುವುದು.

@KTBS NOT TO BE REPUBLISHED

ಅಧ್ಯಾಯ 11

# ಭೂಮಿಯ ಸ್ವರೂಪ

A1A3V4

**ಪಾಠದ ಪರಿಚಯ**

ಈ ಪಾಠದಲ್ಲಿ ಭೂಮಿಯ ಮೇಲ್ಮೈ, ಅದರ ವೈವಿಧ್ಯ ಭೂಸ್ವರೂಪಗಳನ್ನು – ಪರ್ವತ, ಪ್ರಸ್ಥಭೂಮಿ, ಮೈದಾನ, ಮರುಭೂಮಿ, ದ್ವೀಪಗಳು, ಅವುಗಳ ಅರ್ಥ, ಉಗಮ ಮತ್ತು ಪ್ರಾಮುಖ್ಯತೆ, ಪ್ರಪಂಚದ ಪ್ರಮುಖ ಸ್ವಾಭಾವಿಕ ಪ್ರದೇಶಗಳನ್ನು ಕುರಿತ ಪರಿಚಯ.

**ಸಾಮರ್ಥ್ಯಗಳು**

1 ಭೂಸ್ವರೂಪಗಳನ್ನು ಅರ್ಥೈಸಿಕೊಳ್ಳುವುದು.
2 ಭೂಮಿಯ ಮೇಲಿನ ಪ್ರಮುಖ ಭೂ ಸ್ವರೂಪಗಳ ಉಗಮ ಮತ್ತು ಪ್ರಾಮುಖ್ಯತೆಗಳ ಬಗ್ಗೆ ತಿಳಿದುಕೊಳ್ಳುವುದು.
3 ಪೃಥ್ವಿಯ ಕೆಲವು ಪ್ರಮುಖ ಭೂ ಸ್ವರೂಪಗಳ ಬಗ್ಗೆ ತಿಳಿಯುವುದು.
4 ಪ್ರಪಂಚದ ಪ್ರಮುಖ ಸ್ವಾಭಾವಿಕ ಪ್ರದೇಶಗಳನ್ನು ಅರಿಯುವುದು.

© KTBS NOT TO BE REPUBLISHED

## 1. ಪ್ರಮುಖ ಭೂಸ್ವರೂಪಗಳು

ಸುತ್ತಲೂ ಒಮ್ಮೆ ನೋಡಿದಾಗ ಭೂಮೇಲ್ಮೈ ಎಲ್ಲಿಯೂ ಏಕ ಪ್ರಕಾರವಾಗಿಲ್ಲವೆಂಬುದನ್ನು ತಿಳಿಯಬಹುದು. ಕೆಲವು ಸ್ಥಳಗಳಲ್ಲಿ ಭೂಭಾಗವು ಎತ್ತರವಾಗಿದ್ದರೆ ಇನ್ನು ಕೆಲವೆಡೆ ಅದು ತಗ್ಗಾಗಿದೆ. ಕೆಲವು ಪ್ರದೇಶಗಳು ಸಂಪೂರ್ಣ ಸಮತಟ್ಟಾಗಿದ್ದರೆ ಮತ್ತೆ ಕೆಲವು ಭಾಗ ಬೆಟ್ಟ ಗುಡ್ಡಗಳಿಂದ ಕೂಡಿದೆ. ಇನ್ನೂ ಕೆಲ ಭಾಗಗಳು ಬಹಳ ತಗ್ಗಾಗಿರುತ್ತವೆ. ಆದ್ದರಿಂದ ಅನೇಕ ಮೇಲ್ಮೈ ಲಕ್ಷಣಗಳನ್ನು ಭೂಮೇಲ್ಭಾಗದಲ್ಲಿ ಕಾಣಬಹುದು. ಅವುಗಳೆಂದರೆ ಪರ್ವತ, ಬೆಟ್ಟ, ಕಣಿವೆ, ಮೈದಾನ, ಮರುಭೂಮಿ ಮತ್ತು ದ್ವೀಪಗಳು, ವಿವಿಧ ಭೂಮೇಲ್ಮ ಲಕ್ಷಣಗಳನ್ನು 'ಭೂಸ್ವರೂಪಗಳು' ಎಂದು ಕರೆಯಲಾಗಿದೆ.

ಯಾವುದೇ ಭೂಸ್ವರೂಪವು ಶಾಶ್ವತವಲ್ಲ, ಅವು ಬದಲಾಗುತ್ತವೆ. ನೀವಿಂದು ನೋಡುತ್ತಿರುವ ಯಾವುದೇ ಭೂಸ್ವರೂಪವೂ ತನ್ನ ಮೂಲಸ್ವರೂಪವನ್ನು ಹೊಂದಿಲ್ಲ. ಭೂಮಿಯ ಮೇಲ್ಭಾಗವು ಆಂತರಿಕ ಮತ್ತು ಬಾಹ್ಯ ಶಕ್ತಿಗಳ ಕಾರ್ಯಾಚರಣೆಯಿಂದ ಬದಲಾಗುತ್ತದೆ.

ಮಾನವನ ಜೀವನ ಮತ್ತು ಆತನ ಚಟುವಟಿಕೆಗಳ ಮೇಲೆ ಭೂಸ್ವರೂಪಗಳು ಮಹತ್ವದ ಪ್ರಭಾವ ಬೀರುತ್ತವೆ.

### ಭೂಸ್ವರೂಪಗಳ ವಿಧಗಳು

ಭೂಸ್ವರೂಪಗಳನ್ನು ಮೂರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: i. ಪರ್ವತಗಳು, ii. ಪ್ರಸ್ಥಭೂಮಿಗಳು ಮತ್ತು iii. ಮೈದಾನಗಳು.

## i. ಪರ್ವತಗಳು

ಪರ್ವತಗಳು ಅತ್ಯಂತ ಪ್ರಮುಖ ಹಾಗೂ ಸ್ಫೂರ್ತಿದಾಯಕ ಭೂಸ್ವರೂಪಗಳು. ಅವು ಪೃಥ್ವಿಯ ಮೇಲ್ಕೆಯಲ್ಲಿ ಸುತ್ತಲಿನ ಪ್ರದೇಶಗಳಿಗಿಂತ ಎತ್ತರವುಳ್ಳ ಹಾಗೂ ಮೇಲಕ್ಕೆತ್ತಲ್ಪಟ್ಟ ಭೂಭಾಗಗಳು. ಕಡಿದಾದ ಇಳಿಜಾರುಗಳು ಮತ್ತು ಶಿಖರಗಳನ್ನು ಹೊಂದಿದ್ದು ಸಮುದ್ರಮಟ್ಟದಿಂದ ಸಾವಿರ ಮೀಟರ್‌ಗಳಿಗೂ ಎತ್ತರವಾದವು. ಪರ್ವತದ ಅತ್ಯಂತ ಎತ್ತರವುಳ್ಳ ತುದಿಗೆ 'ಶಿಖರ' ಎನ್ನುವರು.

ಬೆಟ್ಟವೂ ಸಹ ಪೃಥ್ವಿಯ ಒಂದು ನೈಸರ್ಗಿಕ ಎತ್ತರವುಳ್ಳ ಭಾಗ. ಆದರೆ ಅದು ಪರ್ವತವೊಂದರಷ್ಟು ಎತ್ತರವುಳ್ಳದ್ದಲ್ಲ. ಬೆಟ್ಟಗಳು ಸಾಮಾನ್ಯವಾಗಿ 600 ಮೀಟರ್ ಎತ್ತರವುಳ್ಳವು. ಅವುಗಳ ಇಳಿಜಾರುಗಳು ಅಷ್ಟೊಂದು ಕಡಿದಾಗಿಲ್ಲ.

ಶಿಖರಗಳನ್ನುಳ್ಳ ಅಥವಾ ಇಲ್ಲದ ಪರ್ವತಗಳ ಸಾಲನ್ನು 'ಪರ್ವತ ಸರಣಿ' ಎನ್ನುವರು. ಉದಾ: ಹಿಮಾಲಯ (ಏಷ್ಯ), ಆಲ್ಪ್ಸ್(ಯೂರೋಪ್), ಆ್ಯಂಡೀಸ್ (ದ.ಅಮೆರಿಕ), ರಾಕಿ (ಉತ್ತರ ಅಮೆರಿಕ) ಇತ್ಯಾದಿ.




*ಭೂಮಿಯ ಮೇಲಿನ ವಿವಿಧ ಭೂಸ್ವರೂಪಗಳು*

© KTBS NOT TO BE REPUBLISHED

### ಪರ್ವತಗಳ ವಿಧಗಳು

ಪರ್ವತಗಳು ಸಾಮಾನ್ಯವಾಗಿ ಶಿಲಾಸ್ತರಗಳ ಮಡಿಕೆ ಮತ್ತು ಜ್ವಾಲಾಮುಖಿಗಳಂತಹ ಆಂತರಿಕ ಶಕ್ತಿಗಳಿಂದ ನಿರ್ಮಾಣವಾಗುತ್ತವೆ. ಅವು ಸಾಮಾನ್ಯವಾಗಿ ಕಠಿಣ ಶಿಲೆಗಳಿಂದ ರಚಿತವಾದವು. ಪರ್ವತಗಳು ಪುರಾತನ ಅಥವಾ ಇತ್ತೀಚೆಗೆ ನಿರ್ಮಾಣಗೊಂಡವು. ಹಿಮಾಲಯ ಮತ್ತು ಆಲ್ಪ್ಸ್ ಪರ್ವತಗಳು ಇತ್ತೀಚಿನ ಪರ್ವತಗಳು. ಆದರೆ ಅಪಲೇಷಿಯನ್ (ಉತ್ತರ ಅಮೆರಿಕ) ಮತ್ತು ಅರಾವಳಿ (ಭಾರತ) ಸರಣಿಗಳು ಪುರಾತನ ಕಾಲದ ಪರ್ವತಗಳಾಗಿರುತ್ತವೆ. ಅತ್ಯಂತ ಎತ್ತರವುಳ್ಳ ಪರ್ವತಗಳ ಅತಿ ಎತ್ತರ ಭಾಗಗಳು ಹಿಮದಿಂದಾವೃತವಾಗಿವೆ.

ನಿರ್ಮಾಣದ ಆಧಾರದ ಮೇಲೆ ಪರ್ವತಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

ಅ) ಮಡಿಕೆ ಪರ್ವತಗಳು, ಅ) ಖಂಡ ಪರ್ವತಗಳು ಮತ್ತು ಇ) ಜ್ವಾಲಾಮುಖಿಜನಿತ ಪರ್ವತಗಳು.

**ಅ. ಮಡಿಕೆ ಪರ್ವತಗಳು:** ಇವು ಶಿಲಾಸ್ತರಗಳು ಮುದುಡಿಕೊಳ್ಳುವುದರಿಂದ ನಿರ್ಮಾಣವಾಗುವುವು. ಅವು ಅತೀ ಎತ್ತರವುಳ್ಳ ಪರ್ವತಗಳು. ಉದಾ: ಹಿಮಾಲಯ ಮತ್ತು ಆಲ್ಫ್ಸ್.

**ಆ. ಖಂಡ ಪರ್ವತಗಳು:** ಎರಡು ಸಮಾನಾಂತರ ಶಿಲಾಸ್ತರಭಂಗಗಳ ನಡುವಣ ಭಾಗವು ಮೇಲಕ್ಕೆತ್ತಲ್ಪಡುವುದರಿಂದ ನಿರ್ಮಾಣವಾಗುತ್ತವೆ. ಅವುಗಳು ಅತೀ ಎತ್ತರವಾಗಿಲ್ಲ. ಉದಾ: ಸಿಯೆರ್ರ ನಿವೇಡ (ಉತ್ತರ ಅಮೆರಿಕ) ಮತ್ತು ವಾಸ್ಜೆಸ್ (*Vasges*) (ಯುರೋಪ್).

**ಇ. ಜ್ವಾಲಾಮುಖಿಜನಿತ ಪರ್ವತಗಳು:** ಇವು ಜ್ವಾಲಾಮುಖಿ ಸ್ಫೋಟಿತ ವಸ್ತುಗಳು ರಾಶಿಗೊಂಡು ನಿರ್ಮಾಣವಾಗುತ್ತವೆ. ಅವುಗಳ ತಳ ವಿಸ್ತಾರವಾಗಿದ್ದು, ಎತ್ತರವಾದ ಶಂಖಾಕೃತಿಯ ಶಿಖರಗಳನ್ನೊಳಗೊಂಡಿವೆ. ಉದಾ: ಜಪಾನಿನ ಪ್ಯೂಜಿಯಾಮ ಮತ್ತು ಆಫ್ರಿಕಾದ ಕಿಲಿಮಂಜಾರೊ.

**ಪರ್ವತಗಳ ಪ್ರಾಮುಖ್ಯ:** ಪರ್ವತಗಳು ಹಲವು ಮಹತ್ವವುಳ್ಳವು. ಅವುಗಳೆಂದರೆ,

- ಎರಡು ದೇಶಗಳ ನಡುವೆ ಸ್ವಾಭಾವಿಕ ಗಡಿಗಳನ್ನು ನಿರ್ಮಿಸುತ್ತವೆ.
- ಪರ್ವತಗಳು ನೈಸರ್ಗಿಕ ಸಂಪನ್ಮೂಲಗಳ ಉಗ್ರಾಣಗಳಾಗಿವೆ.
- ಜಲವಿದ್ಯುಚ್ಛಕ್ತಿ ತಯಾರಿಕೆಗೆ ನೀರನ್ನು ಪೂರೈಸುತ್ತವೆ.
- ನದಿಗಳ ಉಗಮ ಸ್ಥಾನಗಳಾಗಿವೆ.
- ವಾಯುಗುಣದ ಮೇಲೆ ಉತ್ತಮ ಪರಿಣಾಮ ಬೀರುತ್ತವೆ.
- ರಮಣೀಯವಾದ ದೃಶ್ಯಗಳನ್ನು ಹೊಂದಿದ್ದು, ಅವು ಪ್ರವಾಸಿತಾಣಗಳಾಗಿವೆ.
- ನೆಡುತೋಪು ಬೆಳೆ (ಪ್ಲಾಂಟೇಷನ್)ಗಳಿಗೆ ಪೂರಕವಾಗಿವೆ.

### ii. ಪ್ರಸ್ಥಭೂಮಿಗಳು

ಅವು ಸಮತಟ್ಟಾದ ಮೇಲ್ಭಾಗ ಮತ್ತು ಕಡಿದಾದ ಬದಿಗಳಿಂದ ಕೂಡಿವೆ. ಇವುಗಳನ್ನು **'ಪೀಠಭೂಮಿ'**ಗಳೆಂದು ಕೂಡ ಕರೆಯುತ್ತಾರೆ.

ಸಾಮಾನ್ಯವಾಗಿ ಪ್ರಸ್ಥಭೂಮಿಗಳು ಸುತ್ತಲಿನ ಪ್ರದೇಶಗಳಿಗಿಂತ ಒಮ್ಮೆಲೇ ಎತ್ತರವಾಗಿದ್ದು, ಸಣ್ಣ ಪ್ರಮಾಣದ ಏರಿಳಿತಗಳನ್ನು ಹೊಂದಿರುತ್ತವೆ. ಕೆಲವು ಪ್ರಸ್ಥಭೂಮಿಗಳು ವಿಶಾಲವಾಗಿವೆ. ನಮ್ಮ ಭಾರತದ **ದಖನ್ ಪ್ರಸ್ಥಭೂಮಿ**ಯು ಅದಕ್ಕೊಂದು ಉದಾಹರಣೆಯಾಗಿದೆ. ಇನ್ನು ಕೆಲವು ಪ್ರಸ್ಥಭೂಮಿಗಳು ಸಮುದ್ರಮಟ್ಟದಿಂದ ಅತೀ ಎತ್ತರದಲ್ಲಿರುತ್ತವೆ. ಉದಾ: ಟಿಬೆಟಿನ ಪ್ರಸ್ಥಭೂಮಿ.

@KTBS NOT TO BE REPUBLISHED

ಇದು ಜಗತ್ತಿನಲ್ಲಿ ಅತೀ ಎತ್ತರದಲ್ಲಿರುವ ಪ್ರಸ್ಥಭೂಮಿಯಾಗಿದ್ದು, ಇದನ್ನು ಪ್ರಪಂಚದ ಮೇಲ್ಛಾವಣಿ ಎಂದು ಕರೆಯುತ್ತಾರೆ, ಕೆಲವು ಪ್ರಸ್ಥಭೂಮಿಗಳು ತಗ್ಗು ಭಾಗದಲ್ಲೂ ಇವೆ. ಪ್ರಸ್ಥಭೂಮಿಗಳು ಕಠಿಣ ಶಿಲೆಗಳಿಂದ ಕೂಡಿವೆ. ಅಂತಹ ಶಿಲೆಗಳು ಸಮೃದ್ಧ ಖನಿಜಗಳಿಂದ ಕೂಡಿವೆ. ಕರ್ನಾಟಕದ ನೈಋತ್ಯ ಭಾಗವೊಂದು ಪ್ರಸ್ಥಭೂಮಿಯಾಗಿದೆ.

### ಪ್ರಸ್ಥಭೂಮಿಯ ವಿಧಗಳು

ಪ್ರಸ್ಥಭೂಮಿಗಳನ್ನು ಮೂರು ಪ್ರಕಾರಗಳಾಗಿ ವಿಂಗಡಿಸಲಾಗಿದೆ: (ಅ) ಅಂತರಪರ್ವತ ಪ್ರಸ್ಥಭೂಮಿ, (ಆ) ಪರ್ವತಪಾದ ಪ್ರಸ್ಥಭೂಮಿ, ಮತ್ತು (ಇ) ಖಂಡಾಂತರ ಪ್ರಸ್ಥಭೂಮಿಗಳು.

ಅ. **ಅಂತರಪರ್ವತ ಪ್ರಸ್ಥಭೂಮಿಗಳು** ಸುತ್ತಲೂ ಪರ್ವತ ಸರಣಿಗಳಿಂದ ಸುತ್ತುವರೆದಿರುತ್ತವೆ ಉದಾ: ಟಿಬೆಟ್ ಪ್ರಸ್ಥಭೂಮಿ (ಏಷ್ಯ), ಬೊಲಿವಿಯ ಪ್ರಸ್ಥಭೂಮಿ (ದಕ್ಷಿಣ ಅಮೆರಿಕ).

ಆ. **ಪರ್ವತಪಾದ ಪ್ರಸ್ಥಭೂಮಿಗಳು** ಒಂದು ಕಡೆ ಪರ್ವತಗಳಿಂದಲೂ ಮತ್ತು ಇನ್ನೊಂದು ಕಡೆ ಮೈದಾನ ಅಥವಾ ಸಾಗರಗಳಿಂದ ಸುತ್ತುವರಿದಿರುತ್ತವೆ. ಉದಾ: ಪಟಗೋನಿಯ ಪ್ರಸ್ಥಭೂಮಿ (ದಕ್ಷಿಣ ಅಮೆರಿಕ).

ಇ. **ಖಂಡಾಂತರ ಪ್ರಸ್ಥಭೂಮಿಗಳು** ಖಂಡಾಂತರ ಭಾಗ ಮೇಲಕ್ಕೆತ್ತುವಿಕೆ ಅಥವ ಶಿಲಾಪಾಕದ ಹರಡುವಿಕೆಯಿಂದ ನಿರ್ಮಾಣವಾದವು. ಉದಾ: ವಾಯವ್ಯ ದಖನ್ ಪ್ರಸ್ಥಭೂಮಿ (ಭಾರತ).

**ಪ್ರಸ್ಥಭೂಮಿಗಳ ಪ್ರಾಮುಖ್ಯ:** ಪ್ರಸ್ಥಭೂಮಿಗಳು

- ಖನಿಜ ಸಂಪತ್ತಿನ ಉಗ್ರಾಣಗಳಾಗಿವೆ.
- ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತವಾಗಿವೆ.
- ಫಲವತ್ತಾದ ಮಣ್ಣು ಹೊಂದಿದ್ದು, ಕೃಷಿಗೆ ಪೂರಕವಾಗಿವೆ.
- ಪ್ರಾಣಿಗಳನ್ನು ಸಾಕಲು ಉಪಯುಕ್ತವಾಗಿವೆ.

### iii. ಮೈದಾನಗಳು

ವಿಶಾಲವಾದ ಸಮತಟ್ಟಾದ ಅಥವಾ ಸ್ವಲ್ಪವೇ ಏರಿಳಿತಗಳುಳ್ಳ ತಗ್ಗಾದ ಭೂಭಾಗಗಳನ್ನು 'ಮೈದಾನ' ಗಳೆಂದು ಕರೆಯುವರು. ಇವು ಹಲವು ಆರ್ಥಿಕ ಮಹತ್ವಗಳನ್ನು ಪಡೆದಿವೆ.

ಬಹಳಷ್ಟು ಮೈದಾನಗಳು, ನದಿಗಳು ಸವೆಸಿ, ಸಾಗಿಸಿ ತಂದ ರೇವೆ, ಮಡ್ಡಿ ಮತ್ತು ಮರಳಿನಂತಹ ವಸ್ತುಗಳ ಸಂಚಯದಿಂದ ನಿರ್ಮಾಣವಾಗಿವೆ. ಮತ್ತೆ ಕೆಲವು ಮೈದಾನಗಳು ಹಿಮನದಿ, ಮಾರುತ ಹಾಗೂ ಅಲೆಗಳ ಕಾರ್ಯಗಳಿಂದ ರಚನೆಯಾಗಿವೆ. ನೀವು ನದಿ ಕಣಿವೆ ಮತ್ತು ಸಮುದ್ರತೀರಗಳ ಉದ್ದಕ್ಕೂ ಅನೇಕ ಮೈದಾನಗಳನ್ನು ನೋಡಬಹುದು. ಉದಾ: ಗಂಗಾ ನದಿ ಬಯಲು ಮತ್ತು ಅದರ ಮುಖಜ ಭೂಮಿ.

@KTBS NOT TO BE REPUBLISHED

**ಮೈದಾನಗಳ ವಿಧಗಳು:** ಮೈದಾನಗಳನ್ನು ರಚನಾ ಮೈದಾನಗಳು, ಸವೆತದಿಂದಾದ ಮೈದಾನಗಳು ಮತ್ತು ಸಂಚಯನದಿಂದಾದ ಮೈದಾನಗಳೆಂದು ಮೂರು ವಿಧಗಳಾಗಿ ವಿಂಗಡಿಸಬಹುದು.

**ಅ. ರಚನಾ ಮೈದಾನಗಳು:** ಸಮುದ್ರದ ತಳಭಾಗವು ಮೇಲಕ್ಕೆತ್ತಲ್ಪಡುವುದರಿಂದಲೋ ಅಥವಾ ಯಾವುದಾದರೊಂದು ಭಾಗವು ತಗ್ಗಾಗುವುದರಿಂದಲೂ ನಿರ್ಮಾಣವಾಗುತ್ತವೆ. ಉದಾ: ಅಮೆರಿಕ ಸಂಯುಕ್ತ ಸಂಸ್ಥಾನದ (ಯುಎಸ್ಎ) ಆಗ್ನೇಯದ ಮೈದಾನ.

**ಆ. ಸವೆತದಿಂದಾದ ಮೈದಾನಗಳು:** ಇವು ಪರ್ವತ ಮತ್ತು ಪ್ರಸ್ಥಭೂಮಿಗಳು ಸವೆತಕ್ಕೊಳಗಾಗಿ ತಗ್ಗು ಮೈದಾನಗಳಾಗುವುದರಿಂದ ನಿರ್ಮಾಣವಾಗುತ್ತವೆ. ಉದಾ: ಸೈಬೀರಿಯಾದ ಪಶ್ಚಿಮ ಭಾಗ.

**ಇ. ಸಂಚಯನದಿಂದಾದ ಮೈದಾನಗಳು:** ನದಿ, ಹಿಮನದಿ, ಮಾರುತ ಮೊದಲಾದ ನೈಸರ್ಗಿಕ ಕರ್ತೃಗಳು ಹೊತ್ತು ತಂದ ಮೆಕ್ಕಲು-ಮಡ್ಡಿಗಳ ಸಂಚಯನದಿಂದ ನಿರ್ಮಾಣವಾದವು ಉದಾ: ಸಿಂಧೂ-ಗಂಗಾ ನದಿ ಬಯಲು.

**ಮೈದಾನಗಳ ಪ್ರಾಮುಖ್ಯ**

- ಫಲವತ್ತಾದ ಮಣ್ಣು ಮತ್ತು ಸಮತಟ್ಟಾದ ಭೂಮಿಯನ್ನು ಹೊಂದಿವೆ.
- ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಉಪಯುಕ್ತವಾಗಿವೆ.
- ಸಾರಿಗೆ ಸಂಪರ್ಕದ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿವೆ.
- ನಾಗರಿಕತೆ ಕೇಂದ್ರಗಳ ನಾಡು, ಮರುಭೂಮಿಗಳು.
- ಪಟ್ಟಣ ಮತ್ತು ನಗರಗಳ ಬೆಳವಣಿಗೆಗೆ ನೆರವಾಗುತ್ತವೆ.

**ಮರುಭೂಮಿಗಳು :** ಮೇಲ್ಮೈ ಲಕ್ಷಣಗಳಿಂದಾಗಿ ಪರ್ವತ, ಪ್ರಸ್ಥಭೂಮಿ ಮತ್ತು ಮೈದಾನಗಳು ಪರಸ್ಪರ ಭಿನ್ನವಾಗಿವೆ. ವಾಯುಗುಣದ ಪರಿಣಾಮದಿಂದಾಗಿ ಮರುಭೂಮಿಗಳು ನಿರ್ಮಾಣವಾಗಿವೆ. ಅವು ಹಗಲಿನ ವೇಳೆಯಲ್ಲಿ ಅತಿ ಶಾಖದಿಂದಲೂ ಮತ್ತು ರಾತ್ರಿ ವೇಳೆಯಲ್ಲಿ ಶೀತವಾಗಿರುತ್ತವೆ. ಕನಿಷ್ಠ ಪ್ರಮಾಣದ ಮಳೆಯನ್ನು ಪಡೆಯುತ್ತವೆ ಹಾಗೂ ಅವು ಪ್ರಮುಖವಾಗಿ ಶುಷ್ಕವಾಗಿರುತ್ತವೆ. ಆದುದರಿಂದ 'ಮರುಭೂಮಿ ಒಂದು ವಿಸ್ತಾರವಾದ ಶುಷ್ಕ ಪ್ರದೇಶ'. ಭೂಮೇಲ್ಮೈಯಲ್ಲಿ ಐದನೇ ಒಂದು ಭಾಗವು ಮರುಭೂಮಿಗಳಿಂದಾವೃತ್ತವಾಗಿದೆ. ಮರುಭೂಮಿಗಳು ಶಿಲಾಮಯ ಅಥವಾ ಮರಳು ಮಯವಾಗಿರಬಹುದು. ಅಂಟಾರ್ಕ್ಟಿಕ ಮತ್ತು ಯೂರೋಪ್‌ಗಳನ್ನು ಹೊರತುಪಡಿಸಿ ಉಳಿದೆಲ್ಲ ಖಂಡಗಳಲ್ಲಿ ಮರುಭೂಮಿಗಳಿವೆ. ಸಹರಾ ಪ್ರಪಂಚದಲ್ಲೇ ವಿಶಾಲವಾದ ಮರುಭೂಮಿ.

ಕೆಲವು ಮರುಭೂಮಿಗಳ ನಡುವೆ ಓಯಸಿಸ್‌ಗಳಿವೆ. ಮರುಭೂಮಿಯ ಯಾವ ಭಾಗದಲ್ಲಿ ಅಂತರ್ಜಲವು ಚಿಲುಮೆಯ ರೂಪದಲ್ಲಿ ಹೊರಬರುವುದೋ ಅದನ್ನು ಓಯಸಿಸ್ ಎನ್ನುವರು. ಇದು ಅಲ್ಲಿಯ ಸಸ್ಯ ಮತ್ತು ಮಾನವ ವಸತಿಗಳ ಬೆಳವಣಿಗೆಗೆ ನೆರವಾಗುವುದು.

© KTBS NOT TO BE REPUBLISHED

**ಮರುಭೂಮಿಯ ಪ್ರಾಮುಖ್ಯತೆ :** ಮರುಭೂಮಿಗಳಲ್ಲಿ ಅಲೆಮಾರಿ ಜನರೇ ಹೆಚ್ಚು. ಅವರು ತಮ್ಮ ಜಾನುವಾರುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಅಲೆದಾಡುವರು. ಮರುಭೂಮಿಯ ಮಣ್ಣು ಅಷ್ಟೊಂದು ಫಲವತ್ತಾಗಿಲ್ಲ. ನೀರು ದೊರೆಯುವ ಕಡೆ ಬೆಳೆಗಳನ್ನು ಬೆಳೆಯಬಹುದು. ಉದಾ: ಈಜಿಪ್ಟ್‌ನ ನೈಲ್ ನದಿ ಕಣಿವೆ. ಕೆಲವು ಮರುಭೂಮಿಗಳು ಸಮೃದ್ಧ ಖನಿಜ ಸಂಪತ್ತು ಹೊಂದಿವೆ. ಉದಾ: ಸೌದಿ ಅರೇಬಿಯಾದ, ಕುವೈತ್‌ನಲ್ಲಿರುವ ಪೆಟ್ರೋಲಿಯಂ ಇತ್ಯಾದಿ.



ಮರುಭೂಮಿ



ಓಯಸಿಸ್

## ದ್ವೀಪಗಳು

ದ್ವೀಪವೆಂದರೆ ಸಾಗರ, ಸಮುದ್ರ, ಸರೋವರ ಅಥವಾ ನದಿಗಳಲ್ಲಿ ಸುತ್ತಲೂ ನೀರಿನಿಂದಾವರಿಸಿದ ಚಿಕ್ಕ ಭೂಭಾಗ. ಇದು ಒಂದು ವಿಧದ ಭೂಸ್ವರೂಪ. ಅತಿ ಚಿಕ್ಕದ್ವೀಪಗಳನ್ನು ಕಿರುದ್ವೀಪ' (islets) ಎನ್ನುವರು. ನದಿ ಮತ್ತು ಸರೋವರಗಳ ನಡುವಣ ದ್ವೀಪಗಳಿಗೆ 'ನಡುಗಡ್ಡೆ'ಗಳೆಂದು ಕರೆಯುವರು. ಭೌಗೋಳಿಕ ದೃಷ್ಟಿಯಲ್ಲಿ ದ್ವೀಪಗಳ ಗುಂಪನ್ನು 'ದ್ವೀಪಸ್ತೋಮ' (ಸಮೂಹ) ಎನ್ನುವರು. ಉದಾ: ಟಿಯರ್‌-ಡೆಲ್‌ಫ್ಯೂಗೋ, ಇಂಡೋನೇಷ್ಯ.

© KTBS NOT TO BE REPUBLISHED





ದ್ವೀಪ

**ದ್ವೀಪಗಳ ವಿಧಗಳು :** ದ್ವೀಪಗಳಲ್ಲಿ ಎರಡು ಪ್ರಮುಖ ವಿಧಗಳಿವೆ. ಖಂಡಾಂತರ ದ್ವೀಪಗಳು ಮತ್ತು ಸಾಗರಿಕ ದ್ವೀಪಗಳು, ಖಂಡಾಂತರ ದ್ವೀಪಗಳು ಖಂಡದ ಪ್ರಧಾನ ಭೂಭಾಗದಿಂದ ಪ್ರತ್ಯೇಕಗೊಂಡು ನಿರ್ಮಾಣಗೊಂಡ ದ್ವೀಪಗಳು. ಉದಾ: ಗ್ರೀನ್ಲ್ಯಾಂಡ್, ಐಸ್ಲ್ಯಾಂಡ್ ಇತ್ಯಾದಿ, ಸಾಗರ ದೀಪಗಳು ಬಹುವಾಗಿ ಜ್ವಾಲಾಮುಖಿ ವಸ್ತುಗಳ ಸಂಚಯದಿಂದ ಸಾಗರಗಳ ಮಧ್ಯದಲ್ಲಿ

ನಿರ್ಮಾಣಗೊಂಡವು. ಹೀಗಾಗಿ ಇವುಗಳನ್ನು ಜ್ವಾಲಾಮುಖಿ ದ್ವೀಪಗಳೆಂತಲೂ ಕರೆಯುವರು. ಉದಾ: ಸುಮಾತ್ರ (ಇಂಡೋನೇಷ್ಯ). ಹವಳದ ಹುಳುಗಳಿಂದ ಕಟ್ಟಲ್ಪಟ್ಟ ದಿಣ್ಣೆಗಳನ್ನು 'ಹವಳದ ದ್ವೀಪ'ಗಳೆಂದು ಕರೆಯುವರು. ಉದಾ: ಲಕ್ಷ ದ್ವೀಪ (ಭಾರತ).

ಅಂಡಮಾನ್-ನಿಕೋಬಾರ್ ಹಾಗೂ ಲಕ್ಷದ್ವೀಪಗಳು ಭಾರತದ ಪ್ರಮುಖ ದ್ವೀಪಗಳಾಗಿವೆ. ಕರ್ನಾಟಕದ ತೀರದಲ್ಲಿಯೂ ಕೆಲವು ದ್ವೀಪಗಳಿವೆ. ಉದಾ: ಸೇಂಟ್‌ಮೇರಿ ದ್ವೀಪ (ಕೋಕೊನಟ್ ದ್ವೀಪ) ಇತ್ಯಾದಿ.

**ದ್ವೀಪಗಳ ಮಹತ್ವ:** ದ್ವೀಪಗಳು ಬಹಳ ಅನುಕೂಲವಾದ ವಾಯುಗುಣ ಹೊಂದಿವೆ. ಆಕರ್ಷಣೀಯ ಪ್ರವಾಸಿ ತಾಣಗಳು. ಇಲ್ಲಿ ಮೀನುಗಾರಿಕೆಯು ಜನರ ಪ್ರಮುಖ ವೃತ್ತಿಯಾಗಿದೆ.

## 2. ಪ್ರಪಂಚದ ಪ್ರಮುಖ ಸ್ವಾಭಾವಿಕ ಪ್ರದೇಶಗಳು

**ಅರ್ಥ:** ಒಂದೇ ರೀತಿಯ ಪ್ರಾಕೃತಿಕ ಲಕ್ಷಣಗಳನ್ನು ಹೊಂದಿರುವ ಭಾಗಗಳನ್ನು ಒಟ್ಟುಗೂಡಿಸಿ ಸ್ವಾಭಾವಿಕ ಪ್ರದೇಶಗಳು ಎನ್ನುತ್ತೇವೆ. ಪ್ರತಿಯೊಂದು ಸ್ವಾಭಾವಿಕ ಪ್ರದೇಶವೂ ತನ್ನದೇ ಆದ ಸ್ಪಷ್ಟವಾದ ಗುಣಲಕ್ಷಣಗಳನ್ನು ಹೊಂದಿವೆ. ವಾಯುಗುಣ, ಮೇಲ್ಮೈಲಕ್ಷಣ, ಮಣ್ಣು, ಸಸ್ಯವರ್ಗ, ಪ್ರಾಣಿವರ್ಗ, ಮಾನವನ ವೃತ್ತಿ ಮುಂತಾದವುಗಳು ಅವುಗಳ ಪ್ರಮುಖ ಲಕ್ಷಣಗಳಾಗಿವೆ. ಇವುಗಳ ಒಂದೇ ಪ್ರದೇಶದಲ್ಲಿಯ ವ್ಯತ್ಯಾಸಗಳು ಬೇರೆ ಬೇರೆ ಪ್ರದೇಶಗಳಲ್ಲಿಯ ವ್ಯತ್ಯಾಸಕ್ಕಿಂತ ಕಡಿಮೆಯಾಗಿರುತ್ತವೆ. ಆದರೆ ಅಂತಹ ಪ್ರದೇಶಗಳ ಮಧ್ಯ ಯಾವುದೇ ನಿಖರವಾದ ಮೇರೆ ಇರುವುದಿಲ್ಲ. ಅವುಗಳ ವಿಸ್ತಾರ ಮತ್ತು ಮಿತಿಗಳು ಕೇವಲ ಅಂದಾಜಾಗಿರುತ್ತದೆ.

©KTBS
NOT TO BE REPUBLISHED




*ಪ್ರಪಂಚದ ಪ್ರಮುಖ ಸ್ವಾಭಾವಿಕ ಪ್ರದೇಶಗಳು*

**ಪ್ರಾಮುಖ್ಯ:** ಪ್ರಪಂಚದ ವಿವಿಧ ಭಾಗಗಳ ಸ್ವಾಭಾವಿಕ ಪರಿಸರವನ್ನು ಹೋಲಿಕೆ ಮಾಡಿ ತಿಳಿದುಕೊಳ್ಳುವುದಕ್ಕೆ ಮತ್ತು ಮಾನವನ ಪ್ರತಿಕ್ರಿಯೆ ತಿಳಿಯಲು ಸ್ವಾಭಾವಿಕ ಪ್ರದೇಶಗಳ ಅಧ್ಯಯನವು ಬಹಳ ಉಪಯುಕ್ತ.

**ವಿಧಗಳು:** ಅತ್ಯಂತ ಪ್ರಮುಖ ನಿರ್ಣಾಯಕವಾದ ವಾಯುಗುಣವನ್ನಾಧರಿಸಿ ಭೂಮೇಲ್ಮೈಯನ್ನು ಅನೇಕ ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಪ್ರಮುಖ ಸ್ವಾಭಾವಿಕ ಪ್ರದೇಶಗಳು ಈ ಕೆಳಕಂಡಂತಿವೆ.

1. ಸಮಭಾಜಕ ವೃತ್ತಪ್ರದೇಶಗಳು ಅಥವಾ ಅಮೆಜಾನ್ ಮಾದರಿ.
2. ಉಷ್ಣವಲಯದ ಹುಲ್ಲುಗಾವಲು ಪ್ರದೇಶ ಅಥವಾ ಸುಡಾನ್ ಮಾದರಿ.
3. ಉಷ್ಣವಲಯದ ಮಾನ್ಸೂನ್ ಪ್ರದೇಶಗಳು.
4. ಉಷ್ಣವಲಯದ ಸಾಗರಿಕ ಪ್ರದೇಶಗಳು.
5. ಉಷ್ಣವಲಯದ ಮರುಭೂಮಿ ಪ್ರದೇಶಗಳು ಅಥವಾ ಸಹಾರಾ ಮಾದರಿ.
6. ಸಮಶೀತೋಷ್ಣವಲಯದ ಮರುಭೂಮಿಗಳು.
7. ಮೆಡಿಟರೇನಿಯನ್ ಪ್ರದೇಶಗಳು.
8. ಬೆಚ್ಚಗಿನ ಸಮಶೀತೋಷ್ಣವಲಯದ ಪೂರ್ವ ಅಂಚಿನ ಪ್ರದೇಶಗಳು (ಚೀನಾ ಮಾದರಿ).
9. ತಂಪು ಸಮಶೀತೋಷ್ಣವಲಯದ ಸಾಗರಿಕ ಪ್ರದೇಶಗಳು (ಪ.ಯೂರೋಪ್ ಮಾದರಿ).
10. ಸಮಶೀತೋಷ್ಣವಲಯದ ಹುಲ್ಲುಗಾವಲು ಪ್ರದೇಶಗಳು ಅಥವಾ ಪ್ರೈರಿ ಮಾದರಿ.
11. ತಂಪು ಸಮಶೀತೋಷ್ಣವಲಯದ ಪೂರ್ವ ಕರಾವಳಿ ಪ್ರದೇಶಗಳು (ಸೆಂಟ್ ಲಾರೆನ್ಸ್ ಮಾದರಿ).
12. ಶೀತ ಖಂಡಾಂತರ ಪ್ರದೇಶಗಳು ಅಥವಾ ಟೈಗಾ ಪ್ರದೇಶಗಳು.
13. ಟಂಡ್ರ ಪ್ರದೇಶಗಳು ಅಥವಾ ಶೀತ ಮರುಭೂಮಿ.

©KTBS
NOT TO BE REPUBLISHED

### ಹೊಸ ಪದಗಳು

ಭೂಸ್ವರೂಪ, ಪರ್ವತ, ಬೆಟ್ಟ, ಪ್ರಸ್ಥಭೂಮಿ, ಮೈದಾನ, ಕಣಿವೆ, ಮರುಭೂಮಿ, ದ್ವೀಪ, ಶ್ರೇಣಿ, ಶಿಖರ, ಮಡಿಕೆ ಪರ್ವತಗಳು, ಖಂಡ ಪರ್ವತಗಳು, ಜ್ವಾಲಾಮುಖಿ ಪರ್ವತಗಳು, ಪೀಠಭೂಮಿ, ಖನಿಜ, ಹವಳ, ಸ್ವಾಭಾವಿಕ ಪ್ರದೇಶ, ವಾಯುಗುಣ.

### ನಿಮಗೆ ತಿಳಿದಿರಲಿ

- ಪ್ರಪಂಚದ ಅತಿ ಎತ್ತರವಾದ ಶಿಖರ ಮೌಂಟ್ ಎವರೆಸ್ಟ್.
- ಆಫ್ರಿಕಾದ ಪ್ರಸ್ಥಭೂಮಿಯು ಚಿನ್ನ ಮತ್ತು ವಜ್ರದ ಗಣಿಗಾರಿಕೆಗೆ ಪ್ರಸಿದ್ಧಿಯಾಗಿದೆ.

- ಗಂಗಾ ನದಿ ಮುಖಜಭೂಮಿಯು ಪ್ರಪಂಚದಲ್ಲೇ ದೊಡ್ಡದಾಗಿದ್ದು, ಇದನ್ನು ಸುಂದರವನ ಎಂತಲೂ ಕರೆಯುವರು.
- ಸಮಶೀತೋಷ್ಣವಲಯದ ಹುಲ್ಲುಗಾವಲುಗಳನ್ನು ಆಫ್ರಿಕಾದಲ್ಲಿ ಸ್ಟೈಪ್ಪಿ, ಉತ್ತರ ಅಮೆರಿಕಾದಲ್ಲಿ ಪ್ರೇರೀ, ದಕ್ಷಿಣ ಅಮೆರಿಕಾದಲ್ಲಿ ಪಂಪಾಸ್, ಆಸ್ಟ್ರೇಲಿಯಾದಲ್ಲಿ ಡೌನ್ಸ್ ಹಾಗೂ ದಕ್ಷಿಣ ಆಫ್ರಿಕಾದಲ್ಲಿ ವೆಲ್ಸ್ ಎಂದು ಕರೆಯುವರು.
- ಭಾರತದ ವಾಯವ್ಯ ಭಾಗದಲ್ಲಿ ಉಷ್ಣವಲಯದ ಥಾರ್ ಮರುಭೂಮಿ ಇದೆ.

## ಅಭ್ಯಾಸಗಳು

### ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1 ಭೂಸ್ವರೂಪಗಳೆಂದರೇನು?

2 ಪರ್ವತಗಳೆಂದರೇನು?

3 ಪರ್ವತಶ್ರೇಣಿ ಎಂದರೇನು?

4 ಪ್ರಸ್ಥಭೂಮಿ ಎಂದರೇನು?

5 ಪ್ರಪಂಚದ ಅತಿ ಎತ್ತರವಾದ ಪ್ರಸ್ಥಭೂಮಿ ಯಾವುದು?

6 ಮೈದಾನಗಳೆಂದರೇನು?

7 ಮರುಭೂಮಿ ಎಂದರೇನು?

8 ಭಾರತಕ್ಕೆ ಸೇರಿದ ಯಾವುದಾದರೂ ದ್ವೀಪದ ಹೆಸರು ತಿಳಿಸಿ.

9 ಸ್ವಾಭಾವಿಕ ಪ್ರದೇಶಗಳೆಂದರೇನು?

### ಚಟುವಟಿಕೆಗಳು

1 ವಿವಿಧ ಪ್ರಕಾರದ ಭೂಸ್ವರೂಪಗಳ ಮಾದರಿಗಳನ್ನು ತಯಾರಿಸಿ.

2 ಪ್ರಪಂಚದ ಪ್ರಮುಖ ಪರ್ವತ, ಪ್ರಸ್ಥಭೂಮಿ ಹಾಗೂ ಮೈದಾನಗಳ ಛಾಯಾಚಿತ್ರಗಳನ್ನು ಸಂಗ್ರಹಿಸುವುದು.

3 ಪ್ರಪಂಚದ ನಕಾಶೆಯಲ್ಲಿ ವಿವಿಧ ಖಂಡಗಳಲ್ಲಿ ಕಂಡುಬರುವ ಪ್ರಮುಖ ಪರ್ವತ, ಪ್ರಸ್ಥಭೂಮಿ ಹಾಗೂ ಮೈದಾನಗಳನ್ನು ನಿಮ್ಮ ಗುರುಗಳ ಸಹಾಯದಿಂದ ಗುರುತಿಸುವುದು.

@KTBS NOT TO BE REPUBLISHED